ಸಂಪಾದಕೀಯ...

# ಯಶಸ್ಸಿನ ಮೆಟ್ಟಿಲು..........



ಜೀವನದಲ್ಲಿ ಯಶಸ್ಸು ಆಗಬೇಕು ಎಂದು ಎಲ್ಲರೂ ಹಂಬಲಿಸುತ್ತಾರೆ. ಯಶಸ್ಸಿನ ಬೆನ್ನುಹತ್ತುತ್ತಾರೆ. ಇದು ಮನುಷ್ಯನ ಸಹಜ ಹಂಬಲ. ಆದರೆ ಯಶಸ್ಸು ಯಾರದೋ ಅನುಗ್ರಹದಿಂದ ಪುಕ್ಕಟೆ ದೊರಕುವಂತಹದಲ್ಲ. ಜೀವನದಲ್ಲಿ ತಾನು ಸಾದಿಸಬೇಕಾದ ಗುರಿಯಾವುದು? ಈ ಗುರಿ ತಲುಪಲು ಯಾವ ಮಾರ್ಗ ಅನುಸರಿಸಬೇಕು. ಎಂಬುದನ್ನು ಈ ಮಾರ್ಗದಲ್ಲಿ ಎದುರಾಗುವ ಸಮಸ್ಯೆಗಳನ್ನು ಹೇಗೆ ಬಗೆಹರಿಸಬಹುದು. ಎಂಬುದನ್ನು ತಿಳಿದು ಕೊಳ್ಳುವುದು ಸಹ ಅಷ್ಟೇ ಮಹತ್ವದಾಗಿದೆ. ಮೊಟ್ಟಮೊದಲು ಇದಕ್ಕೆಲ್ಲಾ ಬೇಕಾದುದು ಆತ್ಮ ವಿಶ್ವಾಸ ಆನಂತರ ಗುರಿ ಸಾಧನೆಯ ಮಾರ್ಗದಲ್ಲಿ ಅನುಸರಿಸಬೇಕಾದ ನಿಯಮಗಳು ಅತೀ ಮುಖ್ಯ.

ಯಶಸ್ಸು ನಮ್ಮ ಕಣ್ಣಿಗೆ ಗೋಚರಿಸುವುದಿಲ್ಲ ಅದನ್ನು ನೋಡಲಾಗುವುದಿಲ್ಲ. ಅದರೆ ಅನುಭವಿಸುವುದು ಮಾತ್ರ. ನಮ್ಮ ಯಶಸ್ಸು ಹೇಗಿರಬೇಕೆಂಬುದನ್ನು ಆಂಗ್ಲ ಭಾಷೆಯ ಪದ SMART ವಿವರಿಸುತ್ತದೆ. ಆದೆನೆಂದರೆ specific, mesurable, attainable, realistic and timebound. ಅದುದರಿಂದ ಈ ಯಶಸ್ಸು ನಮ್ಮ ಧೇಯ ಸಾಧಿಸಲು ದಾರಿ ತೋರುತ್ತದೆ. ಅದು ನಮ್ಮ ಜೀವನದ ಉದ್ದೇಶವನ್ನು ಸ್ಪಷ್ಟಪಡಿಸಿ ಧೈರ್ಯದಿಂದ ಮುನ್ನುಗ್ಗುವ ಹಾಗೂ ಸಾಧನೆಯ ಮೈಲ್ಲುಗಲ್ಲನ್ನು ತೋರಿಸುತ್ತದೆ.

ಮಾನವ ಸಾಮಾನ್ಯವಾಗಿ ತಮ್ಮ ಜೀವನದಲ್ಲಿ ಬೇರೆ ಬೇರೆ ರೀತಿಯಲ್ಲಿ ಯಶಸ್ಸನ್ನು ವರ್ಣಿಸುತ್ತಾನೆ. ಮಾತ್ರವಲ್ಲ, ಒಬ್ಬ ವ್ಯಕ್ತಿಗೆ ಈ ಯಶಸ್ಸನ್ನು ವಿವಿಧ ಹಂತದಲ್ಲಿ ವಿವಿದ ರೀತಿಯಲ್ಲಿ ಅರ್ಥವನ್ನು ಕೊಡಬಲ್ಲದು. ಉಧ್ಯೋಗ ಹುಡುಕಾಟದಲ್ಲಿರುವ ನಿರುದ್ಯೋಗಿಗೆ ಉದ್ಯೋಗ ದೊರಕಿದರೆ ಆ ಯಶಸ್ಸು. ಪರೀಕ್ಷೆ ಪ್ರಥಮ ಸ್ಥಾನ ಗಳಿಸುವುದು ಒಬ್ಬ ವಿಧ್ಯಾರ್ಥಿಯ ದೃಷ್ಟಿಯಲ್ಲಿ "ಯಶಸ್ಸು" ಎನಿಸಿಕೊಂಡರೇ ಉತ್ತೀರ್ಣನಾದರೆ ಸಾಕು ಅದೇ ದೊಡ್ಡ ಯಶಸ್ಸು ಎಂದು ಮತ್ತೊಬ್ಬ ವಿಧ್ಯಾರ್ಥಿ ಭಾವಿಸಬಹುದು. ಬಡವನಿಗೆ ಶ್ರೀಮಂತನಾಗುವುದೇ ಯಶಸ್ಸು ಹೊಸ ಅವಿಸ್ಕಾರ ಮಾಡುವುದೇ ವಿಜ್ಞಾನಿಯ ಯಶಸ್ಸು. ಹೆಚ್ಚು ಲಾಭ ಮಾಡುವುದೇ ವ್ಯಾಪಾರಿ/ ಉದ್ಯೇಮಿಯ ಯಶಸ್ಸು. ಮೂಲಭೂತವಾಗಿ ಯಶಸ್ಸಿ ಮೆಟ್ಟಿಲು ಹತ್ತಲು ಹಲವಾರು ದಾರಿಗಳಿವೆ. ಅದು ಒಂದು ಪರಿಕಲ್ಪನೆಯಾಗಿರಬಹುದು ಇಲ್ಲವೇ ಒಂದು ಅನುಭವವಾಗಬಹುದು. ಯಶಸ್ಸಿನ ದಾರಿ ವ್ಯಕ್ತಿಯ ಆಸೆ ಆಕಾಂಕ್ಷೆಗಳನ್ನು, ಕನಸುಗಳನ್ನು ಮತ್ತು ಆಶೋತ್ತರಗಳನ್ನು ವಾಸ್ತವಿಕ ಜೀವನದ ಜೊತೆ ಹೆಣೆಯುವ ಕ್ರಿಯೆ ಯಾಗಿದೆ. 'ನಾರ್ಮನ್ ವಿನ್ಸೆಂಟ್ ಪೀಲ್' ಎಂಬ ಆಂಗ್ಲ ಲೇಖಕ ಹಾಗೂ ವಿಶ್ವ ವಿಖ್ಯಾತ ಮನೋಶಾಸ್ತ್ರಜ್ಞರು ಹೇಳುವಂತೆ *"ಯಶಸ್ಸನ್ನು ಪಡೆಯಲು ಇಚ್ಚಿಸುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದಲ್ಲಿ, ಒಂದು ನಿರ್ದಿಷ್ಟ ಧ್ಯೇಯ ಅಥವಾ ಗುರಿಯನ್ನು ಹೊಂದಿರಬೇಕು"*. ಹೌದು ಧ್ಯೇಯವಿಲ್ಲದ ವ್ಯಕ್ತಿ ಯಶಸ್ಸಿನ ವ್ಯಕ್ತಿಯಾಗಲು ಖಂಡಿತವಾಗಿಯೂ ಸಾಧ್ಯವಿಲ್ಲ.

ಜಗತ್ತು ಕಂಡ ಮಹಾನ್ ವಿಜ್ಞಾನಿಗಳಲ್ಲಿ ಥಾಮಸ್ ಆಳ್ವಾ ಎಡಿಸನ್ ಒಬ್ಬ ಸರ್ವಕಾಲಿಕ ಶ್ರೇಷ್ಟ ವಿಜ್ಞಾನಿ. ಅವನ ವಿದ್ಯುತ್ ಬಲ್ಬ್ ಸಂಶೋದನೆಯಲ್ಲಿ 999 ಸಾರಿ ಅವನು ಸೋಲನ್ನು ಅನುಭವಿಸಿದ. ಜನರೆಲ್ಲ ಅವನನ್ನು ಹುಚ್ಚನೆಂದು ಕರೆದರು. ಆದರೆ ಅವನೊಳಗಿನ ಯಶಸ್ಸಿನ ಧ್ವನಿ ಮಾತ್ರ ಸಕಾರಾತ್ಮಕವಾಗಿ ಅವರನ್ನು ಹುರಿದುಂಬಿಸುತ್ತಿತ್ತು. ತನ್ನ 1000 ದ ಪ್ರಯತ್ನದಲ್ಲಿ ಅವನು ಇಡೀ ಜಗತ್ತನ್ನು ಬೆಳಗಿಸಿ ಬಿಟ್ಟರು. ಈ ಉದಾರಣೆ ಸಾಗರದಲ್ಲಿನ ಸಣ್ಣ ನೀರಿನ ಹನಿಯಂತದ್ದು. ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್ ಸ್ಟೈನ್ ಹೀಗೆನ್ನುತ್ತಾರೆ . " Try not to become a man of success but rather try to become a man of values" 'ಯಶಸ್ಸಿ ವ್ಯಕ್ತಿಯಾಗಲು ಪ್ರಯತ್ನಿಸುವುದಕ್ಕಿಂತ ಒರ್ವ ಮೌಲ್ಯಯುತ ವ್ಯಕ್ತಿಯಾಗು' ಎಂಬುದಾಗಿ. ಎಲ್ಲಾ ಕಾಲದಲ್ಲಿಯೂ ಕಾಣ ಸಿಗುವ ಶ್ರೇಷ್ಟ ವ್ಯಕ್ತಿಗಳು ಯಾವುದಾದರೊಂದು ಸಾಧನೆಯನ್ನು ಗೈದಿದ್ದರು ಎಂದು ಹೇಳುವುದಾದರೆ ಅವರೆಲ್ಲರೂ ಸಜ್ಜನ, ಸದ್ಗುಣಿಗಳು ಯಶಸ್ಸಿನ ಪರಿಪಾಲಕರು ಆಗಿದ್ದರು ಎಂಬ ಸತ್ಯವನ್ನು ನಿರಾಕರಿಸಲಾಗದು.

ಇಂದು ಯಶಸ್ಸಿನ ಧ್ವನಿ ಉತ್ತುಂಗವನ್ನೇರಿ ಖ್ಯಾತಿ ಗಳಿಸಿರುವ ಶ್ರೇಷ್ಟ ವ್ಯಕ್ತಿಗಳೆಲ್ಲರೂ ತಾವು ಬದುಕುವ ಜೀವನವನ್ನು ಪ್ರೀತಿಸುತ್ತಾ, ಪ್ರೀತಿಸುವ ಬದುಕನ್ನು ಜೀವಿಸುತ್ತಾ, ಅನಾವಶ್ಯಕವಾದುದೆಲ್ಲವನ್ನು ವರ್ಜಿಸಿ ಅವಶ್ಯಕವೆನಿಸುವಂತಹ ಕಾರ್ಯಗಳಲ್ಲಿ ಅತ್ಯಂತ ಶ್ರದ್ದೆಯಿಂದ ತಮ್ಮನ್ನು ತಾವೇ ತೊಡಗಿಸಿ ಕೊಂಡವರಾಗಿದ್ದಾರೆ. ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ. ಅದರೆ ಬದಲಾವಣೆ ಮಾತ್ರ ಶಾಶ್ವತ ಎನ್ನುವುದು ಮಹನೀಯರ ಮಾತು. Nothing is permanent except change ಯಶಸ್ಸನ್ನು ಸಾದಿಸಬೇಕಾದರೆ ನಾವು ಬದಲಾಗಬೇಕು. ಒಬ್ಬ ಚಿಂತಕರು ಹೇಳುವಂತೆ " *ನಮ್ಮ ಕೈ ಜಾರಿ ಹೋದ ನಿನ್ನೆಯ ಬಗ್ಗೆ ಅಥವಾ ಇನ್ನು ನಮ್ಮ ಕೈಗೆ ಸಿಗದ ನಾಳೆ ಬಗ್ಗೆ ಚಿಂತಿಸದೆ, ನಮ್ಮ ಕೈಯಲ್ಲಿ ಇರುವ ವರ್ತನಮಾನವನ್ನು ರಚನಾತ್ಮಕಾಗಿ ಸದ್ವಿನಿಯೋಗ ಮಾಡಿಕೊಳ್ಳುವುದರಲ್ಲೇ ಜೀವನದ ಯಶಸ್ವಿನ ಗುಟ್ಟು ಅಡಗಿದೆ*".


ಇಂತಹ ಮಾದರಿಯ ಕೆಲಸದಲ್ಲಿ ತೊಡಗಿದ ವಿಮುಕ್ತಿ ಸಂಸ್ಥೆ ಮಕ್ಕಳ ಅಭ್ಯುದಯಕ್ಕಾಗಿ ಧ್ವನಿ ಎತ್ತುತ್ತಾ ಅವರಲ್ಲಿ ಹುದುಗಿದ್ದ ಅನರ್ಘ್ಯ ಮುತ್ತುಗಳನ್ನು ಹೊರತೆಗೆದು ಬದಲಾಗುತ್ತಿರುವ ಇಂದಿನ ಸಾಮಾಜಿಕ ಧಾರ್ಮಿಕ ಶೈಕ್ಷಣಿಕ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬರುವಲ್ಲಿ ಹೆಚ್ಚು ಕಾಳಜಿವಹಿಸಿಕೊಂಡು ಬಂದಿದೆ. ಅದರ ಜೊತೆಗೆ ಮಕ್ಕಳಲ್ಲಿ ಪರಿಪೂರ್ಣವಾಗಿ ರೂಪಿಸಬಲ್ಲ, ಸಚ್ಚಾರಿತ್ರ್ಯವನ್ನು ಬೆಳಗಿಸಬಲ್ಲ. ಶಿಸ್ತು ಸಂಯಮ, ತ್ಯಾಗ, ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸಿ ಅವರಲ್ಲಿದ್ದ ಪ್ರತಿಭೆಗೆ ಸುಂದರ ರೂಪ ನೀಡುವ ಪ್ರಯತ್ನವೇ ಈ ವಿಮುಕ್ತಿ ಮಕ್ಕಳ ದ್ವನಿಯ ಗುರಿ.

ಈ ದಿಸೆಯಲ್ಲಿ ಈಸಂಚಿಕೆ ಸುಗಮವಾಗಿ ಹೊರಬರಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

**"ವ್ಯಕ್ತಿತ್ವ ಗಳಿಸಿ, ವ್ಯಕ್ತಿತ್ವ ವೃದ್ಧಿಸಿ 0ಯಶಸ್ವಿ0ಯಾಗಿ ಸುಖ ಸಮೃದ್ಧಿ ಪಡೆಯಿರಿ"..............**

ವಂ, ಫಾ!! ಸತೀಸ್ ಫೆರ್ನಾಂಡಿಸ್
ನಿರ್ದೇಶಕರು ವಿಮುಕ್ತಿ ಸಂಸ್ಥೆ ಪೋತ್ನಾಳ್

***ಆತ್ಮ ವಿಶ್ವಾಸವೇ ಯಶಸ್ಸಿನ ಹಾದಿಯ ಮೊದಲ ಮೆಟ್ಟಲು– ಎಮರ್ಸನ್***




- ❖ **Total 14 Villages**
- ❖ **Total Children 1250, Clubs 30, Regional Club 4**

**&**

**Children Parliaments 10**

# ಬದಲಾಗುತ್ತಿರುವ ವಿಶ್ವದಲ್ಲಿ ಮಾನವ ಹಕ್ಕುಗಳು

ಜಾಗರೀಕರಣವು ಇಂದು ವಿಶ್ವದಲ್ಲಿ ಅನೇಕ ರೀತಿಯ ಬದಲಾವಣೆಗಳಿಗೆ ಕಾರಣವಾಗಿರುವುದು ಹಾಗೂ ಹೊಸ ಹೊಸ ಪರಿಕಲ್ಪನೆಗಳ ಉಗಮಕ್ಕೆ ನಾಂದಿ ಕಲ್ಪಿಸಿದೆ. ಮಾನವ ಹಕ್ಕುಗಳ ಕ್ಷೇತ್ರದಲ್ಲಿಯೂ ಬದಲಾವಣೆಗಳನ್ನು ಕಾಣಬಹುದು. ಅವುಗಳಲ್ಲಿ ಪ್ರಮುಖ ಹಕ್ಕುಗಳಲ್ಲಿ ಈ ಕೆಳಗಿನವುಗಳನ್ನು ಹೆಸರಿಸಬಹುದು. 1. ಮಾರುಕಟ್ಟೆಯ ಹಕ್ಕು. 2. ಸಾಂಸ್ಕೃತಿಕ ಹಕ್ಕು 3. ಬಹುರಾಷ್ಟ್ರೀಯ ಹಕ್ಕು. 4. ಜ್ಞಾನದ ಹಕ್ಕು ಇತ್ಯಾದಿ.




ಜ್ಞಾನದ ಹಕ್ಕು(Right to knowledge): ಜ್ಞಾನ ಎಂಬುವುದು ಯಾರೊಬ್ಬರ ಅಥವಾ ಒಂದು ವರ್ಗದ ಹಕ್ಕಲ್ಲ. ಇದು ಯಾರು ಎಷ್ಟು ಯಾವ ಜ್ಞಾನವನ್ನಾದರೂ ಸಹ ಪಡೆದುಕೊಳ್ಳುವಂತ ಹಕ್ಕನ್ನು ಪಡೆದಿರುವನು. ಹಿಂದೆ ಹೆಚ್ಚು ಹೆಚ್ಚು ಜ್ಞಾನ ಪಡೆಯಬೇಕೆಂದರೂ ಸಹ ಅವಕಾಶ ಹಾಗೂ ವೈಶಾಲ್ಯತೆ ಇರಲಿಲ್ಲ. ಕೆಲವು ನಿಬಂಧನೆಗಳು ಹಾಗೂ ಬಾಧ್ಯತೆಗೆ ಒಳಪಟ್ಟ ಪಡೆಯುವಂತಹವುದಾಗಿತ್ತು. ಆದರೆ ಇಂದಿನ ಜಾಗತೀಕರಣ ಯುಗದಲ್ಲಿ ಯಾವ ರೀತಿಯ ಜ್ಞಾನವನ್ನಾದರೂ ಎಲ್ಲಿ ಬೇಕಾದರೂ ಪಡೆಯುವಂತಹ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ವ್ಯಕ್ತಿ ಪಡೆಯುವನು. ಅದರಲ್ಲೂ ಇಂದಿನ ಕಂಪ್ಯೂಟರ್ ಯುಗದಲ್ಲಿ ಕುಳಿತಲ್ಲಿಂದಲೇ ವಿಶ್ವದಲ್ಲಿನ ಯಾವುದೇ ರಾಷ್ಟ್ರದ ಯಾವುದೇ ಭಾಗದಲ್ಲಿನ ವಿವರಗಳನ್ನು ಪಡೆದುಕೊಳ್ಳುವ ಅವಕಾಶವನ್ನು ಹೊಂದಿರುವನು. ಇದರಿಂದಾಗಿ ಜ್ಞಾನ ಎಂಬುವುದು ಯಾರೊಬ್ಬರ ಅಥವಾ ಯಾವುದೇ ರಾಷ್ಟ್ರದ ಅಥವಾ ಯಾವುದೇ ಜನಾಂಗದ ಸ್ವತ್ತಲ್ಲ. ಅದು ಪ್ರತಿಯೊಬ್ಬನೂ ತನಗಿಷ್ಟ ಬಂದಂತಹ ಜ್ಞಾನವನ್ನು ಪಡೆಯುವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪಡೆದುಕೊಂಡಿರುವನು. ಇದು ಹಕ್ಕುಗಳಿಗೆ ಪ್ರೋತ್ಸಾಹದಾಯಕವಾದಂತಹ ಅಂಶವಾಗಿದ್ದು, ಜ್ಞಾನದ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಪ್ರೋತ್ಸಾಹದಾಯಕವಾಗಿದೆ.

ಇಂದಿನ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಕ್ಕಿಗಾಗಿ ಹೋರಾಡಿ ಅದನ್ನು ಗಳಿಸಿಕೊಳ್ಳಲು ಸತತ ಪ್ರಯತ್ನಿಸುತ್ತಾ ಇದ್ದಾನೆ. ಇದನ್ನು ಸ್ಪಂದಿಸುವಲ್ಲಿ ಪ್ರಪಂಚದ ಎಲ್ಲಾ ಅಧಿಕಾರಿ ವರ್ಗಗಳು ಮುಂದೆ ಬಂದಿರುತ್ತವೆ. ಅದರಲ್ಲಿ ಬಹು ಮುಖ್ಯವಾದ ಸಂಯುಕ್ತ ರಾಷ್ಟ್ರಗಳ ಮಾನವ ಹಕ್ಕುಗಳ ವಿಧೇಯಕ ಪತ್ರಗಳೊಂದಿಗೆ ಶೈಕ್ಷಣಿಕ ಹಕ್ಕು ಮಾನ್ಯತೆಯನ್ನು ಪಡೆದಿರುತ್ತದೆ.

ಶಿಕ್ಷಣದ ಹಕ್ಕನ್ನು ಪ್ರತಿಯೊಬ್ಬನೂ ಅನುಭವಿಸುವುದು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (Universal Deciaration) ಮತ್ತು ಅರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಬಗ್ಗೆ ಅಂತರ ರಾಷ್ಟ್ರೀಯ ಒಡಂಬಡಿಕೆಗಳಲ್ಲಿ (Charctors) ಪ್ರಮುಖವಾಗಿ ಮಂಡಿಸಲಾಗಿದೆ. ಮಾನವನ ಹಕ್ಕುಗಳು ಸಾರ್ವತ್ರಿಕ ಘೋಷಣೆಯ ಅನುಚ್ಛೇದ 26, ಈ ರೀತಿ ಹೇಳುತ್ತದೆ. "ಪ್ರಾಥಮಿಕ ಶಿಕ್ಷಣವು ಲಭ್ಯವಾಗಿರತಕ್ಕದು ಮತ್ತು ಉಚ್ಚ ಶಿಕ್ಷಣವು ಯೋಗ್ಯತೆಯ ಆಕಾರದ ಮೇಲೆ ಎಲ್ಲರಿಗೂ ಮತ್ತು ಶಿಕ್ಷಣದ ಉದ್ದೇಶವು ಈ ಕೆಳಗಿನವು ಆಗಿರತಕ್ಕದ್ದು.

1. ಶಿಕ್ಷಣವು ಮಾನವನ ವ್ಯಕ್ತಿತ್ವದ ಪೂರ್ಣವಿಕಾಸ ಹೊಂದಲು ಸಹಾಯವಾಗುತ್ತದೆ.

2. ಶಿಕ್ಷಣವು ಮಾನವ ಹಕ್ಕಿಗೆ ಹಾಗೂ ಮೂಲಭೂತ ಸ್ವಾತಂತ್ರ್ಯಗಳಿಗೆ (Fundamental Rights) ಗೌರವವನ್ನು ಬಲಪಡಿಸುತ್ತದೆ. 3. ಒಂದು ಮುಕ್ತಿ ಸಮಾಜದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಎಲ್ಲಾ ವ್ಯಕ್ತಿಗಳನ್ನು ಸಮರ್ಥಗೊಳಿಸುತ್ತದೆ. 4. ಶಾಂತಿ ರಕ್ಷಣೆಗಾಗಿ ಸಂಯುಕ್ತ ರಾಷ್ಟ್ರಗಳ ಕಾರ್ಯಕಲಾಪಗಳನ್ನು ವಿಕಸಿತಗೊಳಿಸುತ್ತದೆ.

ಹೀಗೆ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಪರಿಗಣಿಸಿ ಅದನ್ನು ಗಳಿಸಿದ ನಂತರ ಈ ಶಿಕ್ಷಣದ ಜ್ಞಾನವನ್ನು ಉಪಯೋಗಿಸುವುದರ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯೂ ಮೂಲಭೂತ ಕರ್ತವ್ಯಗಳನ್ನು ಸಹ ಹೊಂದಿರುತ್ತಾನೆ. " ಹಕ್ಕು ಮತ್ತು ಅ ಕರ್ತವ್ಯ" ಗಳು ಒಂದೇ ನಾಣ್ಯದ ಎರಡು ಮುಖಗಳು ಎಂದು ಪ್ರತಿಯೊಬ್ಬರೂ ಬಲ್ಲವರಾಗಿದ್ದೇವೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ಬುದ್ಧಿ ಜೀವಿಗಳು ತಮ್ಮ ಜ್ಞಾನವನ್ನು ಹೇಗೆ ಸಫಲ ಪಡಿಸುತ್ತಾರೆ? ಪ್ರತಿಯೊಬ್ಬ ಬುದ್ಧಿ ಜೀವಿಯು ಸಹ ತನ್ನ



ವೃತ್ತಿ ಧರ್ಮವನ್ನು (Professional Ethics) ತನ್ನ ಆತ್ಮ ಸಾಕ್ಷಿಯಾಗಿ ಸಮಾಜಕ್ಕೆ ತಲುಪಿಸಲು ಪ್ರಯತ್ನಿಸುತ್ತಾನೆಯೇ? ಅಥವಾ ತನ್ನ ಸ್ವಾರ್ಥಕ್ಕೆ ಹೆಚ್ಚಾಗಿ ವಿನಿಯೋಗಿಸುತ್ತಾನೆಯೇ ಎಂಬುವುದು "ಯಕ್ಷ ಪ್ರಶ್ನೆ" ಯಾಗಿದೆ. ಬುದ್ಧಿ ಜೀವಿಗಳು ಆಜ್ಞೆಗಳನ್ನು ಅಂಗೀಕರಿಸುವರು ಆದರೆ ಹರಟೆ, ಕೋರ, ಹುಚ್ಚರು, ನೆಲಕಚ್ಚುವರು ಎಂಬುವುದನ್ನು ಅರಿತು ನಡೆದ ವ್ಯಕ್ತಿಯು ತಾನು ಗಳಿಸುವ ಜ್ಞಾನಕ್ಕೆ ಬೆಲೆ ಬರುತ್ತದೆ. ಇಂದಿನ ಪ್ರತಿಯೊಂದು ಕ್ಷೇತ್ರದಲ್ಲೂ ಅಂದರೆ ವೈದ್ಯಕೀಯ, ಕಾನೂನು, ತಾಂತ್ರಿಕ, ಶೈಕ್ಷಣಿಕ, ಆಧ್ಯಾತ್ಮಿಕ, ರಾಜಕೀಯ ಇತ್ಯಾದಿಗಳಲ್ಲಿ ದುಡಿಯುವವರು ತಮ್ಮ ಜ್ಞಾನದ ಬಳಕೆಯನ್ನು ಹೇಗೆ ಮಾಡುತ್ತಾರೆ? ಜ್ಞಾನವನ್ನು ಪಡೆಯುವುದು ನಮ್ಮ ಮೂಲಭೂತ ಹಕ್ಕು ಅದರೂ ಅದನ್ನು ಗಳಿಸುವ ಮತ್ತು ಉಪಯೋಗಿಸುವ ಉದ್ದೇಶವು ಏನಾಗಿರಬೇಕು? ಪ್ರತಿಯೊಬ್ಬ ವ್ಯಕ್ತಿಯೂ ತಾನೂ ಗಳಿಸಿರುವ ಆಸ್ತಿ ಪಾಸ್ತಿಗಳಿಗಿಂತ ಅತೀ ಅಮೂಲ್ಯವಾದ ಜ್ಞಾನವನ್ನು ಪಡೆದುಕೊಂಡ ನಂತರ ಅದನ್ನು ಸಮರ್ಪಕವಾಗಿ ಉಪಯೋಗ ಪಡಿಸದಿದ್ದರೆ ಅದು ವ್ಯರ್ಥವೇ ಸರಿ. ಮಾನವನು ಸಮಾಜದಲ್ಲಿ ಜೀವಿಸುತ್ತಾ ಸಮಾಜದಿಂದಲೇ ಪಡೆದುಕೊಂಡ ಎಲ್ಲಾ ಸೌಲಭ್ಯಗಳನ್ನು ಪುನ: ಸಮಾಜಕ್ಕೆ ಹಿಂತಿರುಗಿಸುವ ಕೊಡುಗೆ ಏನಾಗಿರತಕ್ಕದ್ದು? ಪ್ರತಿಯೊಬ್ಬರೂ ತಾವು ಯಾವ ಕ್ಷೇತ್ರದಲ್ಲಿ ಜ್ಞಾನವನ್ನು ಹೊಂದಿರುವರೋ ಆ ಕ್ಷೇತ್ರದಲ್ಲಿಯೇ ಅದನ್ನು ನ್ಯಾಯ ಅನ್ಯಾಯಗಳನ್ನು ಅರಿತುಕೊಂಡು ತನ್ನ ಆತ್ಮ ಸಾಕ್ಷಿಯಾಗಿ ಉಪಯೋಗಿಸಿದರೆ ಸಮಾಜ, ರಾಜ್ಯ, ರಾಷ್ಟ್ರಗಳ ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ. ಸಮಾಜದಿಂದಲೇ ಕೊಡಲ್ಪಟ್ಟಾ ಮೂಲಭೂತ ಹಕ್ಕನ್ನು ಪುನ: ಸಮಾಜಕ್ಕೆ ಹಿಂತಿರುಗಿಸುವುದರಿಂದ ತನ್ನ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಸಂಶಯವಿಲ್ಲ.

**ಶ್ರೀಮತಿ ಕಮಲ ಪೀಟರ್, ಅಡ್ವಕೇಟ್**
**ಮೈಸೂರು.**

# ಕನ್ನಡದಲ್ಲಿ ಮೊದಲು

1. ಜ್ಞಾನ ಪೀಠ ಪುರುಸ್ಕೃತ ಮೊದಲ ಕನ್ನಡಿಗ – ಕುವೆಂಪು
2. ಕನ್ನಡದ ಮೊದಲ ಶಾಸನ– ಹಲ್ಮಿಡಿ ಶಾಸನ
3. ಕನ್ನಡದ ಮೊದಲ ಗ್ರಂಥ– ಕವಿರಾಜ್ಯ ಮಾರ್ಗ
4. ಕನ್ನಡದ ಮೊದಲ ಗದ್ಯ ಗ್ರಂಥ– ವಡ್ಡಾರಾದನೆ
5. ಕನ್ನಡದ ಮೊದಲ ಕಾವ್ಯ– ಅದಿಪುರಾಣ
6. ಕನ್ನಡದ ಮೊದಲ ವ್ಯಾಕರಣ– ಶಬ್ದಮಣಿದರ್ಪಣ
7. ಕನ್ನಡದ ಮೊದಲ ನಾಟಕ ಕೃತಿ – ವಿತ್ರಾವಿಂದಾ ಗೋವಿಂದ
8. ಹೊಸಗನ್ನಡದ ಮೊದಲ ವ್ಯಾಕರಣ– ಮಧ್ಯಮ ವ್ಯಾಕರಣ
9. ಕನ್ನಡದ ಮೊದಲ ಕಾದಂಬರಿ– ಇಂದಿರಾಬಾಯಿ
10. ಕನ್ನಡದ ಆದಿಕವಿ– ಪಂಪ
11. ಕನ್ನಡದ ಮೊದಲ ಕವಯಿತ್ರಿ– ಅಕ್ಕಮಹಾದೇವಿ
12. ಕನ್ನಡದ ಮೊದಲ ಮಹಮ್ಮದಿಯ ಕವಿ– ಸಂತ ಶಿಶುನಾಳ ಶರೀಫ್
13. ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷ– ಜಯದೇವಿ ತಾಯಿ ಲಿಗಾಡೆ
14. ಪದ್ಮಶ್ರೀ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ– ಜಿ.ಬಿ. ಜೋಷಿ
15. ಕನ್ನಡದ ಮೊದಲ ರಾಷ್ಟ್ರಕವಿ– ಮಂಜೇಶ್ವರ ಗೋವಿಂದ ಪೈ
16. ಮೊದಲ ಕರ್ನಾಟಕ ರತ್ನ ಪ್ರಶಸ್ತಿ ಪುರಸ್ಕೃತ– ಕುವೆಂಪು

**ಸಂಗ್ರಹ:– ಮುತ್ತಣ್ಣ ತಂ. ಶ್ಯಾಮಣ್ಣ**
**7 ನೇತರಗತಿ ಮರಕಂದಿನ್ನಿ.**

# ಶಿಕ್ಷಕರು

ಶಿಕ್ಷಕ, ಉಪಾಧ್ಯಾಯ, ಗುರು, ಆಚಾರ್ಯ, ಬೋಧಕ, ಹಾಗೂ ಮೇಷ್ಟ್ರು ಎಂಬ ಪರ್ಯಾಯ ಪದಗಳುಂಟು. ಆಂಗ್ಲ ಭಾಷೆಯಲ್ಲಿ ಶಿಕ್ಷಕ ಎಂಬ ಪದಕ್ಕೆ Teacherಎಂದು ಕರೆಯುತ್ತಾರೆ. Teacher ವಿಸ್ತರಿಸಿದಾಗ




T-Truthful
E- Energy
A- Alertness
C- Character
H- Honesty
E- Efficiency
R- Rational

ಸತ್ಯ ಸಾಮರ್ಥ್ಯ, ಜಾಗರೂಕತೆ, ಪಾವಿತ್ರ್ಯತೆ, ಪ್ರಾಮಾಣಿಕತೆ, ಸ್ಪಷ್ಟತೆ, ದಕ್ಷತೆ, ವಿವೇಚನೆ ಮುಂತಾದ ಗುಣಗಳನ್ನು ಹೊಂದಿರುವ ಶಿಕ್ಷಕರೇ ಆದರ್ಶ ಶಿಕ್ಷಕರು.

**ಎನ್. ದೇವರಾಜ್ 7 ನೇ ತರಗತಿ ದೇವಿಪುರ**

## ವಿದ್ಯಾರ್ಥಿಗಳಿಗೆ ಕಲಿಯಬೇಕಾದ 5 C ಗಳು

**character** ———ವ್ಯಕ್ತಿತ್ವ
**coreonitroinl l-** ಬದ್ಧತೆ
**conviction-** ಮನವರಿಕೆ
**courtesy-** ಸೌಜನ್ಯ
**courage-** ಎದೆಗಾರಿಕೆ



**ಸುಷ್ಮಾ 6 ನೇ ತರಗತಿ ದೋತರಬಂಡಿ**




ಹಾಸ್ಯ ಗುಣವಿಲ್ಲದ ಮನುಷ್ಯನ ಬದುಕು ಹೊರಲಾರದ ಬಾರಿ ತೂಕದ ಬಾಳುವೆ ಎನಿಸುತ್ತದೆ.

# ಸ್ವ-ಇಚ್ಛಾದಾನ ರಕ್ತದಾನ.......

"ಜೀವನ" ಮಾನವನಿಗೆ ದೇವರಿಂದ ಲಭಿಸಿದ ಅದ್ವಿತೀಯ ದಾನ. ರಕ್ತ ದಾನವು ಅದರಲ್ಲಿ ಮಹಾದಾನ. ಪ್ರಪಂಚದಲ್ಲಿ ನಾನಾ ದಾನಗಳುಂಟು. ಆದರೆ ರಕ್ತ ದಾನ ಸರ್ವದಾನಕ್ಕೂ ಪ್ರಥಮ. ಕಾರಣ, ರಕ್ತವು ದೈವದತ್ತವಾಗಿ ಪ್ರತಿ ಮಾನವನಿಗೂ ಒದಗಿರುವ ಅಂಶವಾಗಿದ್ದು ಒಂದು ಜೀವ ಉಳಿಸುವ ನಿಧಿಯಾಗಿದೆ. ಆ ನಿಧಿಯನ್ನು ನಾವೆಲ್ಲರೂ ಅಗತ್ಯವಿದ್ದರೆ ದಾನವಾಗಿ ನೀಡುವುದರಿಂದ ಒಬ್ಬರ ಪ್ರಾಣ ಉಳಿಸುವ ಪುಣ್ಯ ನಮಗಾಗುತ್ತದೆ. ಯಾವುದೇ ಭೇದವಿಲ್ಲದೆ ಎಲ್ಲರೂ ಎಲ್ಲರಿಗೂ ನೀಡಬಹುದಾದ ದಾನ ರಕ್ತದಾನ. ಯಾವುದೇ ವ್ಯಕ್ತಿ ಇನ್ನೊಬ್ಬರ ಜೀವ ಉಳಿಸಲು ತನ್ನ ರಕ್ತವನ್ನು ಸ್ವಯಂ ಪ್ರೇರಿತನಾಗಿ ಯಾವುದೇ ಪ್ರತಿಫಲ ಆಪೇಕ್ಷಯಿಲ್ಲದೆ, ಕೊಡುವುದಕ್ಕೆ ರಕ್ತದಾನ ಎನ್ನುತ್ತಾರೆ.

ರಕ್ತಕ್ಕೆ ಸರ್ವಕಾಲಕ್ಕೂ, ನಿರಂತರ ಬೇಡಿಕೆ ಇದೆ. ಯಾಕೆಂದರೆ ಅಪಘಾತಗಳಲ್ಲಿ, ತುರ್ತು ಶಸ್ತ್ರ ಚಿಕಿತ್ಸಾ ಸಂದಂರ್ಭಗಳಲ್ಲಿ ರಕ್ತದಾನ ಅತೀ ಮುಖ್ಯವಾದುದು. ಇದರ ಜೊತೆಯಲ್ಲಿ ಕ್ಯಾನ್ಸರ್ ರೋಗಿಗಳು, ಗರ್ಭಿಣಿ ಸ್ತ್ರೀಯರು, ನವಜಾತಶಿಶುಗಳು, ಥ್ಯಾಲಸೀಮಿಯ, ಇಮೋಫಿಲಿಯಾ ಮುಂತಾದ ರೋಗಿಗಳು ರಕ್ತದಾನವನ್ನೇ ಅವಲಂಬಿಸುತ್ತಾರೆ. ನಮ್ಮ ರಾಜ್ಯದಲ್ಲಿ ಒಂದು ದಿನಕ್ಕೆ ಅಂದಾಜು 800 ರಿಂದ 1100 ಯುನಿಟ್‌ಗಳಷ್ಟು ರಕ್ತದ ಬೇಡಿಕೆ ಇದೆ. ಆದರೆ ಶೇ 80 ರಕ್ತ ಮಾತ್ರ ಪೂರೈಕೆಯಾಗುತ್ತಿದೆ. ಅದುದರಿಂದ ತುರ್ತು ಸಂದರ್ಭಗಳಲ್ಲಿ ಜನರ ಜೀವ ಉಳಿಸಲು ರಕ್ತದಾನಕ್ಕೆ ಮುಂದಾಗಬೇಕು. ರಕ್ತ ಎಂಬುವುದು ದ್ರವರೂಪಗಳಲ್ಲಿದ್ದು ದೇಹದ ಮೂಲೆ ಮೂಲೆಗಳಲ್ಲಿ ಹರಿದಾಡುತ್ತದೆ. ರಕ್ತ ಎಂಬುವುದು ಕೆಂಪು ನೀರಲ್ಲ. ಅದರೊಳಗೆ ನೀರು, ಪ್ರೋಟೀನ್ ಹಾಗೂ ಜೀವಕೋಶಗಳಿರುವವು. ಕೆಂಪು ಬಣ್ಣದ ಜೀವಕೋಶಗಳಿಗೆ ಕೆಂಪು ರಕ್ತ ಕಣಗಳೆನ್ನುತ್ತಾರೆ. ಕೆಂಪು ಬಣ್ಣವಿಲ್ಲದ ಜೀವಕೋಶಗಳು ರಕ್ತ ದೊಳಗೆ ಕೆಂಪು ಬಣ್ಣದ ಗೋಲಕ್ಕೆ ಅಥವಾ ಜೀವ ಕಣಗಳು ಹೆಚ್ಚಿಗೆ ಇರುವುದರಿಂದ ಅದಕ್ಕೆ ಕೆಂಪು ಬಣ್ಣದಿಂದ ಕೂಡಿರುತ್ತದೆ.



### ರಕ್ತದ ಮಹತ್ವವೇನು?

ರಕ್ತವನ್ನು ಬದಲಾಯಿಸಲು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ. ರಕ್ತವನ್ನು ಮನುಷ್ಯನು ಸ್ವಇಚ್ಛೆಯಿಂದ ಪಡೆಯಬೇಕು. ರಕ್ತದಾನ ಮಾಡುವುದು ಪ್ರತಿ ಆರೋಗ್ಯವಂತ ವ್ಯಕ್ತಿಯ ಕರ್ತವ್ಯ ಎಂದು ಭಾವಿಸಿ ಆಗಾಗ ರಕ್ತದಾನ ಮಾಡಿದಲ್ಲಿ ಮಾತ್ರ ರೋಗಗ್ರಸ್ಥರನ್ನು ಹಾಗೂ ಗಾಯಗೊಂಡವರನ್ನು ಬದುಕಿಸಲು ಸಾಧ್ಯವಾಗುತ್ತದೆ. ರಕ್ತ ದಾನಮಾಡಿದ ಕೆಲವೇ ಕ್ಷಣಗಳಲ್ಲಿ ದಾನಿಯ ದೇಹದಲ್ಲಿ ರಕ್ತದ ಉತ್ಪತ್ತಿ ಪ್ರಾರಂಭವಾಗಿ 24 ಗಂಟೆಯ ಒಳಗಾಗಿ ದಾನ ಮಾಡಿದ ಪ್ರಮಾಣ ರಕ್ತದೇಹದಲ್ಲಿ ಪುನ: ಉತ್ಪತ್ತಿಯಾಗುತ್ತದೆ. ಒಂದೆರಡು ವಾರಗಳಲ್ಲಿ ರಕ್ತದ ಎಲ್ಲಾ ಅಂಶಗಳು ದಾನಿಯ ರಕ್ತದಲ್ಲಿ ಸಂಪೂರ್ಣವಾಗಿ ತುಂಬಿಕೊಳ್ಳುತ್ತದೆ.



### ಯಾರು ದಾನ ಮಾಡಬಹುದು?

ಹೆಣ್ಣು ಗಂಡೆಂಬ ಭೇದವಿಲ್ಲದೆ 18 ರಿಂದ 60 ವರ್ಷಗಳ ಒಳಗೆ ಇರುವ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದು. ಗಂಡಸರು 3 ತಿಂಗಳಿಗೊಮ್ಮೆ, ಹೆಂಗಸರು 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ಆದರೆ 40 ರಿಂದ 45 ಕೆ.ಜಿ ತೂಕ ಹೊಂದಿದ್ದು ಯಾವುದೇ ರೋಗರುಜಿನದಿಂದ ಬಳಲುತ್ತಿರಬಾರದು. ಅಂದರೆ ಅನಿಮಿಯ/ ಎಚ್.ಐ.ವಿ./ ಹೆಪಿಟೈಟಿಸ್/ ಕಿಡ್ನಿ ಸಮಸ್ಯೆ/ ಹೈಪರ್ ಟೆನ್ಸನ್/ ಮಲೇರಿಯಾ/ ಸಿಪಿಲೀಸ್ ಇತ್ಯಾದಿ, ದಾನಿಯ ರಕ್ತದ ಹಿಮೋಗ್ಲೊಬಿನ ಪ್ರಮಾನ ಕನಿಷ್ಟ 12 ಗ್ರಾಂ. ಗಳಷ್ಟಾದರೂ ಇರಬೇಕು. ದಾನಿಗೆ ಯಾವುದೇ ಸೋಂಕು ರೋಗ ಅಧಿಕ ರಕ್ತ ಒತ್ತಡ (ಬಿ.ಪಿ) ಇರಬಾರದು.

ಯೋಚಿಸಿ ರಕ್ತ ದಾನ ಮಾಡುವುದಾದರೆ, ಸರಕಾರಿ ಆಸ್ಪತ್ರೆ ಅಥವಾ ಸ್ವಯಂ ಸೇವಾ ಸಂಸ್ಥೆಯವರು ನಡೆಸುವ ಒಳ್ಳೆಯ ಹೆಸರು ಮಾಡಿದ ರಕ್ತಬ್ಯಾಂಕುಗಳಲ್ಲಿ ಮಾಡಿ, ನಾವೆಲ್ಲರೂ ಇನ್ನು ಮುಂದಾದರೂ ರಕ್ತ ದಾನ ಮಾಡಲು ಮುಂದಾಗಿ ನಮ್ಮ ಈ ಪ್ರಾಪಂಚಿಕ ಜೀವನದಲ್ಲಿ ಒಬ್ಬರ ಪ್ರಾಣ ಉಳಿಸುವ ಜವಾಬ್ದಾರಿ ನಮ್ಮದಾಗಲಿ. ವಿಮುಕ್ತಿ ರಕ್ತ ಭಂಡಾರ ಇದಕ್ಕೆ ಆಸಕ್ತಿ ಉಳ್ಳವರು ತಮ್ಮ ಹೆಸರನ್ನು ನೋಂದಾಯಿಸಿ ಈ ಗ್ರಾಮೀಣ ಪ್ರದೇಶದ ಬಡ ಜನರಿಗೆ ಜೀವ ಉಳಿಸಲು ರಕ್ತದಾನ ಮಾಡಿ ಸಹಕರಿಸಲು ಮುಂದಾಗೋಣ. ಅದುದರಿಂದ ರಕ್ತದಾನ ಶ್ರೇಷ್ಟ ದಾನ ಇದಕ್ಕೆ ಮಿಗಿಲಾದ ದಾನವಿಲ್ಲ.

**ಕುಮಾರಿ ಮಮತಾ ವಿಮುಕ್ತಿ ಸಿಬ್ಬಂದಿ, ಪೋತ್ನಾಳ್.**



*ಕಷ್ಟವಿಲ್ಲದೆ ಯಶಸ್ಸು ಇಲ್ಲ. ಪ್ರಯತ್ನವಿಲ್ಲದೆ ಸಾಧನೆಯಿಲ್ಲ.- ಖೇನ್*

# ಪರಿಸರ ವೈವಿಧ್ಯತೆ

## ನೈಸರ್ಗಿಕ ಪರಿಸರ



ಅರಣ್ಯ, ನದಿ, ಸರೋವರ, ಸಮುದ್ರ, ಪರ್ವತ, ಬೆಟ್ಟ ಇವೆಲ್ಲವೂ ಪರಿಸರದಲ್ಲಿ ಬರುತ್ತವೆ.

ಅರಣ್ಯ:- ಹೆಚ್ಚಿನ ರೀತಿಯಲ್ಲಿ ಗಿಡಮರಗಳು ಕಂಡುಬರುವ ಸ್ಥಳ ಅಥವಾ ಪ್ರದೇಶಕ್ಕೆ ಅರಣ್ಯ ಅಥವಾ ಕಾಡು ಎಂದು ಕರೆಯುತ್ತಾರೆ. ಇದರಲ್ಲಿ ಪ್ರಾಣಿ ಪಕ್ಷಿಗಳು, ಹಣ್ಣು ಹಂಪಲುಗಳು, ಬಳ್ಳಿಗಳು ಕಂಡುಬರುತ್ತವೆ. ಅರಣ್ಯದಲ್ಲಿ ತೇಗ, ಬೀಟೆ, ಹೊಂಗೆ, ಶ್ರೀ ಗಂಧದಂತಹ ಬೆಲೆಬಾಳುವ ಮರಗಳು, ವಿವಿಧ ಗಿಡ ಮೂಲಿಕೆಗಳು, ಬಳ್ಳಿಗಳು ಇರುತ್ತವೆ. ತೋಳ, ನರಿ, ಹುಲಿ, ಕರಡಿ, ಚಿರತೆ, ಸಿಂಹಗಳಂತಹ ಮಾಂಸಾಹಾರಿ ಪ್ರಾಣಿಗಳು, ಜಿಂಕೆ, ಚಿಗರೆ, ಕಾಡೆಮ್ಮೆ, ಕಾಡು ದನ, ಆನೆ, ಮಂಗ, ಮೊಲಗಳಂತಹ ಸಸ್ಯಾಹಾರಿ ಪ್ರಾಣಿಗಳು ಹಾಗೂ ವಿವಿಧ ರೀತಿಯ ಕೀಟಗಳು, ಪಕ್ಷಿ ಸಂಕುಲಗಳು ಬೀಡು ಬಿಟ್ಟಿರುತ್ತವೆ. ಹವಾಮಾನಕ್ಕೆ ತಕ್ಕಂತೆ ವಿವಿಧ ರೀತಿಯ ಅರಣ್ಯಗಳಿವೆ. ಮಳೆ ಹೆಚ್ಚಾಗಿ ಬೀಳುಬ ಪ್ರದೇಶಗಳಲ್ಲಿ ಎತ್ತರವಾಗಿ ಬೆಳೆದ ಮರಗಳಿಂದ ಕೂಡಿದ ದಟ್ಟವಾದ, ಸದಾ ಹಸಿರಾಗಿರುವ ಅರಣ್ಯಗಳಿವೆ. ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ಕಳ್ಳಿ, ಕುರುಚಲು ಗಿಡಗಳಿಂದ ತುಂಬಿದ ಅರಣ್ಯಗಳಿವೆ. ಅರಣ್ಯದಿಂದ ಉರುವಲು, ಗಿಡಮೂಲಿಕೆ ಔಷಧಿ ಸಸ್ಯಗಳನ್ನು ಪಡೆಯುತ್ತೇವೆ. ಕಾಗದ ಕೈಗಾರಿಕೆಗೆ ಬೇಕಾದ ಮರದ ತಿರುಳು, ಬೆಂಕಿ ಕಡ್ಡಿ ತಯಾರಿಸಲು ಬೇಕಾದ ಮರ ಕೂಡ ಅರಣ್ಯದಲ್ಲಿ ದೊರಕುತ್ತದೆ. ಅಂಟು, ರಾಳ, ಅರಗು, ಮೇಣ, ಜೇನು ಮುಂತಾದ ವಸ್ತುಗಳು ದೊರಕುತ್ತವೆ. ಪ್ರಾಣಿಗಳಿಗೆ ಮೇವು, ನಮಗೆ ವಿವಿಧ ಬಗೆಯ ಆಹಾರ ವಸ್ತುಗಳು ದೊರಕುತ್ತವೆ. ಅರಣ್ಯದಲ್ಲಿರುವ ಮರಗಳ ಬೇರುಗಳು ಮಳೆಯ ನೀರು ಹರಿದು ಹೋಗದಂತೆ ತಡೆಯುತ್ತದೆ. ಇದರಿಂದ ಮಣ್ಣು ಕೊಚ್ಚಿ ಹೋಗುವುದಿಲ್ಲ. ಅರಣ್ಯದಲ್ಲಿರುವ ಮರಗಳು ವಾತಾವರಣವನ್ನು ತಂಪಾಗಿಸುತ್ತದೆ. ಮರಗಳಿಂದ ಉದುರುವ ಎಲೆಗಳು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ.

ಒಳ್ಳೆಯ ಮಳೆ ಗಾಳಿ, ತಂಪಾದ ವಾತಾವರಣ ನೀಡುವ ಗಿಡಮರಗಳನ್ನು ನಮ್ಮ ಸ್ವಾರ್ಥಕಾಗಿ ಅವುಗಳನ್ನು ಪ್ರತಿನಿತ್ಯ ಕಡಿದು ಗಿಡಮರಗಳನ್ನು ನಾಶಪಡಿಸುತ್ತಿದ್ದೇವೆ. ಮುಂದೊಂದು ದಿನ ಮರಗಳಿಲ್ಲದೆ ಆರೋಗ್ಯಕರವಾದ ವಾತಾವರಣವು ಇಲ್ಲದೆ ಗೋಳಾಡುವ ಸಮಯ ಬರಬಹುದು. ಅದಕ್ಕಾಗಿ ಪ್ರತಿಯೊಬ್ಬರು ಒಂದು ಗಿಡವನ್ನು ಬೆಳೆಸಿ ಆರೋಗ್ಯಕರ ಪರಿಸರಕ್ಕೆ ಕಾರಣೀಭೂತರಾಗ ಬೇಕೆನ್ನುವುದು ನನ್ನ ಆಸೆ.

**ಮಂಜುಳ ತಂ. ತುರುಮಂದೆಪ್ಪ**
**7 ನೇತರಗತಿ ಮರಕಂದಿನ್ನಿ.**

# ಮಗು ಕಲಿಯುತ್ತದೆ



ಮಗು ಟೀಕೆಯಲ್ಲಿ ಜೀವಿಸಿದರೆ ಖಂಡಿಸುವುದನ್ನು ಕಲಿಯುತ್ತದೆ.
ಮಗು ಹೊಗಳಿಕೆಯಲ್ಲಿ ಜೀವಿಸಿದರೆ ಪ್ರಶಂಸಿಸುವುದನ್ನು ಕಲಿಯುತ್ತದೆ.
ಮಗು ದ್ವೇಷದಲ್ಲಿ ಜೀವಿಸಿದರೆ ಹೊಡೆಯುವುದನ್ನು ಕಲಿಯುತ್ತದೆ.
ಮಗು ತಾಳ್ಮೆಯಲ್ಲಿ ಜೀವಿಸಿದರೆ ಸಹನೆಯನ್ನು ಕಲಿಯುತ್ತದೆ.
ಮಗು ಅಪಹಾಸ್ಯದಲ್ಲಿ ಜೀವಿಸಿದರೆ ನಾಚಿಕೆಯನ್ನು ಕಲಿಯುತ್ತದೆ.
ಮಗು ಪ್ರೋತ್ಸಾಹದಲ್ಲಿ ಜೀವಿಸಿದರೆ ವಿಶ್ವಾಸವನ್ನು ಕಲಿಯುತ್ತದೆ.
ಮಗು ಸಮ್ಮತಿಯಲ್ಲಿ ಜೀವಿಸಿದರೆ ತನ್ನನ್ನೇ ತಾನು ಇಷ್ಟಪಡುವುದನ್ನು ಕಲಿಯುತ್ತದೆ.
ಮಗು ನ್ಯಾಯಸಮ್ಮತವಾಗಿ ಜೀವಿಸಿದರೆ ಕಾನೂನನ್ನು ಗೌರವಿಸುವುದನ್ನು ಕಲಿಯುತ್ತದೆ.
ಮಗು ಭದ್ರತೆಯೊಂದಿಗೆ ಜೀವಿಸಿದರೆ ನಂಬಿಕೆಯನ್ನು ಕಲಿಯುತ್ತದೆ.
ಮಗು ಪ್ರೀತಿ ಪ್ರೇಮ ಹಾಗೂ ಸಹಬಾಳ್ವೆಯಲ್ಲಿ ಬದುಕಿದರೆ ಈ ಜಗತ್ತಿನಲ್ಲಿ ಪ್ರೀತಿ ಹುಡುಕುವುದನ್ನು ಕಲಿಯುತ್ತದೆ.
ಮಕ್ಕಳು ತಾವು ಪಡೆದುದನ್ನು ಸಮಾಜಕ್ಕೆ ನೀಡುತಾರೆ. ಮಗು ಜೀವಿಸಿದ ರೀತಿಯಲ್ಲಿ ಕಲಿಯುತ್ತದೆ.

**ಶರಣಪ್ಪ ಸಭಾಪತಿ ವಿ.ಮ.ಸಂ. ಮುದ್ದನಗುಡಿ**



*ಕಷ್ಟದ ಜೀವನವೇ ಶಿಸ್ತನ್ನು ಕಲಿಸುವ ಪಾಠಶಾಲೆ.-ಲೋಕೋಕ್ತಿ*



# ಬಾಲ ಕಾರ್ಮಿಕ ಪದ್ಧತಿ


14 ವರ್ಷ ಒಳಗಿನ ಮಕ್ಕಳನ್ನು ಅಂಗಡಿ, ಹೋಟೆಲ್, ಗ್ಯಾರೇಜ್, ದನ–ಕುರಿ ಕಾಯಲು, ಹೊಲ ಗದ್ದೆಗಳಲ್ಲಿ ಕೆಲಸ (ಮೆಣಸಿಕಾಯಿ ತೆಗೆಯುವುದು, ಹತ್ತಿ ಬಿಡುಸುವುದು, ಹತ್ತಿ ಕ್ರಾಸ್ ಮಾಡಲು, ಕಸತೆಗೆಯಲು) ಹೀಗೆ ಮುಂತಾದ ಕೆಲಸಗಳಿಗೆ ಉಪಯೋಗಿಸಿದರೆ ಕಾನೂನು ಪ್ರಕಾರ ತಪ್ಪು. ಯಾಕೆಂದರೆ ಮಕ್ಕಳ ಮಾನಸಿಕ, ದೈಹಿಕ ಬೆಳವಣಿಗೆಯಲ್ಲಿ ಮತ್ತು ಅವರ ಪೌಷ್ಟಿಕತೆಯಲ್ಲಿ ಭಾರೀ ಪ್ರಮಾಣದ ಸಮಸ್ಯೆಗಳನ್ನು ನೋಡಬಹುದು. ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಶಕ್ತಿಮೀರಿ ನಡೆಯುವ ಪ್ರತಿಯೊಂದು ಕೆಲಸವು ಮಗುವಿನ ದೈಹಿಕ ಮತ್ತು ಮಾನಸಿಕ ಸಮಸ್ಯೆಗೆ ಕಾರಣವಾಗುತ್ತದೆ. ಅದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ ಇತ್ತೀಚಿಗೆ ಜಾರಿಯಾಗಿರುವ "ಕಡ್ಡಾಯ ಶಿಕ್ಷಣ ಕಾನೂನು ಪಾಲನೆ" ಪಾಲಕರ, ಪೋಷಕರ, ಸಮುದಾಯದ ಕರ್ತವ್ಯವಾಗಿದೆ. ಈ ವಿಷಯದಲ್ಲಿ ತಂದೆ ತಾಯಿಗಳ ಪಾತ್ರ ಬಹಳ ಮುಖ್ಯವಾಗಿದೆ. ತಂದೆ ತಾಯಿಗಳು ತಾವು ಅನಕ್ಷರಸ್ಥರಾಗಿದ್ದರೂ ತಮ್ಮ ಮಕ್ಕಳು ವಿದ್ಯಾವಂತರಾಗಬೇಕು, ಬುದ್ದಿ ಜೀವಿಗಳಾಗಬೇಕು ಎನ್ನುವ ಕನಸನ್ನು ಕಟ್ಟಿಕೊಳ್ಳಬೇಕು. ಅಗಿದ್ದಾಗ ಮಾತ್ರ ಪ್ರತಿಯೊಬ್ಬ ತಂದೆ ತಾಯಿಗಳು ತಮ್ಮ ಮಕ್ಕಳ ಶಿಕ್ಷಣದ ಕಡೆಗೆ ಗಮನಕೊಟ್ಟು ಈ ಬಾಲಕಾರ್ಮಿಕ, ಜೀತ ಪದ್ಧತಿ ಯನ್ನು ಹಳ್ಳಿಗಳಲ್ಲಿ ಸಂಪೂರ್ಣವಾಗಿ ತಡೆಯಲು ಸಾಧ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಪ್ರಮುಖವಾಗಿ ಹೆಣ್ಣು ಮಕ್ಕಳನ್ನು ಕೂಲಿಕೆಲಸಗಳಿಗೆ ಕರೆದುಕೊಂಡು ಹೋಗಿ ಅವರ ಶಿಕ್ಷಣಕ್ಕೆ ಅಡ್ಡಿ ಪಡಿಸುವಂತಹ ಸನ್ನಿವೇಶಗಳನ್ನು ನಾವು ಪ್ರತಿನಿತ್ಯ ನಮ್ಮ ಹಳ್ಳಿಗಳಲ್ಲಿ ಕಾಣುತ್ತೇವೆ. ಇಂತಹ ಕೆಲಸಗಳಿಗೆ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಸ್ಪಂದಿಸಿ, ಮಕ್ಕಳ ಹಕ್ಕುಗಳ ಪಾಲನೆಯಲ್ಲಿ ಸಕ್ರಿಯರಾಗಬೇಕು ಎನ್ನುವುದು ನನ್ನ ಆಸೆ.

**ನಾಗರಾಜ ತಂ. ದೊಡ್ಡ ಮಲ್ಲಪ್ಪ ಸ.ಹಿ.ಪ್ರಾ.ಶಾಲೆ. ಮರಕಂದಿನ್ನಿ**

## ಮೂರಕ್ಷರದ ಮಹಿಮೆ

"ಮನುಷ್ಯ" ಎಂಬ ಮೂರಕ್ಷರ,
"ಜನನ" ಎಂಬ ಮೂರಕ್ಷರದಿಂದ ಉದ್ಭವಿಸಿ
"ಬಾಲಕ" ನೆಂಬ ಮೂರಕ್ಷರದಲ್ಲಿ ಶಾಲೆಗೆ ಸೇರಿ
"ಶಿಕ್ಷಣ"ವೆಂಬ ಮೂರಕ್ಷರದಿಂದ
"ವಿದ್ಯಾರ್ಥಿ" ಎಂಬ ಮೂರಕ್ಷರದ ಹೆಸರನ್ನು ಪಡೆಯುತ್ತಾನೆ.
"ತರುಣ" ಅವಸ್ಥೆಗೆ ಕಾಲಿಟ್ಟು
"ಪರೀಕ್ಷೆ" ಎಂಬ ಮೂರಕ್ಷರದಲ್ಲಿ "ತೇರ್ಗಡೆ"ಯಾಗಿ
"ಪದವಿ" ಎಂಬ ಪಟ್ಟವನ್ನು ಪಡೆಯುತ್ತಾನೆ.
"ಯೌವನ" ಎಂಬ ಮೂರಕ್ಷರದ ಕಾಟ ತಾಳಲಾರದೇ
"ದಾಂಪತ್ಯ" ಎಂಬ ಮೂರಕ್ಷರಕ್ಕೆ ಕಾಲಿಡುತ್ತಾನೆ.
"ಜೀವನ" ವೆಂಬ ಮೂರಕ್ಷರದ "ಪಂಜರ" ದಲ್ಲಿ ಸಿಲುಕಿ
ತನ್ನ ವಂಶ ಬೆಳವಣಿಗೆಗಾಗಿ
"ಮಕ್ಕಳು" ಎಂಬ ಮೂರಕ್ಷವನ್ನು ಗಳಿಸುತ್ತಾನೆ.
"ನಲಿವು" ಮತ್ತು ಕಣ್ಣೀರು ಎಂಬ ಮೂರಕ್ಷರವನ್ನು
"ಜೀವನ" ದಲ್ಲಿ ಅನುಭವಿಸಿ ನಂತರ ತನ್ನ ಕೀರ್ತಿಗಾಗಿ
"ಪ್ರಪಂಚ" ಎನ್ನುವ ಮೂರಕ್ಷರದಲ್ಲಿ ಸತ್ಕಾರ್ಯಗಳನ್ನು ಮಾಡಿ
'ಹೆಸರು" ಎಂಬ ಮೂರಕ್ಷರವನ್ನು ಗಳಿಸುತ್ತಾನೆ ಕಾಲ ಕ್ರಮೇಣ
"ಪ್ರಪಂಚ" ದ "ಮಾನವ" ಜೀವನ ವನ್ನು ಅನುಭವಿಸಿ
"ವೃದ್ಧಾಪ್ಯ" ಎಂಬ ಬಲೆಗೆ "ಸಿಲುಕಿ"
"ದೇವರು" ಎಂಬ ಮೂರಕ್ಷರವನ್ನು ಧ್ಯಾನಿಸಿ
"ಮರಣ" ಎಂಬ ಮೂರಕ್ಷರಕ್ಕೆ ಬಲಿಯಾಗಿ
"ದಹನ" ಎಂಬ ಮೂರಕ್ಷರದಿಂದ ನಿರ್ಗಮಿಸುತ್ತಾನೆ.

**ಸಂಗ್ರಹ: ವೀರೇಶ ಸಭಾಪತಿ ಈರಲಗಡ್ಡಿ**



## ಒಗಟುಗಳು

೧. ಹಳ್ಳ ಹರಿತ್ಯೆತಿ, ಹಗ್ಗ ಹಾಸ್ಯೆತಿ, ನವಿಲು ಕುಣಿತ್ಯೆತಿ, ಹೇಳು ಹೇಳು ನಾನು ಯಾರು?
– ಕಂದೀಲು

೨. ಕಪ್ಪುಂಟು ಕಸ್ತೂರಿಯಲ್ಲ, ಬಿಳುಪುಂಟು ಬೆಣ್ಣೆಯಲ್ಲ, ನೀರುಂಟು ಬಾವಿಯಲ್ಲ ರೆಕ್ಕೆಯುಂಟು ಪಕ್ಷಿಯಲ್ಲ, ಹೇಳು ಹೇಳು ನಾನು ಯಾರು?
–ಕಣ್ಣು

೩. ಹಿಡಿಯೋಣವೆಂದರೆ ಕೈಯಿಗೆ ಸಿಗುದಿಲ್ಲ, ಬಡಿಯೋಣವೆಂದರೆ ಬಡಿಗೆಗೆ ದಕ್ಕುದಿಲ್ಲ, ನೋಡೋಣವೆಂದರೆ ಕಣ್ಣಿಗೆ ಕಾಣುದಿಲ್ಲ, ಹೇಳು ಹೇಳು ನಾನು ಯಾರು?
– ಗಾಳಿ



*ಸೌಜನ್ಯವು ಶಸ್ತ್ರಗಳನ್ನು ಗೆಲ್ಲುತ್ತದೆ.*

# ಮಕ್ಕಳ ಗ್ರಾಮ ಸಭೆ



ಗ್ರಾಮ ಪಂಚಾಯತಿಗಳು ಮಕ್ಕಳಿಗೆ ಒಂದು ಗ್ರಾಮ ಸಭೆ ನಡೆಸಬೇಕು. ಈ ಮಕ್ಕಳ ಗ್ರಾಮ ಸಭೆ ನವೆಂಬರ ತಿಂಗಳಿನಲ್ಲಿ ನಡೆಯಬೇಕು. ಗ್ರಾಮ ಪಂಚಾಯತಿ ಇದುವರೆಗೂ ನಡೆಸುತ್ತಾ ಬಂದಿರುವ ಗ್ರಾಮ ಸಭೆಗಳಲ್ಲಿ ಆಯಾ ಪಂಚಾಯತಿಯ ಸದಸ್ಯರುಗಳು, ಊರಿನ ಮುಖಂಡರುಗಳು, ಮತ್ತು ಕೆಲ ಸಾರ್ವಜನಿಕರು ಮಾತ್ರ ಭಾಗವಹಿಸುತ್ತಿದ್ದಾರೆ. ಅಂದರೆ 18 ವರ್ಷ ಮೇಲ್ಪಟ್ಟ ಜನರು ಮಾತ್ರ ಈ ಸಭೆಗಳಲ್ಲಿ ಭಾಗವಹಿಸಿ ತಮ್ಮ ತಮ್ಮ ಅಭಿಪ್ರಾಯಗಳು, ಬೇಡಿಕೆಗಳು, ಕ್ರಿಯಾ ಯೋಜನೆ ಬಗ್ಗೆ ಕಾಮಗಾರಿಗಳ ಬಗ್ಗೆ ಮಾತ್ರ ಸಭೆ ನಡೆಸುತ್ತಾರೆ. ಹೀಗೆ ದೊಡ್ಡವರು ವ್ಯಕ್ತಪಡಿಸುವ ಅಭಿಪ್ರಾಯ, ನೀಡುವ ಸಲಹೆ, ಸಲ್ಲಿಸುವ ಬೇಡಿಕೆ, ಆಧರಿಸಿ ಆಯಾ ಗ್ರಾಮ ಪಂಚಾಯತಿಗಳು ಕ್ರಿಯಾ ಯೋಜನೆಗಳನ್ನು ತಯಾರಿಸುತ್ತವೆ. ಇದು ಗ್ರಾಮ ಪಂಚಾಯತಿ, ತಾಲೂಕ ಪಂಚಾಯತಿಯಿಂದ ಹಿಡಿದು ಜಿಲ್ಲಾ ಪಂಚಾಯತಿಗಳು ಇಂದಿನವರೆಗೂ ಅನುಸರಿಕೊಂಡು ಬರುತ್ತಿರುವ ಯೋಜನೆ ರೂಪಿಸುವ ಒಂದು ಕ್ರಮವಾಗಿದೆ.




ಸರ್ಕಾರ 2006 ರಲ್ಲೇ ಮಕ್ಕಳಿಗಾಗಿಯೇ ಒಂದು ಗ್ರಾಮ ಸಭೆ ಮಾಡಬೇಕೆಂದು ರಾಜ್ಯದ ಎಲ್ಲ ಜಿಲ್ಲೆಗಳಿಗೆ ಸುತ್ತೋಲೆ ಮುದ್ರಿಸಿ ಆದೇಶ ಹೊರಡಿಸಿದೆ. ನವೆಂಬರ ತಿಂಗಳಿನಲ್ಲಿ ಇಂತಹ ಒಂದು ಸಭೆಗಳನ್ನು ನಡೆಸಬೇಕು. ಮಕ್ಕಳು ಅಂದರೆ 18 ವರ್ಷದೊಳಗಿನ ಎಲ್ಲರನ್ನೂ ಮಕ್ಕಳೆಂದು ಪರಿಗಣಿಸಲಾಗಿದ್ದು, ಎಲ್ಲರೂ ಶಾಲಾ ಕಾಲೇಜು ವಿದ್ಯಾರ್ಥಿಗಳಾಗಿರಲಿ, ಶಾಲೆಯಿಂದ ಹೊರಗುಳಿದವರಾಗಿರಲಿ ಅಥವಾ ಇನ್ಯಾವುದೇ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಎಲ್ಲ ಮಕ್ಕಳು ಈ ಮಕ್ಕಳ ಗ್ರಾಮ ಸಭೆಗಳಲ್ಲಿ ಭಾಗವಹಿಸಬಹುದಾಗಿದೆ. ಗ್ರಾಮ ಪಂಚಾಯತಿ ಮಕ್ಕಳಿಗಾಗಿಯೇ ಗ್ರಾಮ ಸಭೆಗಳನ್ನು ಏರ್ಪಡಿಸಿ ಆಯಾ ಗ್ರಾಮದ ಶಾಲೆಯ ಸಮಸ್ಯೆಯಾಗಿರಬಹುದು, ಮೂಲಭೂತ ಸೌಕರ್ಯಗಳಾಗಿರಬಹುದು, ಮಕ್ಕಳ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಬಾಲಕಾರ್ಮಿಕತೆಯ ಬಗ್ಗೆ ಹಾಗೂ ಬಾಲ್ಯವಿವಾಹದ ಬಗ್ಗೆ ಒಟ್ಟಾರೆ ಸಮುದಾಯ ಅಭಿವೃದ್ಧಿಗಾಗಿ ಸಭೆಯಲ್ಲಿ ಮಕ್ಕಳು ನೀಡುವ ಸಮಸ್ಯೆಗಳಿಗೆ ಪರಿಹಾರ. ಮಕ್ಕಳು ನೀಡುವ ಸಲಹೆ, ಅಭಿಪ್ರಾಯದ ಮೇರೆಗೆ ಕಾರ್ಯಕ್ರಮವನ್ನು ಮುಂದಿನ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಕೊಂಡು ಸಂಬಂದ ಪಟ್ಟ ಇಲಾಖೆಗಳು ಹಳ್ಳಿಗಳಲ್ಲಿ ನಡೆಯುವ ಪಿಡುಗುಗಳನ್ನು ತಡೆಯುವುದಕ್ಕೆ ಅಣಿಯಾಗಬೇಕು. ಅದ್ದರಿಂದ ಮಕ್ಕಳು ಇಲಾಖೆಗಳಿಗೆ ಹೋಗಿ ಹೇಳಿಕೊಳ್ಳದೇ ಇರುವುದರಿಂದ ಸರ್ಕಾರ ಇಂತಹ ಸಭೆಗಳಲ್ಲಿ ಮಕ್ಕಳು ಮುಕ್ತವಾಗಿ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಡುವಲ್ಲಿ ಮುಂದಾಗಬೇಕು.

ಚರ್ಚಿಸಬೇಕಾದ ವಿಷಯಗಳು:

- ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಪೌಷ್ಟಿಕ ಆಹಾರದ ಒದಗುವಿಕೆ.
- ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಆಟ ಪಾಠಗಳ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ರೂಪಿಸುವುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆಯನ್ನು ೨೦೦೯ರ ಅನುಷ್ಠಾನ.
- ಬಾಲ್ಯವಿವಾಹ ಪದ್ದತಿ, ಜೀತ ಪದ್ದತಿ ಹಾಗೂ ಕೃಷಿ ಕಾರ್ಮಿಕ ವೃತ್ತಿಯಲ್ಲಿ ಮಕ್ಕಳನ್ನು ತೊಡಗಿಸಿಕೊಂಡಿರುವುದು.
- ಹೆಣ್ಣು ಮಕ್ಕಳ ರಕ್ಷಣೆ ಮತ್ತು ಪೋಷಣೆ.
- ಹಿಂದಿನ ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳು ಎತ್ತಿದ ಸಮಸ್ಯೆಗಳ ಬಗ್ಗೆ ಪಂಚಾಯತಿ ಕೈಗೊಂಡ ಕ್ರಮಗಳ ವಿವರ........ಇತ್ಯಾದಿ.

**ಶ್ರೀ ಚಾರ್ಲಿ ಉದ್ಬಾಳ್**
**ವಿಮುಕ್ತಿ ಸಿಬ್ಬಂದಿ, ಪೋತ್ನಾಳ್**

**ಜೋಕ್ಸ್**



ಸಾರ್ : ಮೊದಲು ಯಾವುದು ಬಂತು ಕೋಳಿನಾ? ಮೊಟ್ಟೆನಾ?

ಜಾಣ : ಮೊದಲು ಯಾವುದಕ್ಕೆ ಆರ್ಡರ್ ಕೊಡುತ್ತಿರೋ ಅದು ಮೊದಲು ಬರುತ್ತೆ ಸಾರ್.

*ವಿಶ್ವಾಸ ಮತ್ತು ಪ್ರಾಮಾಣಿಕತೆಗಳೆರಡೂ ಒಂದೇ ನಾಣ್ಯದ ಎರಡು ಮುಖಗಳು.*

# ಮಕ್ಕಳಲ್ಲಿ ಕ್ರಿಯಾಶೀಲತೆ ಹೆಚ್ಚಿಸುವುದು ಹೇಗೆ?




ಮಕ್ಕಳಿಗೆ ನಾವು ತರಗತಿಯಲ್ಲಿ ಹೇಗೆ ತೊಡಗಿಸಿಕೊಳ್ಳುತ್ತೇವೆಯೋ ಹಾಗೆ ಅವರು ತಮ್ಮನ್ನು ತೊಡಗಿಸಿ ಕೊಳ್ಳುತ್ತಾರೆ. ಬರೀ ಸುಮ್ಮನೆ ಕುಳಿತುಕೊಳ್ಳಿ ಸುಮ್ಮನೆ ಕುಳಿತು ಕೊಳ್ಳಿ ಎಂದರೆ ಸುಮ್ಮನೆ ಕೂಡುವ ಮನಸ್ಸು ಅವರದಲ್ಲ. ಏನಾದರೂ ಹೊಸತವನ್ನು ಮಾಡುವ ಚಟುವಟಿಕೆಗಳಲ್ಲಿ ತೊಡಗುವ ಲವಲವಿಕೆ ಅವರಲ್ಲಿರುತ್ತದೆ. ಮಗುವಿನ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಪಾಲಕರು ಶಿಕ್ಷಕರು ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿ ಪ್ರೋತ್ಸಾಹಿಸಬೇಕು. ಒಂದು ವೇಳೆ ಅಂತಹ ಪ್ರೋತ್ಸಾಹ ಮಾರ್ಗದರ್ಶನವನ್ನು ನೀಡಿದಲ್ಲಿ ಮಕ್ಕಳಿಂದಲೂ ಕೂಡ ಹೊಸ ಕ್ರಿಯಾಶೀಲ ಮಾದರಿ, ರಚನೆ, ಅಭಿವ್ಯಕ್ತಿ ಕಾಣಸಿಗುತ್ತದೆ.

ಏನು ಮಾಡಬೇಕು

1. ಕಾಲಕಾಲಕ್ಕೆ ವಿಷಯವಾರು ಗುಂಪು ಚಟುವಟಿಕೆಗಳನ್ನು ನೀಡುವುದು
2. ಗುಂಪಿನಲ್ಲಿ ಒಂದಿಷ್ಟು ಡ್ರಾಯಿಂಗ್‌ಶೀಟ್, ಸ್ಕೇಚ್‌ಪೆನ್ ಇತ್ಯಾದಿಗಳನ್ನು ನೀಡಿ ಏನಾದರೂ ಆಕೃತಿ ಮಾದರಿಯನ್ನು ತಯಾರಿಸಲು ಚಿತ್ರ ಬಿಡಿಸಲು ಪೇಂಟಿಂಗ್ ಮಾಡಲು ಬರೆಯಲು ಪ್ರೋತ್ಸಾಹಿಸುವುದು.
3. ಪತ್ರಿಕೆ ಪುಸ್ತಕಗಳನ್ನು ಹರಡಿ ಓದಲು ಪ್ರೇರೇಪಿಸುವುದನ್ನು ಓದಿದ ಪುಸ್ತಕದ ಬಗ್ಗೆ ಮಾತನಾಡಲು ಹಚ್ಚುವುದು.
4. ಮಣ್ಣಿನ ರಾಶಿ ಹಾಕಿ ಕ್ಲೇ ಮಾಡಲಿಂಗ್ ಮಾಡಲು ಪ್ರಚೋದಿಸುವುದು.
5. ನಲಿ ಕಲಿ ಮಾದರಿಯಲ್ಲಿ ಸ್ಟ್ರೋವರ್ಕ್, ಬೀಜ ಅಂಟಿಸುವಿಕೆ, ಚಿತ್ರ ಸಂಗ್ರಹ, ಎಣಿಸುವಿಕೆ, ಸಂಭಾಷಣೆ ಹೇಳುವುದು ಹೀಗೆ ವಿಬಿನ್ನ ಚಟುವಟಿಕೆಗಳನ್ನು ನೀಡುವುದು.
6. ದಿನ ಪತ್ರಿಕೆಗಳಲ್ಲಿ ಊರಿನ ಹೆಸರು, ನಾಮಪದ, ಸರ್ವನಾಮಪದ ಇತ್ಯಾದಿ ವ್ಯಾಕರಣಗಳನ್ನು ಪಟ್ಟಿ ಮಾಡಲು ಪ್ರೇರೆಪಿಸುವುದು.
7. ಚಿತ್ರ ತೋರಿಸಿ, ಚುಟುಕು, ಕವನ ಬರೆಯಲು ಹೇಳುವುದು ಪ್ರೇರೇಪಿಸುವುದು.
8. ಗೋಡೆ ಪತ್ರಿಕೆಗಳನ್ನು ಮಕ್ಕಳಿಂದಲೇ ತಯಾರಿಸುವುದು.
9. ಮಕ್ಕಳಿಗೆ ಪತ್ರಿಕೆಗಳನ್ನು ಪುಸ್ತಕಗಳನ್ನು ಓದಿಸುವುದು.
10. ಉತ್ತಮ ಮಕ್ಕಳ ಚಿತ್ರಗಳನ್ನು ತೋರಿಸಿ ಅವರ ಬಗ್ಗೆ ಮಾತನಾಡಿಸುವುದು.

**ಹೆಸರು: ಎನ್.ದೇವರಾಜ 7 ನೇ ತರಗತಿ ಸ.ಹಿ.ಪ್ರಾ.ಶಾ. ದೇವಿಪುರ**



**ಮಮತ, ವಿಮುಕ್ತಿ ಪೋತ್ನಾಳ್**



**ಕು। ಯಂಕಮ್ಮ**
**6ನೇ ವರ್ಗ**
**ಸ.ಹಿ.ಪ್ರಾಥಮಿಕ.**
**ಶಾಲೆ, ತಡಕಲ್**

*ದುರಾಸೆಯು ನಮ್ಮಲ್ಲಿನ ಒಳ್ಳೆಯ ಗುಣಗಳನ್ನೆಲ್ಲಾ ಆಳಿಸಿ ಹಾಕುತ್ತದೆ.*

# ತಾಯಿಗೆ ಸಮನಾದ ಬಂಧುವಿಲ್ಲ



**ನ** ಮಾತೃ ಸದೃಶೋ ಬಂಧು:ನ ಮಾತೃ ದೃಶ: ಸುಖಾ ಕುಪುತ್ರೋಭುವೆ ಜಾಯೇತ ಕುಮಾತಾ ಭವೇತ ಕ್ವಚಿತ್.

ತಾಯಿಗೆ ಸಮನಾದ ಬಂಧು ಮಿತ್ರರು ಬೇರೆ ಇಲ್ಲ. ಕೆಟ್ಟ ಮಗ ಹುಟ್ಟಬಹುದು ಆದರೆ ಕೆಟ್ಟ ತಾಯಿ ಮಾತ್ರ ಇರಲಾರಳು. ತಾಯಿಗಿಂತ ಬಂದುವಿಲ್ಲ ಉಪ್ಪಿಗಿಂತ ರುಚಿಯಿಲ್ಲ. ಎನ್ನುವಂತೆ ಹುಚ್ಚಾದರೂ ತಾಯಿ, ನೀರಾದರೂ ಮಜ್ಜಿಗೆ ಎಂಬ ಗಾದೆಯಂತೂ ತುಂಬ ಅರ್ಥ ಪೂರ್ಣ. ತಾಯಿಯ ಮಡಿಲಲ್ಲಿ ಸಿಗುವ ಸುಖ ಸ್ವರ್ಗದಲ್ಲೂ ದುರ್ಲಭ. ಆದ್ದರಿಂದ ಮಾತೃದೇವೋಭವ– ತಾಯಿ ದೇವರು ಎಂದಿತು ನಮ್ಮ ಸಂಸ್ಕೃತಿ. ತಾಯಿತನವೇ ಹೆಣ್ಣಿನ ಬದುಕಿನ ಆದರ್ಶ. ಅವಳ ಹಂಬಲ ಮೊರೆ, ಕರೆಗಳಲ್ಲಿ ತಾಯಿ ಪಟ್ಟ ಹೇರಳ. ತಾಯಿ ಎಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ ಒಂದು ಶಕ್ತಿ. ಪ್ರೀತಿ– ವ್ಯಾತ್ಸಲ್ಯ ತ್ಯಾಗಗಳ ಮೂರ್ತಿಸ್ವರೂಪ ಈ ತಾಯಿ. ಏಕೆಂದರೆ ಮಗುವಿನ ಸುಖ ದು:ಖಗಳಿಗೆ ಈಕೆಯ ಸುಖ ದು:ಖ ತೊಟ್ಟಿಲಲಿರುವ ಪುಟ್ಟ ಕೂಸಿಗೆ ಕಷ್ಟದ ಲವಲೇಶವೂ ಸೋಂಕಬಾರದೆಂದು ಆಕೆ ಕಟ್ಟು ನಿಟ್ಟಿನ ಕರ್ತವ್ಯ ನಿರ್ವಹಿಸುತ್ತಾಳೆ. ಅವಳು ತನ್ನ ಹಸಿವು ಬಾಯಾರಿಕೆ ಆಯಾಸಗಳನೆಲ್ಲ ಮರೆತು ಭಾವ ಪೂರ್ವವಾಗಿ ಜೋಗುಳ ಹಾಡಿ ನಿದ್ರೆ ಮಾಡಿಸಿದಾಗ ಆವಳಿಗಾಗುವ ಸಂತೋಷ ಆಪ್ಪಿಷ್ಟಲ್ಲ. ವ್ಯಕ್ತಿಯೊಬ್ಬನನ್ನು ಶಕ್ತಿ ಶಾಲಿಂಯಾಗಿ



ರೂಪಿಸುವಲ್ಲಿ ತಾಯಿಯ ಪಾತ್ರ ತುಂಬ ಮಹತ್ವದ್ದು. ಜಗತ್ತಿನ ಮಹಾವ್ಯಕ್ತಿಗಳ ಸಾಧನೆಯ ಹಿನ್ನಲೆಯಲ್ಲಿ ಮಾತೆಯ ತ್ಯಾಗ, ಪ್ರೇಮ, ಆದರ್ಶಗಳು ಮಡುಗಟ್ಟಿ ನಿಂತಿವೆ. ತಾಯಿ ಮಗುವಿಗೆ ಮಾಡುವ ಸೇವೆ ತ್ಯಾಗಗಳು ನಿಸ್ವಾರ್ಥ

ಅದ್ದರಿಂದಲೇ ಅವರಿಬ್ಬರ ಸಂಬಂಧ ತುಂಬಾ ಪವಿತ್ರ ತಾಯಿ ಮಗುವಿನ ಸುಖಕೋಸ್ಕರ ಮಾಡುವ ಈ ಸೇವೆ ತ್ಯಾಗಗಳು ವರ್ಣನಾತೀತ.

ಒಮ್ಮೆ ಒಂದು ಶಾಲೆಯಲ್ಲಿ ಉಪಾಧ್ಯಾಯರು ತಾಯಿಯ ಕುರಿತು ಒಂದು ಪ್ರಬಂಧ ಬರೆಯಲು ಹೇಳಿದರಂತೆ ಎಲ್ಲ ಮಕ್ಕಳು ಪುಟಗಟ್ಟಲೆ ಬರೆದರು. ನನ್ನ ತಾಯಿ ಬೆಳ್ಳಗೆ ತೆಳ್ಳಗಿದ್ದಾಳೆ. ಎತ್ತರವಿದ್ದಾಳೆ. ಅವಳಲ್ಲಿ 82 ಸೀರೆಗಳಿವೆ ವಜ್ರದ ಓಲೆ ಬಂಗಾರದ ಒಡವೆಗಳಿವೆ. ನನ್ನ ತಂದೆಯು ಜೊತೆ ಜಗಳವಾಡುತ್ತಾಳೆ. ಇತ್ಯಾದಿ ಬರೆದದ್ದೆ ಬರೆದದ್ದು.

ಆದರೆ ಒಬ್ಬ ವಿದ್ಯಾರ್ಥಿ ಮಾತ್ರ ಏನನ್ನೂ ಬರೆಯದೆ ಖಾಲಿ ಕಾಗದವನ್ನು ಹಿಂದಿರುಗಿಸಿದ. ಅಧ್ಯಾಪಕರು ಏಕೆ ಏನನ್ನೂ ಬರೆಯಲಿಲ್ಲ ಎಂದು ಕೇಳಿದರು ಆಗ ಆ ಹುಡುಗ ಸರ್ ನಾನು ಬಾಲವಾಡಿಯಲ್ಲಿ ಇರುವಾಗಲೇ ತಾಯಿಯನ್ನು ಕಳೆದುಕೊಂಡ ದುರ್ದೈವಿ, ಅಮ್ಮನ ಬಗ್ಗೆ ಏನಾದರೂ ಬರೆಯೋಣವೆಂದರೆ ಅವಳು ನನ್ನ ಬಗ್ಗೆ ತೋರಿದ ಅಪಾರವಾದ ಪ್ರೀತಿ ವ್ಯಾತ್ಸಲ್ಯ ಕಾಳಜಿ ಇವೆಲ್ಲ ನೆನಪಾಗಿ ಕಣ್ಣುಗಳು ಒದ್ದೆಯಾದವು. ಅದರಿಂದ ಏನೂ ಬರೆಯಲಿಲ್ಲ. ಸರ್, ಎಂದನು. ಆದ್ದರಿಂದ ಅಧ್ಯಾಪಕರ ಮನಸ್ಸು ಕರಗಿತು ಅವನಿಗೇ ಮೊದಲ ಬಹುಮಾನ ಕೊಟ್ಟರು.

**ಶ್ರೀಮತಿ ಉಮಾ ಎಸ್.ಎಚ್.ಹೀರೆಮಠ**
**ವಿಮುಕ್ತಿ ಪರಿಹಾರ ಭೋದಕಿ ತಡಕಲ್**

# ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

**ಸ್ವ**ರ್ಗ ಎನ್ನುವುದು ಒಂದು ಕಾಲ್ಪನಿಕವಾದ ಒಂದು ಸುಂದರ ಲೋಕ. ಅಲ್ಲಿ ಕೇವಲ ಸುಖವಿದೆ, ದು:ಖವೆಂಬುದಿಲ್ಲ. ಅದಕ್ಕಾಗಿ ಮಾನವರೆಲ್ಲರೂ ಅಲ್ಲಿಗೆ ಹೋಗಬೇಕೆಂದು ಬಯಸುತ್ತಾರೆ. ಅದೇ ರೀತಿಯಾಗಿ ನಮ್ಮ ಹೆತ್ತತಾಯಿ ಮಡಿಲ ಸುಖ ಆ ಸ್ವರ್ಗಕ್ಕಿಂತಲೂ ಮಿಗಿಲಾಗಿರುತ್ತದೆ. ತಾಯಿಯ ಪ್ರೀತಿ ನಿಷ್ಕಲ್ಮಶ ಮತ್ತು ಪರಿಶುದ್ಧವಾದದ್ದು. ಆಕೆ ತನ್ನ ಮಕ್ಕಳ ಸುಖಕ್ಕಾಗಿ ತನ್ನೆಲ್ಲಾ ಸುಖಗಳನ್ನು ತ್ಯಾಗಮಾಡುತ್ತಾಳೆ. ಹಾಗೆಯೇ ನಾವು ಜೀವಿಸುವ ಭೂಮಿತಾಯಿಯು ಕೂಡ ನಮಗೆ ಆಶ್ರಯವನ್ನು ನೀಡಿ ನಮಗೆ ಬೇಕಾದ ಆಹಾರ, ನೀರು, ಗಾಳಿ ಇತ್ಯಾದಿಗಳನ್ನು ನಿಸ್ವಾರ್ಥದಿಂದ ಒದಗಿಸುತ್ತಾಳೆ. ನಮ್ಮನ್ನು ಬೆಳೆಸುತ್ತಾಳೆ. ಹೆತ್ತತಾಯಿ ಜೀವ ನೀಡಿದರೆ ಭೂಮಿತಾಯಿ ಜೀವನ ಕೊಡುತಾಳೆ. ಹೀಗಾಗಿ ಇವರಿಬ್ಬರೂ ಅದೃಶ್ಯ ಸ್ವರ್ಗಕ್ಕಿಂತ ಮಿಗಿಲು.

**ದೇವರಾಜ ತಂ. ಸಣ್ಣ ಮಲ್ಲಪ್ಪ, 7ನೇ ತರಗತಿ ಮರಕಂದಿನ್ನಿ.**

*ಸಮಯದ ಬೆಲೆ ತಿಳಿದಿರುವವರು ಜೀವನ ಬೆಲೆ ತಿಳಿದಿರುತ್ತಾರೆ.*



# ಮೊಬೈಲ್ ಕಾಲಕ್ಷೇಪ

"ಐಲು ಐಲು ಐಲು ಕೈಲಿದ್ರೇ ಮೊಬೈಲು ಸ್ಟೈಲು,ಸ್ಟೈಲು,ಸ್ಟೈಲು ಕೈಲಿದ್ರೇ ಮೊಬೈಲು______.."

ಆಹಾ; ಎಂತಹ ಅರ್ಥಪೂರ್ಣ ಹಾಡು ಈಗಿನ 21 ನೇ ಶತಮಾನದಲ್ಲಿ ಮಾನವ ಹಾಗು ಮೊಬೈಲಿನ ಸಂಬಂದವನ್ನು ಫೆವಿಕಾಲ್ ಜಾಹಿರಾತಿಗೆ ನೀಡಿದರೆ ತಪ್ಪಾಗಲಾರದು. ಮೊಬೈಲು ಹಾಗು ಮಾನವನ ನಂಟು ಬಿಡಿಸಲಾರದಂತದ್ದು. ಕೋಟ್ಯಾಧಿಪತಿಗಳಿಂದ ಹಿಡಿದು ಭಿಕ್ಷಾಧಿಪತಿಗಳವರೆಗೂ ವಿಧವಿಧದ ಹ್ಯಾಂಡಸೆಟನ ಮೊಬೈಲಗಳು ಬಳಕೆಯಲ್ಲಿವೆ.

ಮೊಬೈಲನ ರಿಂಗ್ ಟೋನ್ ಗಳ ವೈವಿಧ್ಯಮಯ ಹಾಡುಗಳಂತೂ ವರ್ಣನಾತೀತ.ಮೊಬೈಲ್ ಸುಪ್ರಭಾತವೇ ಜನರನ್ನು ಏಳಿಸಬೇಕಾದಂತಹ ಪರಿಸ್ಥಿತಿ ಬಂದಿದೆ. ಕೊನೆಗೆ ಮಲಗುವಾಗಲೂ ತನ್ನ ದಿಂಬಿನಡಿ ಮೊಬೈಲ್ ಇಲ್ಲದಿದ್ದರೆ,ನಿದ್ರೆಯೆ ಬರುವದಿಲ್ಲ. ಮೊಬೈಲನಲ್ಲಿ ಫೋಟೊ, ಹಾಗೂ ವಿಡಿಯೋ ಸೌಲಭ್ಯ ಬಂದ ಮೇಲಂತೂ ಕ್ಯಾಮರಾ ಹಾಗೂ ವಿಡಿಯೋ ಸೆಟ್ ಗಳು ಮೂಲೆಗುಂಪಾಗಿದೆ. ಇಂಟರನೆಟ್ ಸೌಲಭ್ಯ ಫೇಸ್ ಬುಕ್ ಸೌಲಭ್ಯ ಸಹ ಈ ಚಿಕ್ಕ ಮೂರಿಂಚಿನ ಪೆಟ್ಟಿಗೆಯಿಂದ ದೊರೆಯುಬಹುದೆಂದರೆ ಸ್ವಾಮಿ ನೀವೇ ಲೆಕ್ಕ ಹಾಕಿ ಮಾನವನ ವೈಜ್ಞಾನಿಕತೆಯನ್ನು ಬಟನ್ ಒತ್ತಿದರೆ ಸಾಕು ದೇವರ ನಾಮ, ಭಕ್ತಿಗೀತೆ, ಭಾವಗೀತೆ, ಹಾಸ್ಯಗೀತೆ ಕೊನಗೆ ಪ್ರೇಮಗೀತೆಯನ್ನು ಹೇಳುವ ಈ ಮೊಬೈಲ್ ಹುಟ್ಟಿದ ಮಕ್ಕಳಿಗೂ ತುಂಬಾ ಪ್ರೀತಿ 1 ರಿಂದ 2 ವರ್ಷದ ಎಳೆಯ ಕಂದಮ್ಮಗಳ ಅಳುವನ್ನು ಮೊಬೈಲ್ ಕೊಟ್ಟು ತಣಿಸುವ ಪರಿಸ್ಥಿತಿ ತಾಯಂದಿರದ್ದಾಗಿದೆ.

5 ರಿಂದ 6 ವರ್ಷಗಳೂ ಕಳೆಯದ ಮಕ್ಕಳು ಮೊಬೈಲ್ ಗಳನ್ನು ಕೈಗೆತ್ತಿಕೊಂಡು, ಟಪ–ಟಪ ಬಟನಗಳನ್ನು ಒತ್ತಿಕೊಂಡು ಆಟ ಆಡುವದನ್ನು ನೋಡಿದರೆ, ಮತ್ತೊಂದು ದಿನ ಮಕ್ಕಳಿಗೆ ಮೊಬೈಲ್‌ನಲ್ಲಿಯೇ ಶಿಕ್ಷಣವನ್ನು ನೀಡುವಂತಹ ಪರಿಸ್ಥಿತಿ ಬರಬಹುದೆಂದು ಆಶಿಸುವದರಲ್ಲಿ ಅಚ್ಚರಿಯೇನಿಲ್ಲ. ಪ್ರೇಮಿಗಳಿಗಂತೂ ಮೊಬೈಲ್ ಒಂದು ವರದಾನವಾಗಿದೆ. ಮೊಬೈಲ್ ನ ವಿವಿಧ ಸೌಲಭ್ಯಗಳನ್ನು ನೋಡಿದರೆ, ಇದನ್ನು ನೀಡಿದ ಮಾನವನ ಬುದ್ದಿಶಕ್ತಿಗೆ ವಂದಿಸಬೇಕು.

**ಕುಮಾರಿ ವಿಜಯಲಕ್ಷ್ಮಿ.ಜೆ ಸಿರವಾರ**
**ಸಹ ಶಿಕ್ಷಕಿ, ಸ. ಹಿ. ಪ್ರಾ. ಶಾ. ದೇವಿಪುರ**

# ಜೀತ ಪದ್ಧತಿ ನಿರ್ಮೂಲನೆ



ಒಬ್ಬ ವ್ಯಕ್ತಿಯು ತಾನು ಮಾಡಿದ ಸಾಲದಲ್ಲಿ ತನ್ನ ಮಗ ಮತ್ತು ಮನೆಯುವರೂ ಕೂಡಿ ಒಂದೇ ಕಡೆ ದುಡಿಯುವುದಕ್ಕೆ ಜೀತಪದ್ಧತಿ ಎನ್ನುವರು. ಜೀತ ಪದ್ಧತೆ ನಿರ್ಮೂಲನೆಗೊಳ್ಳಬೇಕಾದರೆ

1. ಅನಕ್ಷರತೆ:– ಅನಕ್ಷರತೆ ನಿರ್ಮೂಲನೆಯಾಗಬೇಕು ಏಕೆಂದರೆ ಯಾವುದೇ ಒಬ್ಬ ವ್ಯಕ್ತಿಯು ತನ್ನಲ್ಲಿ ಬುದ್ಧಿಶಕ್ತಿ ಬೆಳೆಸಿಕೊಳ್ಳ ಬೇಕಾದರೆ ಅನಕ್ಷರತೆ ನಿರ್ಮೂಲನೆಯಾಗಬೇಕು.
2. ಬಡತನ:– ಬಡತನ ಎಂದರೆ ಯಾವುದೇ ಒಬ್ಬ ವ್ಯಕ್ತಿಯು ತಾನು ಅನುಭವಿಸಲು ಅವಶ್ಯಕವಾದ ವಸ್ತುಗಳನ್ನು ಪಡೆಯಲಾರದೇ ಇರುವುದನ್ನು ಬಡತನವು ತೊಲಗಬೇಕು

**ಮಲ್ಲಪ್ಪ ತಂ. ಅಮರಪ್ಪ 7 ನೇತರಗತಿ ಮರಕಂದಿನ್ನಿ**



***ಆಸೆಗಳು ಹೆಚ್ಚಾದಂತೆ ಅಗತ್ಯಗಳು ಹೆಚ್ಚಾಗುತ್ತವೆ.***

# ಪರೀಕ್ಷೆಗೆ ಸಿದ್ಧತೆಗಳು



1. ಪರೀಕ್ಷೆಗೆ ಒಂದು ದಿನ ಮೊದಲೇ ಪರೀಕ್ಷಾ ಭವನಕ್ಕೆ ಹೋಗಿ ನಿಮ್ಮ ನಂಬರಗಳನ್ನು ನೋಡಿಕೊಂಡು ಬನ್ನಿರಿ. ಅಂದರೆ ಪರೀಕ್ಷೆಯ ದಿನ ನಿಶ್ಚಿಂತೆಯಿಂದ ಇರಲು ಸಾಧ್ಯವಾಗುವದು.
2. ಪರೀಕ್ಷೆಗೆ ಹೊರಡುವ ದಿನ ಸಾಧ್ಯವಾದಷ್ಟು ಸ್ವಚ್ಛವಾದ ಬಟ್ಟೆಗಳನ್ನು ಧರಿಸಿರಿ. ಶುಭ್ರವಾದ ಬಟ್ಟೆಗಳು ಮನಸ್ಸನ್ನು ಉಲ್ಲಾಸಿತವಾಗಿಡುತ್ತವೆ. ಪರೀಕ್ಷೆಗೆ ಹೋಗುವ ಮುನ್ನ ಗುರುಹಿರಿಯರ ಆಶೀರ್ವಾದ ಪಡೆಯಲು ಮರೆಯಬೇಡಿರಿ. ಅವರ ಆಶೀರ್ವಾದದ ರಕ್ಷೆ ಯಾವಾಗಲೂ ನಿಮ್ಮನ್ನ ಕಾಯುತ್ತದೆ.
3. ಪರೀಕ್ಷಾ ಭವನಕ್ಕೆ ತೆರಳುವ ಮೊದಲು ನಿಮ್ಮ ಪ್ರವೇಶ ಪತ್ರ 2-3 ಪೆನ್ನು, ಕಂಪಾಸು, ಚೂಪಾಗಿ ಕೆತ್ತಿದ ಎರಡು ಮೂರು ಸೀಸಕಡ್ಡಿಗಳು ನಿಮ್ಮ ಸಂಗಡವಿರಲಿ.
4. ಪರೀಕ್ಷಾಭವನದ ಹತ್ತಿರ ಪರೀಕ್ಷೆ ಪ್ರಾರಂಭವಾಗುವದಕ್ಕೆ ಕಾಲು ಗಂಟೆ ಮೊದಲೇ ಇರಬೇಕು.
5. ನಾವು ಇಂದಿನ ಪ್ರಶ್ನೆ ಪತ್ರಿಕೆಯನ್ನು ಚೆನ್ನಾಗಿ ಬಿಡಿಸುತ್ತೇನೆ ಎಂಬ ಮನೋಧೈರ್ಯವಿರಲಿ. ಪರೀಕ್ಷೆಯ ಕಾಲಕ್ಕೆ ಭಯ ಹಾಗೂ ಸ್ವಹೀನತಾ ಭಾವನೆಗಳಿಂದ ಮನಸ್ಸನ್ನು ಆಲಿಪ್ತವಾಗಿರಿಸಿ ಅದಕ್ಕಾಗಿ ಪರೀಕ್ಷೆಗೆ ಮೊದಲು ಅಳತೆ ಮೀರಿ ಓದಕೂಡದು. ಅತೀ ಓದು ಬುದ್ಧಿ ಭ್ರಮಣೆಗೂ ಕಾರಣವಾದೀತು.
6. ಪರೀಕ್ಷೆಯ ದಿನಗಳಲ್ಲಿ ಆಹಾರ ವಿಹಾರಗಳು ನಿಯಮಕ್ಕನುಗುಣವಾಗಿರಲಿ, ಯಾವದೇ ಬಗೆಯ ಚಿಂತೆಗೆ ಆಸ್ಪದವೀಯಬೇಡಿ.

**ಪರೀಕ್ಷಾ ಕೊಠಡಿಯಲ್ಲಿ ಪಾಲಿಸಬೇಕಾದ ಅಂಶಗಳು**

1. ನೀವು ನಿಮ್ಮ ಸರಿಯಾದ ಕ್ರಮಾಂಕದ ಮೇಲೆ ಕುಳಿತಿರುವಿರೋ ಇಲ್ಲವೋ ಎಂಬುದನ್ನು ಪರೀಕ್ಷಿಸಿಕೊಳ್ಳಿ.
2. ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಒಂದೇ ಇರುವುದುದರಿಂದ ಅದು ನಿಮಗೆ ದೊರೆತೊಡನೆ ಅದರಲ್ಲಿ ನಿಮ್ಮ ಕ್ರಮಾಂಕ ಹಾಗೂ ಇತರ ವಿವರಗಳನ್ನು ಸರಿಯಾಗಿ ತುಂಬಿರಿ.
3. ಪರೀಕ್ಷೆಯ ಸ್ಥಳದಲ್ಲಿ ಕುಳಿತಾಗ ಪ್ರಶ್ನೆ ಪತ್ರಿಕೆ ಬರುವ ಮೊದಲು ಇಂತಹವೇ ಪ್ರಶ್ನೆಗಳಿರಬಹುದು ಎಂದು ವ್ಯರ್ಥವಾಗಿ ಚರ್ಚಿಸಬೇಡಿ. ಯಾಕೆಂದರೆ ಪ್ರಶ್ನೆ ಕಾಗದ ಕೈಗೆ ಬಂದಾಗ ಅ ಕಾರಣವಾಗಿ ಮಾನಸಿಕ ಗೊಂದಲ ಉಂಟಾದೀತು.
4. ಪ್ರಶ್ನೆ ಪತ್ರಿಕೆಯನ್ನು ಸಂಪೂರ್ಣ ಓದಿದ ಮೇಲೆ ಕೊಟ್ಟ ಸೂಚನೆಗಳನ್ನು ಮತ್ತೊಮ್ಮೆ ಚೆನ್ನಾಗಿ ಗಮನಿಸಿ. ಸುಲಭವೆನಿಸುವ ಪ್ರಶ್ನೆಗಳನ್ನು ಮೊದಲು ಬಿಡಿಸಿ, ನಂತರ ಉಳಿದ ಪ್ರಶ್ನೆ ಬಿಡಿಸಿ.
5. ಗುಣಗಳಿಗೆ ತಕ್ಕಂತೆ ವೇಳೆಯನ್ನು ಉಪಯೋಗಿಸಿರಿ. ಕಾರಣವಿಲ್ಲದೆ ಉತ್ತರ ಬೆಳಸಬೇಡಿರಿ. ಕೊಟ್ಟ ಅವಧಿಯಲ್ಲಿ ಬಿಡಿಸಬೇಕಾದ ಎಲ್ಲಾ ಪ್ರಶ್ನೆಗಳನ್ನು ಬಿಡಿಸಬೇಕು. ಉತ್ತರಗಳನ್ನು ಅವುಗಳಿಗೆ ಮೀಸಲಾದ ಜಾಗದಲ್ಲಿಯೇ ಬರೆಯಿರಿ.
6. ಉತ್ತರ ಬರೆಯುವಾಗ ಶಕ್ಯವಿದ್ದಷ್ಟು ವೇಗವಾಗಿ ಬರೆಯಿರಿ. ಅಕ್ಷರಗಳನ್ನು ಮುತ್ತು ಪೋಣಿಸಿದಂತೆ ಸುಂದರವಾಗಿರಿಸಲು ಮರೆಯಬೇಡಿರಿ. ಶಬ್ದಗಳು ಬಿಡಿಬಿಡಿಯಾಗಿರಲಿ. ವಾಕ್ಯಾವಳಿ ( ಪ್ಯಾರಗ್ರಾಫ್) ಮಾಡಿಕೊಂಡು ವಿಷಯ ನಿರೂಪಿಸಿರಿ. ಅವಶ್ಯವಿದ್ದಲ್ಲೆಲ್ಲ ಆಕೃತಿಗಳನ್ನು ತೆಗೆಯಿರಿ.
7. ಉತ್ತರಗಳನ್ನು ಬರೆದಾದ ಬಳಿಕ ಮತ್ತೊಮ್ಮೆ ಪರಿಶೀಲಿಸಿರಿ. ತಪ್ಪುಗಳಿದ್ದಲ್ಲಿ ತಿದ್ದಿರಿ. ಗಂಟೆ ಹೊಡೆಯುವ ಮೊದಲು ನಿಮ್ಮ ಉತ್ತರ ಪುಸ್ತಕಗಳನ್ನು ಕೊಡಬೇಡಿರಿ. ಹೊರಗೆ ಬಂದ ಬಳಿಕ ಬರೆದ ವಿಷಯಗಳ ಬಗ್ಗೆ ಚರ್ಚೆ ಮಾಡಬೇಡಿರಿ.
8. ನಿಮ್ಮ ಉತ್ತರ ಪುಸ್ತಕಗಳನ್ನು ತಿದ್ದುವವರೂ ಕೂಡ ಮನುಷ್ಯರೇ ನಿಮ್ಮ ಉತ್ತರ ಪುಸ್ತಕಗಳನ್ನು ತೆಗೆದು ನೀವು ಬಿಡಿಸಿದ ಮೊದಲ ಉತ್ತರವನ್ನು ನೋಡಿದ ಕೂಡಲೇ ನೀವೊಬ್ಬ ಜಾಣ ಹಾಗೂ ಅಚ್ಚು ಕಟ್ಟಾದ ಶಿಸ್ತಿನ ವಿದ್ಯಾರ್ಥಿ ಎಂಬ ಭಾವನೆ ಬರುವಂತಿರಬೇಕು. ಅಂದರೆ ನಿಮಗೆ ಹೆಚ್ಚು ಗುಣಗಳು ದೊರೆಯುವುದರಲ್ಲಿ ಸಂಶಯವಿಲ್ಲ. ಮೊದಲು ಚಿತ್ಕಾಟ ಮಾಡಿ ನಿಮ್ಮ ಬಗ್ಗೆ ಅಭಿಪ್ರಾಯ ಕೆಡಿಸಿಕೊಂಡರೆ ಉಳಿದ ಒಳ್ಳೆಯ ಉತ್ತರಗಳಿಗೂ ಕಡಿಮೆ ಗುಣಗಳು ಬೀಳುವ ಸಂಭವ ಉಂಟು. ಕಾರಣ ಪರೀಕ್ಷರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಗುವಂತೆ ನಿಮ್ಮ ಉತ್ತರವಿರಲಿ.

**ಸಂಗ್ರಹ: ವಿನಯಕುಮಾರು ತಂ. ಜಯಶೀಲ ದೋತರಬಂಡಿ 10 ನೇ ತರಗತಿ**

*ಅನುಭವವೇ ಮಾನವನ ನಿಜವಾದ ಪಾಠಶಾಲೆ.*

# ನಾ ಕಂಡಂತೆ... .. .. ಕಂಡಷ್ಟು.. .. ..

**ವಿ**ಮುಕ್ತಿ ಇದೊಂದು ಪದ ಬಹಳ ಅಧ್ಭುತವಾಗಿದೆ ಅಲ್ವಾ? ಮುಕ್ತಿ ಎಂದರೆ ಬಿಡುಗಡೆ ಅದರಲ್ಲೂ ಇದು ವಿಮುಕ್ತಿ. ಅಂದರೆ ಪೂರ್ಣ ಮುಕ್ತವಾದದ್ದು. ಇಂತದೊಂದು ಚಾರಿಟೇಬಲ್ ಟ್ರಸ್ಟ್ ಇದೆ ಎಂದು ತಿಳಿದಾಗ ನನಗೆ ಅತೀವ ಸಂತೋಷವಾಯ್ತು. ಅದೇ ತಾನೇ ನಾನು 2008 ರಲ್ಲಿ ನೇಮಕನಾಗಿದ್ದೆ. ಆಗ ನನಗೆ ಈ ಸಂಸ್ಥೆಯ ಒಡನಾಟ ಆರಂಭವಾಯ್ತು. ನನಗೆ ಇಗ್ಲೂ ಕಣ್ಣಿಗೆ ಕಟ್ಟಿದಂತ ಅನುಭೂತಿ..... ನನಗೆ ಪ್ರೀತಿಯ ಶ್ರೀ ಅರುಣ ಲೋಬೊ ಫಾದರ್ ಪರಿಚಯವಾಯ್ತು. ಅವರು ಕೇಳುತ್ತಿದ್ದ. ಭಾವಗೀತೆಗಳನ್ನು ಕೇಳಿದ್ರೆ ಅವರು ಎಂತಹ ಆಕರ್ಷಣೀಯ ವ್ಯಕ್ತಿ. ಮತ್ತು ಮಕ್ಕಳ ಪ್ರೇಮ ಅಷ್ಟೇ ಕರ್ತವ್ಯ ಪರ ಮನೋಭಾವ.

ಮೊದಮೊದಲು ಈ ಸಂಸ್ಥೆಯ ಪ್ರೀತಿಯ ಸದಸ್ಯರು ನಮ್ಮ ಸರ್ಕಾರಿ ಶಾಲೆಗಳ ಕಡೆ ಬದಲಾವಣೆ ಪ್ರೇಮಿಗಳಾಗಿ ಬಂದಾಗ ನಮ್ಮಲ್ಲಿ ಎಲ್ಲೋ ನಿರಪೇಕ್ಷಭಾವ ಆದರೆ ಅವರು ನೀಡಿದ ಅತಿ ದೊಡ್ಡ ಸಹಾಯ ಇಂದು ಯಾರೂ ಮರೆಯಲು ಸಾಧ್ಯವಿಲ್ಲ. ಪ್ರಾರಂಭದಲ್ಲಿ ಹಳ್ಳಿಗಳಿಗೆ ಟ್ಯೂಷನ್ ಕಾಸ್‌ಗಳನ್ನು ಆರಂಭಿಸಿ ಅಲ್ಲಿ ಸ್ಥಳೀಯ ಆಸಕ್ತರಿಂದ 1000ರೂ ಅನುದಾನದಂತೆ ನೀಡಲಾಯಿತು. ನಂತರ ಅದನ್ನೂ 14 ಹಳ್ಳಿಗಳಿಗೆ ವಿಸ್ತರಿಲಾಯಿತು. ಶಾಲೆಗಳಿಗೆ ನೋಟಿಸ್ ಬೋರ್ಡ್‌ಗಳನ್ನು ನೀಡಲಾಯಿತು. ಅದೇ ರೀತಿ ಅರುಣ ಲೋಬೊ ಇವರ ನೇತೃತ್ವದಲ್ಲಿ ನಡೆದ 'ಮಕ್ಕಳ ಹಬ್ಬ' ನಿಜವಾಗಿಯೂ ಅವಿಸ್ಮರಣೀಯ. ಇಂದಿಗೂ ನನ್ನ ಮಕ್ಕಳು ಪದೇ ಪದೇ ಆ ನೆನಪುಗಳನ್ನು ಮೆಲಕು ಹಾಕುತ್ತಾರೆ. ರಂಜನೀಯ ವೇದಿಕೆ, ಪ್ರಾನ್ಸ್ ದೇಶಿಯ ದತ್ತಿಗಳ ಆಗಮನ, ಆನಂದದಲ್ಲಿ ಅವರು ಕ್ಲಿಕ್ಕಿಸಿದ ಫೋಟೊಗಳು ನಮ್ಮ ಮಕ್ಕಳಿಂದ ಪಡೆದ ವಿವಿಧ ಭಾವ ಭಂಗಿಗಳು, ನೃತ್ಯ, ಕೋಲಾಟ, ಎಲ್ಲಾ ಶಾಲೆಗಳಿಗೆ ಪ್ರಶಸ್ತಿ. ಆ ದಿನ ಕಾರ್ಯಗಾರ ಮುಕ್ತಾಯ ನಮ್ಮ ಮನಕ್ಕೆ ಇಂದಿಗೂ ಮಾಸದಂತೆ ಉಳಿದಿದೆ.

ಆ ವರ್ಷ ಅಂದರೆ 2009 ರ ನಮ್ಮ ಉತ್ತರ ಕರ್ನಾಟಕ ಮಳೆಯ ಪ್ರವಾಹದಿಂದ, ನಮ್ಮ ನಾಲಾ ಬಧಿಯ ಗ್ರಾಮಗಳ ಭೀತಿ ಶೋಚನೀಯ. ಆಗ ಸರ್ಕಾರದಂತೆ ಈ ಸಂಸ್ಥೆ ಖಾಸಗಿಯಾಗಿ ಸುಮಾರು 100 ರಿಂದ 150 ಮನೆಗಳ ನಿರ್ಮಾಣಕ್ಕೆ ವಸ್ತು ಖರೀದಿಸಿ ನೀಡಿತ್ತು. ಅದು ಅವರು ಸಮುದಾಯದತ್ತ ನೀಡಿದ ಒಲವಿನ ಕೊಡುಗೆ. ಅದನ್ನು ಆ ಆಶ್ರಯ ಫಲಾನುಭವಿಗಳು ಮರೆಯಲು ಸಾಧ್ಯವಿಲ್ಲ. ನಂತರ ನಮ್ಮ ಲೋಬೊ ಅವರು ಹೆಚ್ಚಿನ ಅಭ್ಯಾಸ ನಿಮಿತ್ಯ ವಿದೇಶಕ್ಕೆ ತೆರಳಿದ ನಂತರ ಬಂದ ಫಾದರ್ ಸತೀಶ್ ಅತ್ಯಂತ ಮಾಮ್ಲುವಾದಿಗಳು. ಶಾಂತಿ ಪ್ರಿಯರು ಹಾಗೂ ಸರಳ ವ್ಯಕ್ತಿಗಳು ಅವರ ನೇತೃತ್ವದಲ್ಲಿ ಈ ವಿಮುಕ್ತಿ ಸಂಸ್ಥೆ ಇಂದು ಯಶಸ್ವಿಯಾಗಿ ಸಾಗಿದೆ. ನಾನು ಒಬ್ಬ ಶಿಕ್ಷಕನಾಗಿ ಈ ಒಂದು ಸಂಸ್ಥೆಯ ಬಗ್ಗೆ ಅರಿತಷ್ಟು ತೋಚಿದಷ್ಟು ಬರೆದಿದ್ದೇನೆ. ಇದು ಕನ್ನಡಿಯಲ್ಲಿ ಆನೆ ತೋರಿಸೋ ಪ್ರಯತ್ನ. ಅಪಾರ ಕೆಲಸಗಳನ್ನು ಮಾಡಿರುವ ಈ ಸಂಸ್ಥೆಯಲ್ಲಿ ನನ್ನ ಸ್ನೇಹಿತರು ಮತ್ತು ಸಹೋದರಿಯರು ಉತ್ಸಾಹದಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಶ್ರದ್ದೆ ನಿಷ್ಠೆಯಿಂದ ನಿರ್ವಹಿಸುತ್ತಾರೆ. ಈಗ ತಾನೇ ಎಲ್ಲಾ ಶಾಲೆಗಳಲ್ಲಿ ಶಾಲಾ ಸಂಸತ್ತು ರಚನೆ ಮಾಡುತ್ತಿದ್ದು, ಇದು ಕೂಡಾ ಮಕ್ಕಳಲ್ಲಿ ನಮ್ಮ ದೇಶದ ರಾಜಕೀಯ ಚಿಂತನೆ ಮತ್ತು ಮಕ್ಕಳಲ್ಲಿ ಸೃಜನಶೀಲ, ಕ್ರಿಯಾತ್ಮ ಮನೋಭಾವ ಬೆಳೆಸುತ್ತದೆ. ಹಾಗೆ ತನ್ನ ಸುತ್ತಲಿನ ಪರಿಸರದಲ್ಲಿನ ಸಮಸ್ಯೆಗಳು ಮತ್ತು ಅದರ ಪರಿಹಾರಗಳನ್ನು ತಿಳಿಸುತ್ತದೆ.



**ರಾಜು ಸಹ ಶಿಕ್ಷಕರು ಸ.ಹಿ.ಪ್ರಾ.ಶಾ. ತಡಕಲ್**

## ಮಗು ಕಲಿಯುತ್ತದೆ



ಮಗು ಟೀಕೆಯಲ್ಲಿ ಜೀವಿಸಿದರೆ ಖಂಡಿಸುವುದನ್ನು ಕಲಿಯುತ್ತದೆ.
ಮಗು ಹೊಗಳಿಕೆಯಲ್ಲಿ ಜೀವಿಸಿದರೆ ಪ್ರಶಂಸಿಸುವುದನ್ನು ಕಲಿಯುತ್ತದೆ.
ಮಗು ದ್ವೇಷದಲ್ಲಿ ಜೀವಿಸಿದರೆ ಹೊಡೆಯುವುದನ್ನು ಕಲಿಯುತ್ತದೆ.
ಮಗು ತಾಳ್ಮೆಯಲ್ಲಿ ಜೀವಿಸಿದರೆ ಸಹನೆಯನ್ನು ಕಲಿಯುತ್ತದೆ.
ಮಗು ಅಪಹಾಸ್ಯದಲ್ಲಿ ಜೀವಿಸಿದರೆ ನಾಚಿಕೆಯನ್ನು ಕಲಿಯುತ್ತದೆ.
ಮಗು ಪ್ರೋತ್ಸಾಹದಲ್ಲಿ ಜೀವಿಸಿದರೆ ವಿಶ್ವಾಸವನ್ನು ಕಲಿಯುತ್ತದೆ.
ಮಗು ಸಮ್ಮತಿಯಲ್ಲಿ ಜೀವಿಸಿದರೆ ತನ್ನನ್ನೇ ತಾನು ಇಷ್ಟಪಡುವುದನ್ನು ಕಲಿಯುತ್ತದೆ.
ಮಗು ನ್ಯಾಯಸಮ್ಮತವಾಗಿ ಜೀವಿಸಿದರೆ ಕಾನೂನನ್ನು ಗೌರವಿಸುವುದನ್ನು ಕಲಿಯುತ್ತದೆ.
ಮಗು ಭದ್ರತೆಯೊಂದಿಗೆ ಜೀವಿಸಿದರೆ ನಂಬಿಕೆಯನ್ನು ಕಲಿಯುತ್ತದೆ.
ಮಗು ಪ್ರೀತಿ ಪ್ರೇಮ ಹಾಗೂ ಸಹಬಾಳ್ವೆಯಲ್ಲಿ ಬದುಕಿದರೆ ಈ ಜಗತ್ತಿನಲ್ಲಿ ಪ್ರೀತಿ ಹುಡುಕುವುದನ್ನು ಕಲಿಯುತ್ತದೆ.
ಮಕ್ಕಳು ತಾವು ಪಡೆದುದನ್ನು ಸಮಾಜಕ್ಕೆ ನೀಡುತಾರೆ. ಮಗು ಜೀವಿಸಿದ ರೀತಿಯಲ್ಲಿ ಕಲಿಯುತ್ತದೆ.

**ಶರಣಪ್ಪ ಸಭಾಪತಿ**
**ವಿ.ಮ.ಸಂ. ಮುದ್ದನಗುಡಿ**



*ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ.*

# ಪ್ರಾಥಮಿಕ ಶಿಕ್ಷಣ ಬದಲಾಗಲಿ ಆತ್ಮಹತ್ಯೆ ಅವಲೋಕನವಾಗಲಿ



ಮಾನಸಿಕ ಒತ್ತಡದಿಂದ ಮಕ್ಕಳು ಸೀಮೆ ಎಣ್ಣೆ ಸುರಿದು ಕೊಂಡು, ನೇಣು ಹಾಕಿಕೊಂಡು, ವಿಷಪೂರಿತ ಕ್ರಿಮಿನಾಶಕ ಸೇವಿಸಿ ಆತ್ಮ ಹತ್ಯೆಗೆ ಶರಣಾಗಿ ಸಾವಿಗೆ ಬಲಿಯಾದ ಲೆಕ್ಕವಿಲ್ಲದ ಅದೆಷ್ಟೋ ಮಕ್ಕಳ ದುರಂತದ ವರದಿಗಳು ನಮ್ಮ ಪ್ರಾಥಮಿಕ ಶಿಕ್ಷಣದ ದಿನಗಳನ್ನು ನೆನಪಿಸಿದವು. ಉದಾ: ವಿಜಾಪುರದಲ್ಲೊಬ್ಬ ಪ್ರಮೋದ ಜಾಧವ ಎನ್ನುವ ಬಾಲಕ ಬೆಂಕಿಗಾಹುತಿಯಾದ, ಬೆಂಗಳೂರಿನಲ್ಲೊಬ್ಬ ಬಾಲೆ ನೇಣಿಗೆ ಬಲಿಯಾದಳು. ದುಮತಿ ಗ್ರಾಮದಲ್ಲೊಬ್ಬ ಬಾಲಕ ವಿಷಪೂರಿತ ಕ್ರಿಮಿನಾಶಕ ಸೇವಿಸಿ ಸಾವಿಗೆ ಬಲಿಯಾದ. ಸತ್ಯವಾಗಿ ಹೇಳುವುದಾದರೆ ಆ ದಿನಗಳಲ್ಲಿ ನಮಗೆ ಶಾಲೆ ಒಂದು ಸೆರೆಮನೆ ಎನಿಸುತ್ತಿತ್ತು. ಆತಂಕ ಮೂಡುತ್ತಿತ್ತು. ಮೇಷ್ಟ್ರು ಬಂದು ಮುಂದೆ ನಿಂತಾಗ ಭಯದ ವಾತವರಣ ಮನೆಮಾಡುತ್ತಿತ್ತು. ಪುಸ್ತಕಗಳಿಗಿಂತ ಹೆಚ್ಚಾಗಿ ಬೆತ್ತ ಕಾಣತ್ತಿತ್ತು. ಆದರೆ ಇಂದು ಕಂಪ್ಯೂಟರ್ ಯುಗದಲ್ಲಿ ಪ್ರಾಥಮಿಕ ಶಿಕ್ಷಣದ ಪಠ್ಯಪುಸ್ತಕಗಳು ಬದಲಾಗುತ್ತಿವೆಯೆ ಹೊರತು ಶಿಕ್ಷಣದ ವಿಧಾನ ಬದಲಾಗುತ್ತಿಲ್ಲ. ಮಕ್ಕಳ ಮನವೊಲಿಸಿ ಮಕ್ಕಳು ತಾವಾಗಿಯೇ ಶಾಲೆಗೆ ಬರುವಂತ ವಾತವರಣ ನಿರ್ಮಿಸಲು ಸರ್ಕಾರ ಪೂರ್ಣ ಪ್ರಯತ್ನ ಮಾಡಬೇಕು.

ಆ ದಿನಗಳಲ್ಲಿ ನಾವು ಮೆಲಕು ಹಾಕಿ ನೋಡಿದಾಗ ದೇವದಾಸಿ ಪದ್ಧತಿ, ಬಾಲಕಾರ್ಮಿಕತೆ, ಬಾಲ್ಯವಿವಾಹ, ಜೀತಪದ್ಧತಿ ಇವುಗಳು ಸಮಾಜಕ್ಕಂಟಿದ ಪಿಡುಗು. ಆದರೆ ಇವುಗಳು ಕ್ರಮೇಣ ಈ ಪದ್ದತಿಗಳು ಅವನತಿಯ ಹಾದಿಯಲ್ಲಿರುವಾಗಲೇ ಆತ್ಮಹತ್ಯೆ ಮುಂದಿನ ದಿನಗಳಲ್ಲಿ ಒಂದು ಪಿಡುಗಾಗಿ ಸಮಾಜವನ್ನು ಕಾಡುವ ಸನ್ನಿವೇಶ ಬರುವದರಲ್ಲಿ ಅನುಮಾನವೇ ಇಲ್ಲ. ಪೋಷಕರ ಅತಿಯಾದ ಮಹಾತ್ವಾಕಾಂಕ್ಷೆಗಳ ಜೊತೆಗೆ ಮಕ್ಕಳ ಮಾನಸಿಕ, ಬೌದ್ಧಿಕ ಸಾಮರ್ಥ್ಯವನ್ನು ಪರಿಗಣಿಸದೇ ಅನಗತ್ಯವಾದ ಒತ್ತಡವನ್ನು ಹೇರುವದರಿಂದಾಗಿ ಮಕ್ಕಳು ಸಹ ಆತ್ಮಹತ್ಯೆಯಂತಹ ಕಠೋರ ಕ್ರಮಕ್ಕೆ ಮುಂದಾಗುತ್ತಾರೆ. ಪತ್ರಿಕೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪುಟ ತಿರುವಿ ನೋಡಿದಾಗ ಭಯೋತ್ಪಾದಕ ಕೃತ್ಯಗಳು, ದರೋಡೆ, ಬಲಾತ್ಕಾರ, ಮಕ್ಕಳ ಮಾರಾಟ ಮಹಿಳೆಯರ ಮೇಲೆ ದೌರ್ಜನ್ಯ, ಮೊದಲಾದ ಸಾಮಾನ್ಯವೆಂಬತಾಗಿದ್ದ ಸುದ್ದಿಗಳ ಜೊತೆಗೆ ಈಗ ಆತ್ಮಹತ್ಯೆಯಂತಹ ಸುದ್ದಿಗಳು ಸಹಜವೆನಿಸುತ್ತವೆ. ಮಕ್ಕಳ ಮನವೊಲಿಸಲು ಸಾಧ್ಯಾವಾಗದ ಒಣ ಪಠ್ಯವಿಧಾನದಿಂದ ಹುಟ್ಟುವ ವ್ಯಾದಿಯನ್ನು ನಿಲ್ಲಿಸಲಾಗದೆ ಅದಕ್ಕೆ ಸರ್ಕಾರ ಮನಶಾಸ್ತ್ರಜ್ಞರ ಔಷಧಿ ನೀಡುತ್ತಿರುವದು ಸರಿಯಲ್ಲ. ಮಕ್ಕಳು ಖುಷಿಯಿಂದ ಕಲಿಯುವಂತ ಶಿಕ್ಷಣದ ವಿಧಾನದ ಅಗತ್ಯವಿದೆ.

ಅದ್ದರಿಂದ ಸರ್ಕಾರ, ಸಮಾಜದ ಹಿತಚಿಂತಕರು ಮಕ್ಕಳ ಮನೋಸ್ಥೈರ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮನಸ್ಸು ಮಾಡಲಿ ಮಕ್ಕಳ ಬಾಲ್ಯವನ್ನು ಸಹಜವಾಗಿ ಅನುಭವಿಸಲು ಬಿಟ್ಟರೆ ಎಷ್ಟೋ ಸಮಸ್ಯೆಗಳು ಪರಿಹಾರವಾಗಬಹುದು. ಆಗ ಈ ಬಗೆಯ ಆತ್ಮಹತ್ಯೆ ಪ್ರಕರಣಗಳಿಗೆ ಕಡಿವಾಣ ಹಾಕಿದಂತಾಗುತ್ತದೆ.

**ಶ್ರೀ ಆರೋಗ್ಯಪ್ಪ ದುಮತಿ**
**ವಿಮುಕ್ತಿ ಸಿಬ್ಬಂದಿ ಪೋತ್ನಾಳ್**

ಚಿನ್ನದ ಚಿನ್ನರು ನಾವುಗಳು,
ಕನಸು ಕಾಣಲು ಹೊರಟಿಹೆವು
ಉಳಿಸಿರಿ ಬೆಳೆಸಿರಿ ನೀವುಗಳು,
ನಾಳಿನ ಬಾಳಿನ ಬೆಳಕಾಗಿ,
ಮಣ್ಣಿನ ಒಲುಮೆಯ ಕೂಸಾಗಿ.
ಇಳಿಸಿರಿ ಭಾರವ ಕಳೆಯಿರಿ ಭೇದವ,
ತುಂಬಿರಿ ಹರಸಿರಿ ಬದುಕಿನ ಚೇತನ,
ತೋರಿಸಿ ನಮ್ಮಯ ಬಾಳಿನ ದರ್ಶನ.
ಹಸುರಿನ ಪಸುರಿನ ಉಸಿರನು ಉಳಿಸಿ,
ಸಿರಿ ಕಂದರ ಕಾನನ ಹುಡುಕಿ.
ಕನಸನು ಕಾಣಲು ಹೊರಟಿಹೆವು
ಚಿನ್ನದ ಚಿನ್ನರು ನಾವುಗಳು
ಚಿತ್ರಲೋಕದ ಚಿನ್ನರು

**ಕುಮಾರಿ ಶ್ರೀದೇವಿ 10 ನೇ ತರಗತಿ**
**ಸ.ಹಿ.ಪ್ರಾ.ಶಾಲೆ. ದೇವಿಪುರ**



*ಮನಸ್ಸು ಎನ್ನುವುದು ಕನ್ನಡಿಯಂತೆ, ಅದಕ್ಕೆ ಪೆಟ್ಟು ಬಿದ್ದರೆ ಒಡೆದು ಹೋಗುತ್ತದೆ. ಪುನ: ಕೂಡಿಸುವುದು ಸಾಧ್ಯವಿಲ್ಲ.– ಎ.ಆರ್. ಕೃಷ್ಣ ಶಾಸ್ತ್ರಿ*

# ಶಿಕ್ಷಣದಲ್ಲಿ ಸರ್ಕಾರದ ಪಾತ್ರವೇನು? ನಿಜವಾದ ಅಭಿವೃದ್ಧಿ ಸಾಧ್ಯ

ಹಿಂದಿನ ಕಾಲದಲ್ಲಿ ಗುರುಕುಲದ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅದು ಗುರುಕುಲದ ಪದ್ಧತಿಯಾಗಿತ್ತು. ಅಲ್ಲಿ ವಿದ್ಯಾಭ್ಯಾಸ ಮಾಡು ವಿಧ್ಯಾರ್ಥಿಗಳು ಮಾತ್ರ ರಾಜ ಮನೆತನದವರು, ಊರಿನ ಮುಖಂಡರು, ಮೇಲ್ಜಾತಿಯವರು ಹೀಗೆ ಆಯಕಟ್ಟಿನಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಇಲ್ಲಿ ಶಿಕ್ಷಣವನ್ನು ಬಹಳ ಪರಿಶ್ರಮದಿಂದ ನೀಡಲಾಗುತ್ತಿತ್ತು. ಯಾಕೆಂದರೆ ಇಲ್ಲಿ ಶಿಕ್ಷಣಕ್ಕಿಂತ ಶಿಕ್ಷಣವನ್ನು ನೀಡುವ ಗುರುವೃಂದಕ್ಕೆ ಆಗಿನ ಆಡಳಿತದ ವರ್ಗದ ಮೇಲೆ ತುಂಬಾ ಭಯವನ್ನು ಹೊಂದಿದ್ದರು. ಯಾಕೆಂದರೆ ರಾಜಮನೆತನದ ಮತ್ತು ಮೇಲ್ಜಾತಿ ಮಕ್ಕಳು ಸರಿಯಾದ ರೀತಿಯಲ್ಲಿ ಶಿಕ್ಷಣವನ್ನು ಪಡೆಯದಿದ್ದರೆ ಅಲ್ಲಿ ಶಿಕ್ಷಣ ಕಲಿಸುವ ಗುರುಗಳನ್ನು ಕ್ರೂರವಾಗಿ ಶಿಕ್ಷಿಸುತ್ತಿದ್ದರು ಮತ್ತು ಅವರಿಗೆ ಪ್ರಾಣಭಯವನ್ನು ಹೇರುತ್ತಿದ್ದರು. ಯಾಕೆಂದರೆ ಮಕ್ಕಳು ಮುಂದಿನ ಒಳ್ಳೆಯ ಪ್ರಜೆಯಾಗುವಲ್ಲಿ ಶಿಕ್ಷಣ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಆದರಿಂದ ಆಗಿನ ಶಿಕ್ಷಣವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಿದ್ದರು. ಇಲ್ಲಿ ಶಿಕ್ಷಣ ನೀಡುತ್ತಿರುವ ಗುರುಗಳಿಗೂ ಮತ್ತು ಶಿಕ್ಷಣ ಪಡೆಯುವ ಮಕ್ಕಳಿಗೂ ಯಾವುದೇ ರೀತಿಯಲ್ಲಿ ಸಮಸ್ಯೆಗಳು ಬರದ ಹಾಗೆ ಸುವ್ಯವಸ್ಥೆಯನ್ನು ಆಡಳಿತ ವರ್ಗದವರು ರೂಪಿಸುತ್ತಿದ್ದರು.

ಆದರೆ ಈಗಿನ ಕಂಪ್ಯೂಟರ ಯುಗದಲ್ಲಿ ಶಿಕ್ಷಣ ಇಲ್ಲದಿದ್ದರೆ ಅವನು ಬೇರೆ ಬೇರೆ ಮೂಲಗಳನ್ನು ಹುಡುಕುವಲ್ಲಿ ಯಶಸ್ವಿಯಾಗುತ್ತಾನೆ. ಇಲ್ಲವೆ ಅವನು ಅಯಶಸ್ವಿಯಾಗುತ್ತಾನೆ. ಯಾಕೆಂದರೆ ಈಗಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ಜೀವಿಯು ತುತ್ತು ಆಹಾರಕ್ಕಾಗಿ, ತುಂಡು ಬಟ್ಟೆಗಾಗಿ, ವಾಸಿಸಲು ಸ್ವಲ್ಪ ಜಾಗಕ್ಕಾಗಿ ಪ್ರತಿನಿತ್ಯ ಪರಿತಪಿಸುತ್ತಾನೆ. ಯಾಕೆಂದರೆ ಅವನಿಗೆ ಸರಿಯಾದ ಶಿಕ್ಷಣ, ಸರಿಯಾದ ಮಾರ್ಗದ ಬಗ್ಗೆ ಜ್ಞಾನವಿರುವುದಿಲ್ಲ. ನಮ್ಮ ಸಮಾಜದ ಅಡಿಪಾಯ ಸರಿಯಾಗಿಲ್ಲ. ಯಾಕೆಂದರೆ ಬೆಳೆಯುವ ಪ್ರತಿಯೊಬ್ಬ ಮಗು ತನ್ನ ಸುತ್ತಮುತ್ತಲಿನ ಪರಿಸರವನ್ನು ಅನುಸರಿಸುತ್ತಾ ಬೆಳೆಯುತ್ತದೆ. ನಮ್ಮ ಸಮಾಜದಲ್ಲಿ ಪರಿಸರ ಎಂದರೆ ಅದು ಗ್ರಾಮೀಣ ಪ್ರದೇಶದಲ್ಲಿ ತುಂಬಾ ದುಸ್ತರವಾಗಿದೆ. ವ್ಯವಸ್ಥೆ ಯಾವ ಅಯಾಕಟ್ಟಿನಲ್ಲಿ ನೋಡಿದರು ಬೆಳೆಯುವ ಮಗುವಿಗೆ ಪೂರಕವಾಗಿಲ್ಲ. ಒಂದು ಕುಟುಂಬದಲ್ಲಿ ಮಗು ಒಳ್ಳೆಯ ನಾಗರಿಕನಾಗಿ ಬೆಳೆಯಬೇಕಾದರೆ ಅಲ್ಲಿ ಕುಟುಂಬ, ಪೌಷ್ಟಿಕ ಆಹಾರ, ಫ್ಲೋರೈಡ್ ಮುಕ್ತಿ ಶುದ್ದ ಕುಡಿಯುವ ನೀರು, ಸಮುದಾಯ, ಸುಸಜ್ಜಿತ ಶಾಲೆ, ಆರೋಗ್ಯ ಮುಂತಾದ ವಿಷಯಗಳಲ್ಲಿ ತುಂಬಾ ಸಮಸ್ಯೆಯಾಗುತ್ತಿದೆ.

ನಮ್ಮ ಸರ್ಕಾರಗಳು ಪ್ರತಿವರ್ಷ ಕೋಟಿಗಟ್ಟಲೆ ಹಣವನ್ನು ಬಜೆಟ್ ನಲ್ಲಿ ಮಂಡಿಸಿ ಯಾವುದೋ ಒಂದು ಮಹಾಕಾರ್ಯ ಮಾಡಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಾರೆ. ರಸ್ತೆ ಅಗಲೀಕರಣ, ಕಾರ್ಖಾನೆಗಳ ಸ್ಥಾಪನೆ, ಅನಾವಶ್ಯಕ ಕೋಟಿಗಟ್ಟಲೆ ಕಟ್ಟಡಗಳ ನಿರ್ಮಾಣಗಳು, ಐಟಿ ಬಿಟಿ ಎನ್ನುವ ಮಂತ್ರಗಳನ್ನು ಜಪಿಸುತ್ತಾರೆ. ಆದರೆ ಈ ಯೋಜನೆಗಳು ಅಭಿವೃದ್ಧಿಯನ್ನು ಸೂಚಿಸುವುದಿಲ್ಲ. ಯಾಕೆಂದರೆ ಡಾ: ಅಂಬೇಡ್ಕರ್ ಹೇಳಿದ್ದಂತೆ ಮೊದಲು ಶಿಕ್ಷಣ ಬಹಳ ಮುಖ್ಯ. ಶಿಕ್ಷಣದಿಂದ ಮಾತ್ರ ಪ್ರಗತಿ, ಅಭಿವೃದ್ಧಿ ಎನ್ನುವುದು ಸಾಧ್ಯ. ಆದರೆ ನಮ್ಮ ಸರ್ಕಾರಗಳು ನಗರ ಪಟ್ಟಣಗಳನ್ನು ಅಭಿವೃದ್ಧಿ ಪಡಿಸಿದರೆ ಅಭಿವೃದ್ಧಿ ಸಾಧ್ಯ ಎನ್ನುವ ಭ್ರಮೆಯಲ್ಲಿ ಕಾಲ ಕಳೆಯುತ್ತಿದ್ದಾರೆ. ಸರ್ಕಾರದ ಯೋಜನೆಗಳು ನೆಲಕಚ್ಚಿವೆ ಎನ್ನುವುದಕ್ಕೆ ಪ್ರತಿನಿತ್ಯ ಗ್ರಾಮೀಣ ಪ್ರದೇಶದ ಜನ ವಲಸೆ ಹೋಗುವುದೇ ಒಂದು ಒಳ್ಳೆಯ ಉದಾಹರಣೆ. ಇದರಿಂದ ಮಕ್ಕಳ ವಿದ್ಯಾಭ್ಯಾಸ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಎಷ್ಟು ಮಾರಕ ಎನ್ನುವುದನ್ನು ಗಮನಿಸಬೇಕಾಗಿದೆ.

ಆದರೆ ಶಿಕ್ಷಣಕ್ಕೆ ಎಷ್ಟರ ಮಟ್ಟಿಗೆ ಹಣವನ್ನು ಮೀಸಲಿಟ್ಟಿದ್ದಾರೆ ಎಂಬುವುದು ತುಂಬಾ ನಿಗೂಢವಾಗಿದೆ ಮತ್ತು ಮೀಸಲಿಟ್ಟ ಹಣ ಬರಿ ಕಟ್ಟಡಗಳಿಗೆ ಕಾರ್ಯಕ್ರಮಗಳಿಗೆ ವ್ಯರ್ಥವಾಗುತ್ತಿದೆ ಹೊರತು ಮಗುವಿನ ಶಿಕ್ಷಣದ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮಕಾರಿಯಾಗುತ್ತಿಲ್ಲ ಎನ್ನುವುದು ತುಂಬಾ ವಿಷಾದದ




*ಜೀವನವು ಮುಖ್ಯವಲ್ಲ. ಜೀವನದಲ್ಲಿ ನಾವು ತೋರುವ ಧೈರ್ಯ ಸಾಹಸಗಳು ಮಹತ್ವವು.–ವಾಲ್ ಪೋಲ್*

ಸಂಗತಿ. ಯಾಕೆಂದರೆ ವಿಶ್ವದಲ್ಲಿ ಗಮನ ಸೆಳೆದ ವಿಷಯವೆಂದರೆ ಮಕ್ಕಳ ಪಾಲನೆ ಪೋಷಣೆ ರಕ್ಷಣೆ ಎನ್ನುವ ಈ ವಿಷಯಗಳಿಗೆ ನಮ್ಮ ಸರ್ಕಾರದಲ್ಲಿ ಕವಡೆ ಕಾಸಿಗೂ ಕಿಮ್ಮತ್ತಿಲ್ಲ. ಯಾಕೆಂದರೆ ಪ್ರತಿನಿತ್ಯ ನಡೆಯುವ ಮಕ್ಕಳ ಮೇಲೆ ದೌರ್ಜನ್ಯವಾಗಿರಬಹುದು, ಅತ್ಯಾಚಾರಗಳಾಗಿರಬಹುದು, ಶೋಷಣೆಯಾಗಿರಬಹುದು ಇವುಗಳು ನಮ್ಮ ಕಾನೂನಿನಲ್ಲಿ ನಿಷ್ಟುರತೆ ಇಲ್ಲ ಅದ್ದರಿಂದ ಪ್ರತಿನಿತ್ಯ ಮಕ್ಕಳ ಮೇಲೆ ಇಂತಹ ಕೃತ್ಯಗಳು ನಡೆಯುತ್ತಿವೆ.

ಮಕ್ಕಳು ನಮ್ಮ ದೇಶದ ಮಾನವ ಸಂಪನ್ಮೂಲವೆಂದು ಬರೀ ಮಾತಿನಲ್ಲಿ ಬಿಂಬಿಸಿದರೆ ಸಾಲದು. ಪ್ರಗತಿ ಪರ ದೇಶಗಳಲ್ಲಿ ನಮ್ಮ ದೇಶ ಒಂದು ಎನ್ನುವುದಾದರೆ ಪ್ರಗತಿ ಪರ ಹಾದಿಯಲ್ಲಿ ಇರುವ ದೇಶಗಳು ಮಕ್ಕಳ ಪರವಾಗಿ ಯಾವ ಯಾವ ಯೋಜನೆಗಳನ್ನು ಕೈಗೊಂಡಿವೆ ಅಂತಹ ಯೋಜನೆಗಳನ್ನು ನಮ್ಮ ದೇಶದಲ್ಲಿ ಮತ್ತು ರಾಜ್ಯಗಳಲ್ಲಿ ಅನುಷ್ಠಾನ ಗೊಂಡರೆ ಮಾತ್ರ ನಮ್ಮ ಸರ್ಕಾರಗಳು ಮಕ್ಕಳ ಭವಿಷ್ಯ ರೂಪಿಸಲು ಸಾಧ್ಯ. ಆಗ ನಿಜವಾದ ಅಭಿವೃದ್ಧಿ ಸಾಧ್ಯ.

**ಶ್ರೀ ರವಿ ದೋತರಬಂಡಿ**
**ವಿಮುಕ್ತಿ ಸಿಬ್ಬಂದಿ, ಪೋತ್ನಾಳ್**


# ಕುವೆಂಪು



ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧಿರಾಗಿರುವವರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಇವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿ ಎಂಬ ಗ್ರಾಮದಲ್ಲಿ 1904 ಡಿಸೆಂಬರಿನ 29 ರಂದು ಜನಿಸಿದರು. ಇವರ ತಂದೆಯ ಹೆಸರು ವೆಂಕಟಪ್ಪ ತಾಯಿ ಸೀತಮ್ಮ. ಪುಟ್ಟಪ್ಪನವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿ ಆನಂತರ ಕುಲಪತಿಗಳಾಗಿ ಕೆಲಸ ಮಾಡಿ ನಿವೃತ್ತಿ ಹೊಂದಿದರು. ಕುವೆಂಪು ಕವಿಯಾಗಿ ಕನ್ನಡನಾಡಿನಾಧ್ಯಾಂತ ಹೆಸರಾದವರು. ರಾಷ್ಟ್ರಕವಿ ಬಿರುದಾಂಕಿತರಾದರು. ಇವರು ಕವಿತೆ, ಕಾದಂಬರಿ, ನಾಟಕ, ಸಣ್ಣ ಕತೆ, ವಿಮರ್ಶೆ ಮತ್ತು ಮಹಾಕಾವ್ಯವನ್ನು ಬರೆಯುತ್ತಾರೆ. ಕವನ ಸಂಕಲನಗಳು : ಕೊಳಲು, ನವಿಲು, ಪ್ರೇಮ ಕಾಶ್ಮೀರ, ಚಂದ್ರಮಂಚಕೆ ಬಾ ಚಕೋರಿ ಇನ್ನೂ ಮುಂತಾದವುಗಳು. ಕಾದಾಂಬರಿಗಳು: ಕಾನೂನು ಹೆಗ್ಗಡತಿ, ಮಲೆಗಳಲ್ಲಿ ಮಧುಮಗಳು. ಪ್ರಶಸ್ತಿಗಳು: ಶ್ರೀರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕೇಂದ್ರ ಸಾಹಿತ್ಯ ಅಕಡೆಮೆ ಪ್ರಶಸ್ತಿ, ಪಂಪ ಪ್ರಶಸ್ತಿ ಮತ್ತು ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ಕರ್ನಾಟಕ ರತ್ನ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರು 1998 ನವೆಂಬರ್ 10 ರಂದು ನಿದನರಾದರು.

**ಕುಮಾರಿ ಸರೋಜ 9 ನೇ, ಸಭಾಪತಿ ವಿ.ಮ.ಸಂ.ನಲಗಂದಿನ್ನಿ**

# ಗುರುಗಳಿಗೆ ನುಡಿ ನಮನ




**ಅಕ್ಷರ ಕಲಿಸಿದ ಗುರುಗಳೆ ನಿಮಗಿದೋ ಶತಕೋಟಿ ನಮನಗಳು**
**ಸಾಕ್ಷರ ಲೋಕದ ಅಧಿಪತಿ ಗುರುವಿಗೆ ಜನಮನದ ನಮನಗಳು**

**ಸಾವಿರ ಉರುವಲು ಉರಿದರೂ ಒಲೆಯಲಿ ದೀವಿಗೆಯಂತೆ ಬೆಳಕುಂಟೆ?**
**ನೀತಿ ಶೋಧಕರು ಇದ್ದರೂ ಜಗದಲಿ ಗುರುಗಳೇ ನಿಮಗೆ ಸಮರುಂಟೆ?**

**ತಿಂಗಳ ಬೆಳಕಿನ ಅಂಗಳವಾದರು ವೇಗದಿ ನಡಿಗೆ ಸಾಗುವುದೇ?**
**ಗುರು ನೀವಿಲ್ಲದೆ ವಿಧ್ಯೆಯು ಕಲಿತರು ಪರಿಣಿತಿ ನಮಗೆ ದಕ್ಕುವುದೇ?**

**ಬಾನಿನ ನಡುವಲಿ ನೇಸರ ಇದ್ದರೆ ಹೆಜ್ಜೆಗೆ ಯಾವ ಭಯವಿಲ್ಲ**
**ಗುರಿಯ ಜೊತೆಯಲಿ ಗುರುವೂ ಇದ್ದರೆ ಸಾಧನೆ ಎಂದು ದಣಿವಲ್ಲ.**

**ಕುಮಾರಿ ಶ್ರೀದೇವಿ 7 ನೇ ತರಗತಿ ಸ.ಹಿ.ಪ್ರಾ.ಶಾಲೆ. ದೇವಿಪುರ**

*ಪ್ರತಿಭೆ ಹುಟ್ಟಿನಿಂದ ಬರುತ್ತದೆ. ಅದಕ್ಕೆ ಯಾರು ಹಣ ಕೊಡಬೇಕಾಗಿಲ್ಲ.- ಆಸ್ಕರ್ ವೈಲ್ಡ್*







ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಅಧುನಿಕ ಮನೋಭಾವನೆಗಳನ್ನು ಮೈಗೂಡಿಸಿಕೊಂಡು ಕುಟುಂಬಗಳಲ್ಲಿ ಹೆಣ್ಣಿನ ಅಭಿಪ್ರಾಯವನ್ನು ಕೇಳಿ ಮುಂದುವರೆಯುವುದಿದೆ. ಆದರೆ ಬಹುತೇಕ ಸಂಪ್ರಾದಾಯಸ್ತ ಕುಟುಂಬಗಳಲ್ಲಿ ಹೆಣ್ಣಿನ ಪರಿಸ್ಥಿತಿ ಇಂದಿಗಿಂತ ಭಿನ್ನವಾಗಿಲ್ಲ. ಯಾವುದೋ ಒಂದು ಗಂಡನ್ನು ಮದುವೆಯಾಗಿ ಹೋದರೆ ಸಾಕು ಎನ್ನುವ ಮಾನಸಿಕ ಸ್ಥಿಗೆ ಹೆಣ್ಣು ತಲುಪಿ ಬಿಡುವ ಮುನ್ನ, ಹಿರಿಯರು ಎಚ್ಚೆತ್ತುಕೊಂಡು ಅವಳ ಭಾವನೆಗಳಿಗೆ, ಅಭಿಪ್ರಾಯಗಳಿಗೆ ಬೆಲೆ ಕೊಡಬಾರದೇಕೆ? ಅವಳ ಬದುಕನ್ನು ಅವಳೇ ಬದುಕಲು ಬಿಡಬಾರದೇಕೆ? ಜಗತ್ತಿನಲ್ಲಿ ಹೆಣ್ಣನ್ನು ಭೂಮಿತಾಯಿಗೆ ಹೋಲಿಸುತ್ತಾರೆ. ಭೂಮಿಯನ್ನು ಹೇಗೆ ತುಳಿದಾಡುತ್ತಾರೋ ಅದೇ ತರದಲ್ಲಿ ಹೆಣ್ಣಿನ ಬದುಕನ್ನು ತುಳಿದು ಬಿಡುತ್ತಾರೆ. ಒಂದು ಹೆಣ್ಣು ಜಗತ್ತಿನಲ್ಲಿ ಒಬ್ಬ ತಾಯಿಯಾಗಿ, ಅಕ್ಕನಾಗಿ, ತಂಗಿಯಾಗಿ, ಅತ್ತಿಗೆಯಾಗಿ, ಗೆಳತಿಯಾಗಿ, ಹೆಂಡತಿಯಾಗಿ, ಮಗಳಾಗಿಯೂ ಎಲ್ಲರ ಜೀವನದಲ್ಲಿ ಪಾತ್ರವಹಿಸುತ್ತಾಳೆ. ಅಂತಹ ಹೆಣ್ಣನ್ನೇ ಇಂದು ಕಾಲ ಕಸವನ್ನಾಗಿ ಕಾಣುತ್ತೀರೇಕೋ?

ಸೃಷ್ಟಿಯ ಮೂಲ ಹೆಣ್ಣು, ಲಕ್ಷ್ಮೀ, ದೇವತೆ, ಶಕ್ತಿ, ಮಾಯೆ, ಸಹನಾ ಮೂರ್ತಿ, ಪ್ರೀತಿಯ ಪ್ರತಿರೂಪ, ಕಣ್ಣಿಗೆ ಕಾಣುವ ದೇವರು ಹೀಗೆ ಹಲುವು ರೀತಿಯಲ್ಲಿ ಧರ್ಮ ಗ್ರಂಥಗಳು, ಸಾಧು ಶರಣರು, ಮೇಧಾವಿಗಳು, ಬುದ್ದಿಜೀವಿಗಳು ಹೆಣ್ಣಿಗೆ ಪೂರಕವಾಗಿ ಸಾಕ್ಷಿ ಹೇಳುತ್ತಿವೆ. ಆದರೆ ಈ ಕಲಿಯುಗದಲ್ಲಿ ನಡೆಯುತ್ತಿರುವ ಶೋಷಣೆ, ದೌರ್ಜನ್ಯಗಳು ಯಥೇಚ್ಚವಾಗಿ ನಡೆಯುತ್ತಿವೆ. ನಮ್ಮ ಕಾನೂನು ಪ್ರಕಾರ ಹೆಣ್ಣಿಗೆ ಸಮಾನ ಹಕ್ಕು ಇದೆ. ಹೆಣ್ಣಿಗೆ ಹೆಚ್ಚಿನ ಆದ್ಯತೆ ಇದೆ. ಆದರೆ ಇದು ಕೇಳಲು ಮಾತ್ರ. ನಿಜವಾಗಿ ನಡೆಯುವುದು ಹೆಣ್ಣಿಗೆ ನೋವೇ? ಪ್ರತಿಯೊಂದು ವಿಷಯದಲ್ಲಿ ಒಂದು ಹೆಣ್ಣು ಚಿಕ್ಕ ವಯಸ್ಸಿನಲ್ಲಿ ಹೆಣ್ಣು ವಿಧವೆಯಾದರೆ ಹಾಗೂ ಚಿಕ್ಕ ವಯಸ್ಸಿನಲ್ಲಿ ಒಂದು ಹೆಣ್ಣು ಒಂಟಿಯಾದರೆ ಜೀವನದಲ್ಲಿ ಅವಳಿಗೆ ಸಿಗುವುದು ಬರೀ ನೋವೇ? ಅವಳ ಜೀವನದಲ್ಲಿ ದೇವರು ಕೊಟ್ಟ ನೋವೇ ಜಾಸ್ತಿ ಇರುತ್ತೆ ಅದರ ಜೊತೆ ದಿನ ನಿತ್ಯ ಜನರು ಕೊಡುವ ನೋವು ಸಹಿಸಬೇಕು ಇದು ಸರಿಯೇ? ನೀವೇ ಯೋಚಿಸಿ.

ಒಬ್ಬ ಒಂಟಿ ಹೆಣ್ಣು ಆತ್ಮಹತ್ಯೆಗೆ ಯೋಚನೆ ಮಾಡುವುದಕ್ಕೆ ದಾರಿ ಮಾಡಿ ಕೊಡುವವರು ನಾವೇ. ಒಬ್ಬ ಒಂಟಿ ಹೆಣ್ಣಿಗೆ ಧೈರ್ಯ ತುಂಬಿ ಸಹನೆ ಹೇಳಿ ಅವಳಿಗೆ ಬದುಕಲು ಅವಕಾಶ ಒದಗಿಸಿ ಕೊಡಿ. ಅದು ಬಿಟ್ಟು ನೊಂದ ಮನಸ್ಸಿನ ಜೊತೆ ಆಟವಾಡಬೇಡಿ, ಚುಚ್ಚು ಮಾತುಗಳನ್ನಾಡುತ್ತಾ, ಕೆಟ್ಟದೃಷ್ಟಿಯಿಂದ ನೋಡುವುದನ್ನು ನಿಲ್ಲಿಸಿ ಪರಹೆಣ್ಣನ್ನು ಒಬ್ಬ ತಾಯಿಯಾಗಿ, ಅಕ್ಕನಾಗಿ, ತಂಗಿಯಾಗಿ, ಒಳ್ಳೆಯ ಸ್ನೇಹಿತೆಯಾಗಿ ಕಾಣಿ. ಹೆಣ್ಣಿನ ಭಾವನೆಗಳಿಗೊಂದಿಷ್ಟು ಬೆಲೆ ಕೊಡಿ.

**ಶ್ರೀಮತಿ ಮಲ್ಲಮ್ಮ ಉಟಕನೂರು**
**ವಿಮುಕ್ತಿ ಸಿಬ್ಬಂದಿ, ಪೋತ್ನಾಳ್**

## ಅಮೃತವಾಣಿ



ಜೀವನದ ದು:ಖ ದುಗುಡಗಳಿಗೆ ಆಸೆಯೇ ಕಾರಣವಾದರೆ.
ಅದಕ್ಕೆ ನಾನೆನ್ನುವ ಅವಿವೇಕವೆ ಕಾರಣ.
ಏಕೆಂದರೆ ಮನುಷ್ಯನಿಗೆ ಬೇಕು ಬೇಕು ಎಂಬ ಆಸೆ ಹುಟ್ಟುವುದು
ಮನುಷ್ಯ ಆಶಾ ಪಾಶಕ್ಕೆ ಸಿಲುಕಿ ನರಳುವದು
ಅದರಿಂದ ಬಾಳಿನ ಸು:ಖದ ಕೀಲಿಕೈಯೇ ವಿವೇಕ

**ಕು। ಎಲ್ಲಮ್ಮ, ತಡಕಲ್**



*ಇಡೀ ಜೀವನವೇ ಕೊನೆಗಣಾದ ಪ್ರಯೋಗ ಶಾಲೆ.–ನ್ಯೂಮನ್*



ಮಳೆಯ ಮುತ್ತು
ಬಿಸಿಲು ಬಲಿಯಿತು
ಧಗೆಯು ಹೆಚ್ಚಿತು
ಧರೆಯ ನೀರು ಆವಿಯಾಗಿ
ಕರಿ ಮೋಡ ಕಟ್ಟಿತು
ಇಳಿಯದೆ ಇಳೆಗೆ ಮಳೆಯಾಗಿ
ಹೋಯ್ತು ಎಲ್ಲಿಗೆ ಮಾಯವಾಗಿ
ಗಾಳಿಗೆ ಸಿಕ್ಕ ಮೋಡವಾಗಿ
ತೇಲಿ ಹೋಯ್ತು ವೇಗವಾಗಿ
ನೋಡುತ ರೈತನು ಮೋಡವನು
ಮಳೆಯನು ಕಾಯುತ ಸೋತಿಹನು
ಬಿತ್ತಿದ ಬೆಳೆಯು ಬರಲಿಲ್ಲ
ಬರಗಾಲದ ಬವಣೆ ಅಳಿಲಿಲ್ಲ
ಗಳೆವ ಬಿಟ್ಟು ಗುಳೆವ ಹೊರಟು
ಕೈ ಬೀಸಿ ಕರೆಯಿತು ನಗರದ ನೋಟು
ಭೂಮಿಯು ಎಂದಿಗೂ ಆಗಲಿಲ್ಲ ಹಸನ
ರೈತನು ಕೊನೆಗೆ ಕಂಡನು ಮಸನ.
(ರೈತನ ಕತ್ತು ಭೂಮಿಗೆ ಬಿತ್ತು)

**ಶ್ರೀ ಮಾಲತೇಶ ಕೋಲಕಾರ ಸಹ**
**ಶಿಕ್ಷಕರು. ಸ.ಹಿ.ಪ್ರಾ.ಶಾ. ಉದ್ಬಾಳ್**

# ಆಸ್ಪತ್ರೆಯ ಅವಾಂತರ

ಸುರುವಾಯ್ತು ಆಸ್ಪತ್ರೆ ಅವಾಂತರ
ಎಚ್ಚರಗೊಂಡರು ಸರಕಾರಿ ವೈದ್ಯರು
ಪತ್ರಿಕೆ ಕಾರ್ಯ ಮೆಚ್ಚಿಕೊಂಡಿತು ಸರ್ಕಾರ
ಅಧಿಕಾರಿಗಳು ವೈದ್ಯರಿಗೆ
ನೀಡಿದರು ಎಚ್ಚರ
ಬಡವರಿಗೆ ಸರ್ಕಾರಿ
ದವಾಖಾನೆಯೇ ಅಧಾರ
ಬಡಜನರು ಹೋಗುತ್ತಿರಬೇಕಾದ ಅನಿವಾರ್ಯ
ಗಬ್ಬು ವಾಸನೆ, ಸೊಳ್ಳೆ ಕಾಟದಿಂದ
ರೋಗಿಗೆ ಚಳಿಜ್ವರ
ಹಗಲಿರುಳು ಗೋಳಾಡಿದರೂ ಯಾರು
ಮಾಡಲಿಲ್ಲ ವಿಚಾರ
ಡಾಕ್ಟರ ಎಂದರೆ ನಮಗೆ ದೇವರ
ಅವರೇ ಬರದಿದ್ದರೆ ಹೇಗೆ ನಮ್ಮ ಹಣೆಬರಹ

**ಕುಮಾರಿ ಗೀತಾ**
**ಮುದ್ದನಗುಡಿ ವಿಮುಕ್ತಿ ಸಿಬ್ಬಂದಿ, ಪೋತ್ನಾಳ್**

# ನಮ್ಮನೆ ಕಥೆ

**ಅ ಮ್ಮ ನಮ್ಮನೆ ಕಥೆಯನ್ನು**
**ಆ ಡುತ್ತಾ ಹಾಡುತ್ತಾ ಹೇಳುವೆನು**
**ಇ ಲಿಯೊಂದಿತ್ತು ಬಿಲದಲಿ**
**ಈ ಚೆಗೆ ಬರುವ ಗತ್ತಿನಲಿ**
**ಉ ತ್ತಮವಾದ ಉಂಡೆಯನ್ನು**
**ಊ ಟದ ತಟ್ಟೇಲಿಟ್ಟಿದೆ**
**ಋ ಷಿ ಮುನಿಯಂತೆ ಮೌನದಲಿ**
**ಎ ಚ್ಚರ ವಹಿಸಿ ನೋಡಿದೆ**
**ಏ ರಿತು ಮೆಲ್ಲಗೆ ಇಲಿ ಅಲ್ಲಿ**
**ಐ ಷಾರಾಮದಿ ಉಂಡಿ ಬಳಿ**
**ಒ ರೆಸುತ ಸೊಂಡಿ ತಿನ್ನುತ ಉಂಡಿ**
**ಓ ಲುತ ತಿರುಗಿ ನಡೆದಿತ್ತು**
**ಔ ಷದಿ ಪಾಷಾಣ ಅದರಲ್ಲಿರಲು**
**ಅಂ ಜುತ ಅಂಗಾತ ಬಿದ್ದಿತು**
**ಅಃ ಎನ್ನುತ ಸತ್ತಿತ್ತು.**

**ಅಶೋಕ 7 ನೇ,**
**ವಿ.ಮ.ಸಂ.ನಲಗಂದಿನ್ನಿ**



# ಯುವ ಜೀವನದ ಸಾರ್ಥಕತೆಗೆ ದಶಸೂತ್ರಗಳು

ಉತ್ಸಾಹಿಯಾಗು ಆದರೆ ದುಡುಕಬೇಡ
ಕರುಣೆ ತೋರಿಸು ಆದರೆ ಮೋಸಹೋಗಬೇಡ
ಶೂರನಾಗು ಆದರೆ ಕಟುಕನಾಗಬೇಡ
ದಾನಿಯಾಗು ಆದರೆ ದರಿದ್ರನಾಗಬೇಡ
ತ್ಯಾಗಿಯಾಗು ಆದರೆ ಕಾಡಿಗೆ ಹೋಗಬೇಡ
ಮಿತವ್ಯಯ ಮಾಡು ಆದರೆ ಜಿಪುಣನಾಗಬೇಡ
ಮಧುರವಾಗಿರು ಆದರೆ ಗುಲಾಮನಾಗಬೇಡ
ಲಾಭಗಳಿಸು ಆದರೆ ಲೋಭಿಯಾಗಬೇಡ
ಸೇವೆ ಮಾಡು ಆದರೆ ಸ್ವಾರ್ಥಿಯಾಗಬೇಡ
ಭಾಗ್ಯವಂತನಾಗು ಆದರೆ ಬುದ್ಧಿಹೀನನಾಗಬೇಡ

**ಶ್ರೀ. ಎಂ.ಹುಸೇನಪ್ಪ ಬಿ.ಎ. ನಲಗಂದಿನ್ನಿ**



*ಮನುಷ್ಯನಲ್ಲಿಯ ಅಂತ:ಕರಣವೇ ಅವನ ನಿಜವಾದ ಮಿತ್ರನು.– ಅಜ್ಞಾತ.*

# ವಿಶ್ವದ ಟಾಪ್ 10 ಮಾಹಿತಿಗಳು

| ನಂ. | ದೇಶ/ಸ್ಥಾನ | ವಿಸ್ತೀರ್ಣ (ಚ.ಕಿ.ಮೀ.) |
|---|---|---|
| 1. | ಗ್ರೀನ್ ಲ್ಯಾಂಡ್ (ಕಲಾಟ್ ಡ್ಲಿಟ್ ನುನಾಟ್) | 21.75.600 |
| 2. | ನ್ಯೂಗಿನಿಯಾ/ ಪಪಾವ್ ನ್ಯೂಗಿನಿಯಾ ಇಂಡೋನೇಷ್ಯಾ | 7,85,753 |
| 3. | ಬೋರ್ನಿಯೊ/ ಇಂಡೋನೇಷ್ಯಾ, ಮಲೇಷ್ಯಾ, ಬ್ರೂನಿ | 7,48,168 |
| 4. | ಮಡಗಾಸ್ಕರ್ | 5,87,713 |
| 5. | ಬಫಿನ್ ದ್ವೀಪ/ ಕೆನಡಾ | 5.03.944 |
| 6. | ಸುಮಾತ್ರಾ/ ಇಂಡೋನೇಷ್ಯಾ | 4,43,065 |
| 7. | ಹೊನ್ಷು/ ಜಪಾನ್ | 2,27,413 |
| 8. | ಗ್ರೇಟ್ ಬ್ರಿಟನ್ | 2,18,077 |
| 9. | ವಿಕ್ಟೋರಿಯಾ ದ್ವೀಪ/ ಕೆನಡಾ | 2,17,292 |
| 10. | ಎಲ್ಲೆಸ್ ಮೆರ್ ದ್ವೀಪ/ ಕೆನಡಾ | 1,96,236 |

ಸಂಗ್ರಹ

## ಸಾಗರ ಕಂದಕಗಳು

| ಕ್ರ.ಸಂ. | ಕಂದಕ | ಆಳ(ಮೀಟರ್) |
|---|---|---|
| 1. | ಮಾರಿಯಾನ | 10.911 |
| 2. | ಟೋಂಗಾ | 10.882 |
| 3. | ಕುರಿಲ್- ಕಮ್ ಚಟ್ಕ | 10.542 |
| 4. | ಫಿಲಿಫ್ಪೀನ್ | 10.540 |
| 5. | ಕೆರ್ಮಾಡೆಕ್ | 10.047 |
| 6. | ಬೊನಿನ್ | 9.994 |
| 7. | ನ್ಯೂಬ್ರಿಟನ್ | 9.940 |
| 8. | ಇಝು | 9.780 |
| 9. | ಪ್ಯೊರ್ಟೋ ರಿಕೊ | 8.605 |
| 10. | ಯೂಫ್ | 8.257 |

ಹೆಸರು: ಕುಮಾರಿ
ಸುನಂದ ಮಾರ್ಗದರ್ಶಿ ವಿ. ಮ. ಸಂ. ಮುದ್ದನಗುಡಿ

## ದೇಶ ಇದ್ದ ಕಡೆ ಇದ್ದರೆ ಕ್ಷೇಮ

ಮೇಷ್ಟ್ರು : ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ೬೫ ವರ್ಷಗಳ ಮೇಲಾದರೂ ದೇಶ ಮುಂದೆ ಬರುತ್ತಿಲ್ಲ ಇದಕ್ಕೆ ಏನು ಕಾರಣ ಅಂತ ಯಾರಾದರೂ ಹೇಳ್ತಿರಾ?

ವಿಧ್ಯಾರ್ಥಿ: ಅದು ಹೇಗೆ ಸಾಧ್ಯ ಸರ್? ಮುಂದೆ ಹೋಗ್ಬೇಕು ಅಂದ್ರೆ ಹಿಮಾಲಯ ಪರ್ವತ ಅಡ್ಡ ಇದೆ. ಹಿಂದಕ್ಕೆ ಹೋದ್ರೆ ದೇಶ ಹಿಂದೂಮಹಾಸಾಗರದಲ್ಲಿ ಬೀಳುತ್ತೆ. ಅದ್ದರಿಂದ ಇದ್ದಲಿಯೇ ತೆಪ್ಪಗೆ ಇದ್ರೆ ಕ್ಷೇಮ ಅಲ್ವೆ ಸಾರ್?



ಭಾಗ್ಯಶ್ರೀ ತಂ. ಅಯ್ಯನಗೌಡ 5 ನೇ ತರಗತಿ
ಸ.ಕಿ.ಪ್ರಾ.ಶಾ.ದೋತರಬಂಡಿ

## ಅಂಕಿ 9 ರ ಮೋಜಿನ ಆಟ




**1x8+1=9**
**12x8+2=98**
**123x8+3=987**
**1234x8+4=9876**
**12345x8+5=98765**
**123456x8+6=987654**
**1234567x8+7=9876543**
**12345678x8+8=98765432**
**123456789x8+9=987654321**



## 9 ರ ವಿನೋದ ಆಟ

**987654321x9-1=8888888888**
**87654321x9-1=788888888**
**7654321x9-1=68888888**
**654321x9-1=5888888**
**54321x9-1=488888**
**4321x9-1=38888**
**321x9-1=2888**
**21x9-1=188**
**1x9-1=8**

ಶ್ರೀ ಅಮರೇಶ ಬೆಳವಾಟ ವಿಮುಕ್ತಿ ಸಿಬ್ಬಂದಿ,
ಪೋತ್ನಾಳ್




*ನಿಮ್ಮ ಬಲಗೈ ಕೊಟ್ಟಿದ್ದು ಎಡಗೈಗೆ ಗೊತ್ತಿರಬಾರದು- ಬೈಬಲ್*

# ಬೆಳೆಯುವ ಸಿರಿ ಮೊಳಕೆಯಲಿ



ನಮ್ಮಲ್ಲಿ ಮಕ್ಕಳಿಗೆ ಓದು ಬರಹ ಕಲಿಸಿ ಅವರಿಗೆ ಅಕ್ಷರಾಭ್ಯಾಸವನ್ನು ಕಲಿಸಬೇಕೆನ್ನುವುದು ಒಂದು ಸಂಸ್ಕಾರವಾಗಿದೆ. ಈ ವಿದ್ಯಾಭ್ಯಾಸಕ್ಕೆ ವಯಸ್ಸಿನ ಮಿತಿ ಇಲ್ಲ. ಕಲಿಯುವ ಆಸೆ ಮನಸ್ಸಿನಲ್ಲಿದ್ದರೆ ಎಷ್ಟು ಬೇಕಾದರೂ ಕಲಿಯಬಹುದು. ಶಾಲೆ ಕಾಲೇಜು ಕೆಲಸದಲ್ಲಿರುವವರಿಗೆ ಬಿಡುವಿನ ವೇಳೆಯ ಸದುಪಯೋಗ ಎಷ್ಟರ ಮಟ್ಟಿಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಈ ವಿಷಯ ಮನದಟ್ಟಾಗಲು ಇದು ಸರಿಯಾದ ಸಮಯ. ಪ್ರತಿಯೊಂದು ಮಕ್ಕಳಿಗೆ ಅನುವಂಶೀಯ ಗುಣಗಳು ಎಂದರೆ ಆರೋಗ್ಯ, ಪ್ರತಿಭೆ, ಸೃಜನಶೀಲತೆ ಮತ್ತು ಬುದ್ದಿ ಶಕ್ತಿ ಮಕ್ಕಳ ಪ್ರತಿಭೆಯನ್ನು ಚಿಕ್ಕಂದಿನಿಂದಲೇ ಗುರುತಿಸುವುದು ಈಗ ಬಹಳ ಸುಲಭ ಹೇಗೆಂದರೆ ಕಡಿಮೆ ಮಕ್ಕಳು ಮತ್ತು ಚಿಕ್ಕ ಕುಟುಂಬ. ಹಿಂದಿನ ಕಾಲದಲ್ಲಿ ಅವಿಭಕ್ತಿ ಕುಟುಂಬದಲ್ಲಿ ಮಕ್ಕಳು ಹೆಚ್ಚಿರುತ್ತಿದ್ದರು. ಸೌಲಭ್ಯಗಳು ಕಡಿಮೆ ಇದ್ದವು. ಅದ್ದರಿಂದ ಅಲ್ಲೊಂದು ಇಲ್ಲೊಂದು ಸ್ವಯಂ ಪ್ರತಿಭೆಯುಳ್ಳವರು ಮುತ್ತಿನ ಮಾಣಿಕ್ಯದಂತೆ ಕಾಣಿಸಿಕೊಳ್ಳುತ್ತಿದ್ದರು. ಹಿರಿಯರ ಅಧಿಕಾರ ಸಂಪ್ರಾದಾಯ ಮೂಢ ನಂಬಿಕೆ ಕಟ್ಟು ಪಾಡುಗಳಿಂದ ಮಕ್ಕಳ ಆಸೆ ಆಕಾಂಕ್ಷೆ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸರಿಯಾದ ಮಾರ್ಗದರ್ಶನ ಕೊಡುವ ಅವಕಾಶ ಇರಲಿಲ್ಲ. ಆದರೆ ಹಿಂದಿನ ಕಾಲದಲ್ಲಿ ಹಲವಾರು ಅಡ್ಡಿ ಆತಂಕಗಳು ಇದ್ದವು. ಒಂದು ಮಗುವಿನ ಭವಿಷ್ಯ ರೂಪಿಸುವುದು ಅವನ ಹಿರಿಯರ ವಿವೇಕದ ಮೇಲೆ ಮಗುವಿನ ಅದೃಷ್ಟ ಅವಲಂಬಿಸಿತ್ತು. ಆದರೆ ಈಗ ಹಾಗಿಲ್ಲ. ಸಣ್ಣ ಸಂಸಾರದಲ್ಲಿ ಮಗುವಿನ ಬುದ್ದಿ ಶಕ್ತಿ ವಿಶೇಷ ಆಸಕ್ತಿಗಳನ್ನು ಗಮನಿಸಿ ಪ್ರೋತ್ಸಾಹ ಕೊಡಲು ತಂದೆ ತಾಯಿ ಹಾಗೂ ಶಾಲೆಯಲ್ಲಿ ಗುರುಗಳು ಪ್ರಯತ್ನಸುತ್ತಾರೆ. ಆದ್ದರಿಂದ ಈಗ ಮಕ್ಕಳ ಅಭಿವೃದ್ಧಿ ಅಡೆ ತಡೆಗಳು ಕಡಿಮೆ. ಪ್ರತಿಯೊಬ್ಬರಿಗೆ ಇರುವ ಅನುವಂಶಿತಿಯ ಗುಣಗಳಲ್ಲಿ ಮೊದಲು ಆರೋಗ್ಯ. ಆರೋಗ್ಯ ಎಂಬ ಭಾಗ್ಯ ನಮಗೆ ನಮ್ಮ ತಲೆ ಮಾರಿನ ಕೊಡುಗೆ ಹಲವಾರು. ಅನುವಂಶಿಯ ಕಾಯಿಲೆಗಳ ಕಾಟವಿಲ್ಲದೆ. ದೇಹ ದಾರ್ಡ್ಯತೆ ಹೊಂದಿದ ಮಕ್ಕಳು, ಮಾನಸಿಕ ಆರೋಗ್ಯವನ್ನು ಹೊಂದಿರುವುದು ಸಹಜ. ಬುದ್ದಿ ಶಕ್ತಿ ಜಾಣತನವು ಇದಕ್ಕೆ ಹೊರತಲ್ಲ. ತಂದೆ ತಾಯಿ ಬುದ್ಧಿವಂತರಾಗಿದ್ದರೆ ಮಕ್ಕಳ ಜ್ಞಾಪಕ ಶಕ್ತಿ ಮತ್ತು ಪ್ರಜ್ಞಾವಂತಿಕೆ ಹೆಚ್ಚಾಗಿರುತ್ತದೆ. ಮಕ್ಕಳನ್ನು ಬೆಳೆಸುವ ತಂದೆ ತಾಯಿಯರ ಜವಾಬ್ದಾರಿ ಬಹುಮುಖ್ಯ. ಮಗುವಿನ ಜೊತೆ ಕಳೆಯುವ ಕಾಲದಲ್ಲಿ ಆಟದ ವೇಳೆಯಲ್ಲಿ ಆಟ ಪಾಠದ ಹೊತ್ತಿನಲ್ಲಿ ಪಾಠ ಹೀಗೆ ಪ್ರತಿಯೊಂದು ಕೆಲಸವನ್ನು ಗಮನವಿಟ್ಟು ಮಾಡಬೇಕು. ಈಗಿನ ಕಾಲದ ಮಕ್ಕಳು ಎರಡು ಮೂರು ವಯಸ್ಸಿನಲ್ಲಿಯೇ ಊಟಕ್ಕೆ ಅಳುವುದು ಸಹಜ. ನಾಲ್ಕು ಮಕ್ಕಳ ಜೊತೆ ಇದ್ದರೆ ಈ ಸಮಸ್ಯೆ ಇರುವುದಿಲ್ಲ. ಆದರೆ ನಾನಂತೂ ಕಾರ್ಟೂನ್ ನೆಟ್‌ವರ್ಕ ಹಾಕಿ ಟಿ.ವಿ. ಮುಂದೆ ಕೂಡಿಸಿ ತಿನ್ನಿಸಿದರೆ ೫ ನಿಮಿಷದಲ್ಲಿ ಕೆಲಸ ಮುಗಿದು ಹೋಗುತ್ತದೆ. ಇಲ್ಲದಿದ್ದರೆ ಒಂದು ಗಂಟೆಯ ಕಾಲ ಬೇಕು ಎಂದು ಎಷ್ಟೊಂದು ತಾಯಂದಿರು ಹಾಗೂ ಮಕ್ಕಳು ಹೇಳಿದ್ದನ್ನು ಕೇಳಿದ್ದೇವೆ. ಆದರೆ ಕೆಲಸ ಸುಲಭ ನಿಜ. ಆದರೆ ಮಗುವಿನ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಮಗುವಿಗೆ ನಾವೇ ಟಿ.ವಿ. ನೋಡುವ ಅಭ್ಯಾಸವನ್ನು ಬೆಳೆಸುತ್ತೇವೆ. ಕೆಟ್ಟ ಹವ್ಯಾಸಗಳನ್ನು ನಾವೇ ಕಲಿಸಿ ಆಮೇಲೆ ತಿದ್ದಲು ಹೋಗುವುದು ದಡ್ಡತನ. ಅದ್ದರಿಂದ ತಾಯಿಗೆ ಇದರ ಅರಿವು ಬಹಳ ಮುಖ್ಯ. ಮಕ್ಕಳ ತಂದೆ ತಾಯಿಯರ ಸಂಬಂಧ ಹತ್ತಿರವಾಗಿ ಒಲವು ಪ್ರೇಮದಿಂದ ಕೂಡಿರಬೇಕಾದರೆ ಅದಕ್ಕೆ ಹಣ ಖರ್ಚು ಮಾಡಬೇಕಾಗಿಲ್ಲ. ಮಕ್ಕಳಿಗೆ ಬಿಡುವಿದ್ದಾಗ ಬಿಡುವು ಮಾಡಿಕೊಂಡು ಜೊತೆಗಿದ್ದರೆ ಅದು ಅವರಿಗೆ ದೊಡ್ಡ ರಕ್ಷೆ. ತಂದೆ ತಾಯಿಗೆ ಮಗುವಿನ ಆಸಕ್ತಿ ಕ್ರಿಯಾ ಶಕ್ತಿ ಪ್ರತಿಭೆಯನ್ನು ಗುರುತಿಸಲು ಇದಕ್ಕಿಂತ ಸುಲಭ ದಾರಿಯಾವುದು ಇಲ್ಲ.



**ಶ್ರೀಮತಿ ಜೆಸ್ಸಿಂತಾ ಮುದ್ದನಗುಡಿ**
**ವಿಮುಕ್ತಿ ಸಿಬ್ಬಂದಿ, ಪೋತ್ನಾಳ್**

## ನಗುವಿನ ಮಹಿಮೆ

ಇನ್ನೊಬ್ಬರಿಗೆ ನೋವಾಗುವಂತೆ ನಗುವವನು....ಖಳನಾಯಕ
ನಕ್ಕು ಮನೋರಂಜಿಸುವವನು..........................ವಿಮರ್ಶಕ
ನಗುತ್ತಲೇ ವಿಜಯ ಸಾಧಿಸುವವನು................ಬುದ್ದಿವಂತ
ತನ್ನೊಳಗೆ ನಗುವವನು.......................................ಜ್ಞಾನಿ
ಗೆದ್ದರೂ ನಗದವನು...............................ಕರ್ಮಯೋಗಿ
ತಾನೇ ನಗುವವನು .........................................ಹುಚ್ಚ
ತನ್ನನ್ನೇ ನೆನೆದು ನಗುವವನು .........................ಕನಸುಗಾರ
ಮೈಮರೆತು ನಗುವವನು ..............................ರಸಿಕ
ಇನ್ನೊಬ್ಬರಿಗಾಗಿ ನಗುವವನು..........................ಆಯೋಗ್ಯ
ಇನ್ನೊಬ್ಬರನ್ನು ನೋಡಿ ನಗುವವನು ..................ಗರ್ವಿ

ಶಿವುಕುಮಾರ 5 ನೇ ತರಗತಿ ಸ.ಕಿ.ಪ್ರಾ.ಶಾ.ದೋತರಬಂಡಿ



# ಶಿಕ್ಷಣನಾ? ರೊಕ್ಕನಾ?



ಜಗತ್ತಿನ ಜೀವ ಸಂಕುಲವು ಒಂದು ರೀತಿನೀತಿಯನ್ನು ಹೊಂದಿದೆ. ಒಂದು ಉತ್ತಮವಾದ ಬೆಳೆಯನ್ನು ಪಡೆಯಬೇಕಾದರೆ ಉತ್ತಮ ಬೀಜವಿದ್ದರೆ ಸಾಲದು ಉತ್ತಮವಾದ ಫಲವತ್ತಾದ ಭೂಮಿ ಇರಬೇಕು, ಫಲವತ್ತಾದ ಭೂಮಿ ಇದ್ದರೆ ಸಾಲದು ಅದರ ಪೋಷಣೆಗೆ ಕೆಲಸ ಮಾಡಬೇಕು. ಈಗಿರುವಾಗ ನಾವು ಒಂದು ಉತ್ತಮವಾದ ಫಲ ಅಥವಾ ಫಲಿತಾಂಶ ಕಾಣಲು ಸಾಧ್ಯ.

ರಾಜ್ಯದಲ್ಲಿ ಅತೀ ಹಿಂದುಳಿದ ಜಿಲ್ಲೆ ರಾಯಚೂರು ಎನ್ನುವ ಹಣೆ ಪಟ್ಟಿ. ಸ್ವಾತಂತ್ರ್ಯ ಬಂದು ಸುಮಾರು 66 ವರ್ಷಗಳು ಕಳೆದಿವೆ. ಸಮಾಜಿಕವಾಗಿ ಆಗಿನಿಂದ ಈಗಿನವರೆಗೆ ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಅನೇಕ ಯೋಜನೆಗಳು ಅನುಷ್ಟಾನ ಗೊಂಡು ಲೆಕ್ಕವಿಲ್ಲದಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಇದುವರೆಗೆ ಯಾವುದೇ ಯೋಜನೆಯು ತನ್ನ ಗುರಿಯನ್ನು ಮುಟ್ಟಿಲ್ಲ. ಕಾರಣ ಯೋಜನೆಗಳನ್ನು ನಿಷ್ಟೂರವಾಗಿ ಅನುಷ್ಟಾನದ ಕೊರತೆಯಿಂದ, ಭ್ರಷ್ಟತೆಯಿಂದ, ಪರಿಶೀಲನೆ ಕೊರತೆ ಮುಂತಾದವುಗಳು ಕಾರಣವಾಗಿವೆ. ಅದ್ದರಿಂದ ಹಿಂದುಳಿದ ಜಿಲ್ಲೆ ಎಂಬ ಹಣೆ ಪಟ್ಟಿಗೆ ಕಾರಣವಾಗಿದೆ.

**ಶಿಕ್ಷಣ?:** ಈ ನಿಟ್ಟಿನಲ್ಲಿ ಈ ಭಾಗದ ಜನರು ಉತ್ತಮವಾದ ಬದುಕನ್ನು, ಜೀವನವನ್ನು ಕಾಣಲು ಹೇಗೆ ಸಾಧ್ಯ. ಅಭಿವೃದ್ಧಿಯ ಹಾದಿಯಲ್ಲಿ ಮುಖ್ಯವಾಗಿ ಶಿಕ್ಷಣದಲ್ಲಿ ಹಿಂದುಳಿದಿದೆ ಎಂದರೆ ತಪ್ಪಾಗಲಾರದು. ಉತ್ತಮ ಬದುಕನ್ನು ಅಥವಾ ಜೀವನವನ್ನು ಒಬ್ಬ ವ್ಯಕ್ತಿ ಸಾಗಿಸಬೇಕಾದರೆ ಶಿಕ್ಷಣ ಬಹಳ ಮುಖ್ಯವಾಗಿರುತ್ತದೆ. ಯಾಕೆಂದರೆ ಶಿಕ್ಷಣ ಪಡೆದ ವ್ಯಕ್ತಿ ಸಾಮಾಜದಲ್ಲಿ ಒಳ್ಳೆಯ ನಾಗರಿಕತ್ವದ ಗುಣಗಳಿಂದ ಜೀವನ ನಡೆಸುತ್ತಾನೆ. ಶಿಕ್ಷಣ ಪಡೆದ ವ್ಯಕ್ತಿ ತನ್ನ ಕುಟುಂಬವನ್ನು ವಿದ್ಯಾವಂತ ಕುಟುಂಬವನ್ನಾಗಿ ಪರಿವರ್ತನೆ ಮಾಡಿ, ಕುಟುಂಬದ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ಅವನಲ್ಲಿ ಮಾನವೀಯ ಮೌಲ್ಯಗಳು ಪರರ ಕಾಳಜಿ, ಸಮಾಜದ ಕಾಳಜಿ, ಪ್ರಗತಿಯ ಕಾಳಜಿಯಿಂದ ಇನ್ನೊಬ್ಬರಿಗೆ ಮಾರ್ಗದರ್ಶಿಯಾಗುತ್ತಾನೆ. ವಿದ್ಯೆ ಇಲ್ಲದವನು ಹದ್ದಿಗಿಂತ ಕಡೆ ಎನ್ನುವುದು ಸುಳ್ಳಲ್ಲ.

**ರೊಕ್ಕನಾ?**

ಈ ಆಧುನಿಕ ವೈಜ್ಞಾನಿಕ ಯುಗದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಹಣದ ಅವಶ್ಯಕತೆ ಬಹಳ ಮುಖ್ಯ. ವ್ಯಕ್ತಿಯ ದೈನಂದಿನ ಬದುಕಿನಲ್ಲಿ ಹಣವು ಪ್ರಮುಖ ಪಾತ್ರ ವಹಿಸುತ್ತದೆ. ಹಣವಿಲ್ಲದಿದ್ದರೆ ಈ ಕಲಿಯುಗದಲ್ಲಿ ಯಾವ ಕೆಲಸವನ್ನು ಮಾಡಲು ಅಸಾಧ್ಯ. ಶಿಕ್ಷಣವಿಲ್ಲದಿದ್ದರೂ ಅವನು ಹಣವನ್ನು ಉಪಯೋಗಿಸಿ ತನಗೆ ಬೇಕಾದದ್ದು ಪಡೆಯುತ್ತಾನೆ. ಆ ಹಣವನ್ನು ಗಳಿಸಲು ಅವನು ಬೇರೆ ಬೇರೆ ಮಾರ್ಗಗಳನ್ನು ಹುಡುಕಿ ಹಣಗಳಿಕೆಯಲ್ಲಿ ತೊಡಗುತ್ತಾನೆ. ಅವನ ದೃಷ್ಟಿಯಲ್ಲಿ ಹಣ ಜೀವನಕ್ಕೆ ಬಹಳ ಮುಖ್ಯ. ಅದುದರಿಂದ ಅವನು ಹಣಗಳಿಕೆಯಲ್ಲಿ ಹಿಂದು ಮುಂದು ನೋಡದೆ ಅನೇಕ ಅನೈತಿಕ ಚಟುವಟಿಕೆಗೆ ಕಾರಣವಾಗುತ್ತಾನೆ. ಅವನು ಹಣದಿಂದ ತಾನು ಒಬ್ಬ ಪ್ರತಿಷ್ಟೆಯ ವ್ಯಕ್ತಿ ಎನ್ನುವುದನ್ನು ಸಾಬೀತು ಪಡಿಸುತ್ತಾನೆ. ತನ್ನ ಕುಟುಂಬಕ್ಕೆ ಯಾವ ತೊಂದರೆಯಾಗದಂತೆ ಕಾರ್ಯನಿರ್ವಹಿಸುತ್ತಾನೆ. ಅವನು ಕೆಲವು ರೀತಿಯಲ್ಲಿ ಸಮಾಜದ ಪ್ರಗತಿ ಪರ ಕಾಳಜಿಯನ್ನು ತೋರುತ್ತಾ, ದುಡಿದ್ದರೆ ಏನಾದರೂ ಮಾಡಬಹುದು ಎನ್ನುವುದನ್ನು ಸಾಬೀತು ಪಡಿಸುತ್ತಾನೆ.

ಆದರೆ ಒಬ್ಬ ವ್ಯಕ್ತಿಗೆ ಶಿಕ್ಷಣ ಮುಖ್ಯನಾ? ಅಥವಾ ರೊಕ್ಕ ಮುಖ್ಯನಾ? ಎನ್ನುವ ಪ್ರಶ್ನೆಗೆ ನಾವು ಉತ್ತರ ಹುಡುಕಬೇಕಾಗಿದೆ. ಯಾಕೆಂದರೆ ರೊಕ್ಕ ಗಳಿಸಲು ನಾವು ಮಕ್ಕಳಿಂದ ಹಿಡಿದು ವೃದ್ದರವರೆಗೆ ಕೆಲಸಕ್ಕೆ ತೊಡಗುತ್ತೇವೆ. ಇದರಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ದಿನದ ಕೂಲಿಗಾಗಿ ಬಾಲಕಾರ್ಮಿಕರಾಗಿ ಹೊಲ ಗದ್ದೆಗಳಲ್ಲಿ ಹತ್ತಿ, ಮೆಣಸಿನಕಾಯಿ, ಕಳೆ, ಬೆಳೆ ಕೊಯ್ಯುವುದು, ಬೆಳೆ ನಾಟಿ ಮುಂತಾದ ಕೆಲಸಕ್ಕಾಗಿ ವಲಸೆ ಹೋಗುವುದು, ಹಣದ ಅಭಾವದಿಂದ ಬಾಲ್ಯವಿವಾಹಗಳು ನಡೆಯುವುದು, ವರದಕ್ಷಿಣೆ ಎನ್ನುವ ಪಿಡುಗಿಗೆ ಒಳಪಡುವುದು, ಬೇರೆ ಬೇರೆ ಮೂಲಗಳಿಂದ ಹಣಕ್ಕಾಗಿ ಬಲಿಯಾಗುವುದನ್ನು ನಾವು ನೋಡುತ್ತೇವೆ. ಯಾಕೆಂದರೆ ಇಲ್ಲಿ ಯೋಚನೆ ಮಾಡುವ ಶಕ್ತಿ ಇಲ್ಲದಿರುವುದು ಮತ್ತು ಇದು ಸರಿ ಇಲ್ಲವೆ ಇದು ತಪ್ಪು ಎನ್ನುವ ಕಲ್ಪನೆ ಆ ಬುದ್ಧಿವಂತಿಕೆ ಸಮಯಪ್ರಜ್ಞೆ ಇಲ್ಲದಿರುವುದು ಈ ಎಲ್ಲ ಅನಾಹುತಗಳಿಗೆ ಕಾರಣವಾಗುತ್ತದೆ. ಆದರೆ ಹಣವಿದ್ದವನು ಎಲ್ಲರನ್ನೂ ಹಣವಂತರನ್ನಾಗಿಸಲು ಸಾಧ್ಯವಿಲ್ಲ. ಬರೀ ಹಣದಿಂದ ಖ್ಯಾತಿಯನ್ನು ಗಳಿಸಿದ ವ್ಯಕ್ತಿಗಳು ಬಹಳ ವಿರಳ.

ಆದರೆ ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತದೆ. ಒಬ್ಬ ಒಳ್ಳೆಯ ಶಿಕ್ಷಕ ಸಾವಿರಾರು ವಿದ್ಯಾರ್ಥಿಗಳನ್ನು ಒಳ್ಳೆಯ ವಿದ್ಯಾರ್ಥಿಗಳಾಗಿ ರೂಪಿಸಲು

*ಒಳ್ಳೆಯ ವಿಚಾರಕ್ಕೆ ನೂರು ಕೈಗಳು ಸಹಾಯಕ್ಕೆ ಬರುವುವು.– ರಷಿಯನ್ ನಾಣ್ಣುಡಿ*

ಸಾಧ್ಯ. ಶಿಕ್ಷಣ ಪಡೆದ ವ್ಯಕ್ತಿ ಒಂದು ಒಳ್ಳೆಯ ಕುಟುಂಬ ಕಟ್ಟಲು ಸಾಧ್ಯ. ಎಲ್ಲರೂ ಶಿಕ್ಷಣ ಪಡೆಯುವುದರಿಂದ ಒಳ್ಳೆಯ ಸಮಾಜ ಕಟ್ಟಲು ಸಾಧ್ಯ. ಹಿಂದಿನ ಕಾಲದಿಂದ ಈಗಿನ ಕಾಲದವರೆಗೂ ಒಂದಲ್ಲ ಒಂದು ರೀತಿಯಲ್ಲಿ ಶಿಕ್ಷಣವನ್ನು ಕಾಣುತ್ತೇವೆ. ಮತ್ತು ಅವುಗಳನ್ನು ನಾವು ಸಾಕ್ಷಿ ಸಮೇತವಾಗಿ ಈಗಲೂ ಕಾಣಬಹುದಾಗಿದೆ. ವಿಶ್ವದಲ್ಲಿ ಒಬ್ಬ ಶ್ರೇಷ್ಟ ವ್ಯಕ್ತಿ ಎನ್ನುವ ಹೆಗ್ಗಳಿಕೆ ಪಾತ್ರ ವಾಗಿದ್ದಾನೆ ಎಂದರೆ ಅದಕ್ಕೆ ಮೂಲಕ ಕಾರಣ ಶಿಕ್ಷಣ. ನಮ್ಮ ದೇಶದಲ್ಲಿ ಮಹಾತ್ಮ ಗಾಂಧೀಜಿ, ನೆಹರು, ಡಾ: ಅಂಬೇಡ್ಕರ್, ಲಾಲ್ ಬಹುದ್ದೂರ್ ಶಾಸ್ತ್ರೀ, ಜಗಜೀವನ್ ರಾಮ್, ಕುವೆಂಪು, ದ.ರಾ.ಬೇಂದ್ರೆ, ಶಿವರಾಂ ಕಾರಂತ ಮುಂತಾದ ಅನೇಕ ವ್ಯಕ್ತಿಗಳು ಮಹಾನ್ ವ್ಯಕ್ತಿಗಳಾಗಲು ಅವರಲ್ಲಿರುವ ಆಸ್ತಿ ಕಾರಣವಾಗಲಿಲ್ಲ ಬದಲಿಗೆ ಅವರು ಇಡೀ ವಿಶ್ವದಲ್ಲಿ ಗುರುತಿಸಿಕೊಳ್ಳಬೇಕಾದರೆ ಅವರಲ್ಲಿರುವ ಆ ಅಕ್ಷರಜ್ಞಾನ ಅವರಲ್ಲಿರುವ ಆ ಶಿಕ್ಷಣದಿಂದ ಮಾತ್ರ ಸಾಧ್ಯ.

**ಶ್ರೀಮತಿ ಚೌರಮ್ಮ, ದೋತರಬಂಡಿ**

# ಬದುಕಿನ ಪಾಠ



**ಬದುಕೊಂದು ಕೋಟೆ –ಭೇದಿಸಿ ಒಳಹೊಕ್ಕು ನೋಡು**
***ಬದುಕೊಂದು ದು:ಖ–ಅದರಿಂದ ಹೊರಬಂದು ನಿಲ್ಲು**
***ಬದುಕೊಂದು ಜವಾಬ್ದಾರಿ–ನೆರವೇರಿಸಿ ಸಂತೃಪ್ತನಾಗು**
***ಬದುಕೊಂದು ಆಟ –ಆಡಿ ಗೆಲುವು ಸಾದಿಸು**
***ಬದುಕೊಂದು ರಹಸ್ಯ–ಭೇದಿಸಿ ಪರಿಹರಿಸು**
***ಬದುಕೊಂದು ಹಾಡು–ಹಾಡಿ ಸುಶ್ರಾವ್ಯಗೊಳಿಸು**
***ಬದುಕೊಂದು ಅದೃಷ್ಟ –ಸ್ವೀಕರಿಸಿ ಅನುಭವಿಸು**
***ಬದುಕೊಂದು ಪ್ರಯಾಣ –ಪ್ರಯಾಣಿಸಿ ಗುರಿಮುಟ್ಟು**
***ಬದುಕೊಂದು ವಾಗ್ದಾನ –ಉಳಿಸಿಕೊಂಡು ಮಾದರಿಯಾಗು**
***ಬದುಕೊಂದು ಪ್ರೇಮ –ಆಸ್ವಾದಿಸಿ,ಆರಾಧಿಸಿ,ಅನುಭವಿಸು**
***ಬದುಕೊಂದು ಉತ್ಸಾಹ – ಪಡೆದು ಉತ್ಸಾಹಿಯಾಗು**
***ಬದುಕೊಂದು ಹೋರಾಟ –ಹೋರಾಡಿ ಗೆಲುವು ಸಾಧಿಸು**
***ಬದುಕೊಂದು ಒಗಟು –ಒಗಟು ಬಿಡಿಸು**
***ಬದುಕೊಂದು ಲಕ್ಷ್ಯ – ಗುರಿಯಿಟ್ಟು ಗೆಲುವು ಸಾಧಿಸು**
***ಬದುಕೊಂದು ಸೌಂದರ್ಯ –ಅದನ್ನು ಪ್ರಶಂಸಿಸು**
***ಬದುಕೊಂದು ಸಂಗ್ರಾಮ –ಭಾಗಹಿಸಿ ಜಯಿಸು**
***ಬದುಕೊಂದು ಆಹ್ವಾನ –ಸ್ವೀಕರಿಸು,ಭಾಗವಹಿಸು**
***ಬದುಕೊಂದು ನಾಟಕ –ಪಾತ್ರವಹಿಸು**

**ಕುಮಾರಿ ನಾರಾಯಣಮ್ಮ ಪ್ರಧಾನ ಮಂತ್ರಿ, ವಿ, ಮ, ಸಂ. ದೇವಿಪುರ**

ದೀನ ದಲಿತ ಮಕ್ಕಳ
ಉದ್ದಾರಕ್ಕಾಗಿ ಹುಟ್ಟಿದ ಶಕ್ತಿ
ಅದುವೇ ವಿಮುಕ್ತಿ.
ಮಕ್ಕಳ ಮನದಿ ಶಕ್ತಿ ತುಂಬಿ
ಮುಕ್ತಿ ತೋರೋ ವಿಮುಕ್ತಿ
ಕೇಳಿರಣ್ಣ ಹೇಳುತ್ತೀನಿ ಇದರ ಶಕ್ತಿ
ಹಳ್ಳಿ ಗಲ್ಲಿ ಮಕ್ಕಳಲ್ಲಿ
ಜ್ಞಾನದ ಬೆಳಕು ಚೆಲ್ಲಿ
ಊಟ ವಸತಿ ಬಟ್ಟೆ ಕೊಟ್ಟು
ಸಲುವುತ್ತಿಹರು ವಿಮುಕ್ತಿಯಲ್ಲಿ
ಸೇವೆಯ ಮಾಡೋ ಯುವಕರ ದಂಡು
ಹಗಲು ಇರಳು ಶ್ರಮಿಸಿ
ವಿಶ್ವವು ಬೆರಗಾಗುತ್ತಿಹದು ಇದನ್ನು ಕಂಡು
ಸ್ವಾರ್ಥ ಭಾವವಿಲ್ಲದೆ
ನಿಸ್ವಾರ್ಥ ಸೇವೆಯಲ್ಲಿ
ಬೆಳೆಯುತ್ತಿದೆ ನೋಡು ವಿಮುಕ್ತಿ ಇಲ್ಲಿ ಪೋತ್ನಾಳನಲ್ಲಿ

**ಶ್ರೀ ರಂಗನಾಥ ಕೆ.**
**ಸಹಶಿಕ್ಷಕರು ಸ.ಹಿ.ಪ್ರಾ.ಶಾ. ಜೀನೂರು.**


# ನಗೆ ಹನಿ

| | | |
|---|---|---|
| ಮೇಸ್ಟ್ರು | : | ಬಾದಾಮಿ ಹಾಲು ಹೇಗೆ ತಯಾರಿಸುತ್ತಾರೆ. |
| ಗುಂಡ | : | ವೆರಿ ಸಿಂಪಲ್ ಸರ್ ಹಸುವಿಗೆ ಬಾದಾಮಿ ತಿನ್ನಿಸಿ ಹಾಲು ಕರೆದರೆ ಬಾದಾಮಿ ಹಾಲು ಬರುತ್ತೆ. |
| ಮೇಸ್ಟ್ರು | : | ಗೋಲ್ ಗುಂಬಾಸ್ ಎಲ್ಲಿದೆ?. |
| ರಾಜು | : | ಗೊತ್ತಿಲ್ಲ ಸರ್. |
| ಮೇಸ್ಟ್ರು | : | ನಿನಗೆ ಎಷ್ಟು ಸಲ ಹೇಳಿದ್ರು ಅಷ್ಟೇ, ಬೆಂಚಿನ ಮೇಲೆ ನಿಲ್ಲೋ ಕತ್ತೆ. |
| ರಾಜು | : | ಬೆಂಚಿನ ಮೇಲೆ ನಿಂತರೆ ಗೋಲ್ ಗುಂಬಾಸ್ ಕಾಣುತ್ತಾ ಸರ್? |

**ಗೋಪಾಲ 8 ನೇ ತರಗತಿ**
**ಸ.ಹಿ.ಪ್ರಾ.ಶಾ.ಮುದ್ದನಗುಡಿ**

| | | |
|---|---|---|
| ಮಗ | : | ಅಪ್ಪಾ ಕಾಲೇಜಿಗೆ ಹೋಗಲು ನನಗೆ ಬೈಕ್ ಬೇಕು. |
| ಅಪ್ಪ | : | ಕತ್ತೆ ದೇವರು ನಿನಗೆ ಎರಡು ಕಾಲು ಕೊಟ್ಟಿರೋದು ಯಾಕೆ? |
| ಮಗ | : | ಒಂದು ಕಾಲು ಗೇರ್ ಚೇಂಜ್ ಮಾಡೋಕೆ ಇನ್ನೊಂದು ಬ್ರೆಕ್ ಹಾಕೋಕೆ. |

**ಮುತ್ತಮ್ಮ, 7 ನೇ ತರಗತಿ**
**ಸ.ಹಿ.ಪ್ರಾ.ಶಾ. ಪೋತ್ನಾಳ್**






*ನಿನ್ನ ಮೇಲೆ ನೀನು ವಿಜಯ ಸಾಧಿಸು, ಅದೇ ದೊಡ್ಡ ವಿಜಯ–ಪ್ಲೇಟೋ*

# ಸಾರ್ವಜನಿಕರಿಗೆ ಸರಕಾರದ ಸೌಲಭ್ಯಗಳು

ವೃದ್ಧರು, ವಿಧವೆಯರು, ಅಂಗವಿಕಲರು, ಗರ್ಭಿಣಿ ಮಹಿಳೆ, ಬೆಂಕಿ ಅನಾಹುತ ನೆರೆಹಾವಳಿ, ಸಿಡಿಲು ಬಡಿತಿ, ಅತಿವೃಷ್ಟಿ ಮುಂತಾದವುಗಳಿಂದಾಗಿ ಹಾನಿಗೊಳಗಾದವರು, ಆಕಸ್ಮಿಕವಾಗಿ ಮೃತನಾದ ಬಡವ್ಯಕ್ತಿಯ ಕುಟುಂಬದವರು ಮುಂತಾದವರಿಗಾಗಿ ಕರ್ನಾಟಕ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಿ ಇದರ ಮೂಲಕ ಅನೇಕ ಸೌಲಭ್ಯಗಳನ್ನು ಸಾರ್ವಜನಿಕರು ತಮ್ಮ ಅವಶ್ಯಕತೆ ಹಾಗೂ ಅರ್ಹತೆಗೆ ತಕ್ಕಂತೆ ಪಡೆಯತಕ್ಕದ್ದು.




1. ವೃದ್ಧಾಪ್ಯ ವೇತನ: 65 ವರ್ಷ ವಯಸ್ಸಾದ ನಿರ್ಗತಿಕ ಹಾಗೂ ಗಂಡು ಮಕ್ಕಳು ಇಲ್ಲದ ವೃದ್ಧನು ಪ್ರತಿ ತಿಂಗಳು 400/-(ನಾಲ್ಕು ನೂರು ರೂಪಾಯಿತಿ)ಗಳನ್ನು ತಿಂಗಳಿಗೆ ಪಡೆಯುವ ಹಕ್ಕುಳ್ಳವನಾಗಿರುತ್ತಾನೆ.

➤ **ವೃದ್ಧಾಪ್ಯ ವೇತನ ಪಡೆಯಲು ಇರಬೇಕಾದ ಅರ್ಹತೆಗಳು ಯಾವುವು?**

ವೃದ್ಧಾಪ್ಯ ವೇತನವನ್ನು ಪಡೆಯಲು ಹೆಂಗಸಾಗಲೀ, ಗಂಡಸಾಗಲೀ ಅರ್ಹತೆಯನ್ನು ಹೊಂದಿರುತ್ತಾರೆ. ಅಂದರೆ ಆತ/ಆಕೆ ಮೂರು ವರ್ಷಗಳವರೆಗೆ ಕರ್ನಾಟಕದ ಒಂದೇ ಸ್ಥಳದಲ್ಲಿ ವಾಸಮಾಡಿರಬೇಕು (Resident) ಅರ್ಜಿಯನ್ನು ತಹಸೀಲ್ದಾರರ ಕಛೇರಿಯಲ್ಲಿ ಪಡೆದು ಈ ಕೆಳಗಿನ ಮಾಹಿತಿಗಳೊಡನೆ ಸಲ್ಲಿಸತಕ್ಕದ್ದು.

ಅ) ವಯಸ್ಸಿಗೆ ಸಂಬಂಧಪಟ್ಟಂತೆ ಜನನ Cetificate ಅಥವಾ ವೈದ್ಯಾಧಿಕಾರಿಯವರಿಂದ ಪಡೆದ ವಯಸ್ಸಿನ ಪ್ರಮಾಣ ಪತ್ರ.

ಆ) ಪಾಸ್ ಪೋರ್ಟ್ ಅಳತೆಯ 6 ಫೋಟೋಗಳು

ಇ) ಕುಟುಂಬ ಪಡಿತರ ಚೀಟಿಯ(ರೇಶನ್ ಕಾರ್ಡ್) ಪ್ರತಿ ಅಥವಾ ಮತದಾರರ ಪಟ್ಟಿಯ ಪ್ರತಿ ಇವುಗಳನ್ನು ಅರ್ಜಿಯ ಜೊತೆ ಲಗತ್ತಿಸಬೇಕು.

2. ವಿಧವಾ ವೇತನ: ನಿರ್ಗತಿಕ ವಿಧವೆಯು ಪ್ರತಿ ತಿಂಗಳು 400/ರೂಗಳ ವೇತನ ಪಡೆಯಲು ಹಕ್ಕುಳ್ಳವಳಾಗಿರುತ್ತಾಳೆ. ಆಕೆಯ ಗಂಡನು ತೀರಿಕೊಂಡ 3 ತಿಂಗಳೊಳಗಾಗಿ ಅರ್ಜಿಯನ್ನು ಸಕಾಲದಲ್ಲಿ ಸಲ್ಲಿಸಿದರೆ 10,000/ರೂ ಗಳನ್ನು ಪಡೆಯಲು ಅರ್ಹಳಾಗಿರುತ್ತಾಳೆ.

➤ ವಿಧವಾ ವೇತನ ಪಡೆಯಲು ಇರಬೇಕಾದ ಅರ್ಹತೆಗಳೇನು?

ವಿಧವೆಯು ಕರ್ನಾಟಕದಲ್ಲಿ ಒಂದೇ ಸ್ಥಳದಲ್ಲಿ ಕನಿಷ್ಟ ಪಕ್ಷ 3 ವರ್ಷಗಳವರೆಗೆ ವಾಸ ಮಾಡಿರಬೇಕು. ಆಕೆಗೆ 18 ವರ್ಷದ ಗಂಡು ಮಕ್ಕಳು ಇರಬಾರದು. ಆಕೆಯು ತನ್ನ ಅರ್ಜಿಯೊಡನೆ ಈ ಕೆಳಗಿನ ಮಾಹಿತಿಗಳನ್ನು ಒದಗಿಸಬೇಕು.

ಅ) ತನ್ನ ಗಂಡನು ಮರಣ ಹೊಂದಿರುವ ಬಗ್ಗೆ Death Certificate ಪ್ರಮಾಣ ಪತ್ರವನ್ನು ಹೊಂದಿರಬೇಕು.

ಆ) ಕುಟುಂಬ ಪಡಿತರ ಚೀಟಿಯ ಪ್ರತಿ ( ರೇಶನ್ ಕಾರ್ಡ್ ಅಥವಾ ಮತದಾರರ ಪಟ್ಟಿಯ ಪ್ರತಿ)

ಇ) ಪಾಸ್ ಪೋರ್ಟ್ ಅಳತೆಯ 6 ಫೋಟೋಗಳು.

ಈ ಎಲ್ಲಾ ದಾಖಲಾತಿಗಳೊಡನೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತಹಶೀಲ್ದಾರರವರ ಕಛೇರಿಗೆ ಸಲ್ಲಿಸಬೇಕು. ವಿಧವೆಗೆ Minor ಅಪ್ರಾಪ್ತ (ಗಂಡು ಮಕ್ಕಳು ಇದ್ದರೆ) ಅವರ ಹೆಸರು ವಯಸ್ಸು ಮುಂತಾದ ವಿವರಗಳನ್ನು ಅರ್ಜಿಯಲ್ಲಿ ತಿಳಿಸಿರಬೇಕು. ಹಿರಿಯ ಮಗನಿಗೆ 18 ವರ್ಷ ತುಂಬುವವರೆಗೆ ಮಾತ್ರ ವಿಧವೆಯು ವಿಧವಾ ವೇತನ ಪಡೆಯಲು ಅರ್ಹಳಾಗಿರುತ್ತಾಳೆ.

3. ಅಂಗವಿಕಲ ವೇತನ:

ಅಂಗವಿಕಲ ಎಂದರೆ ಯಾರು?

ಅ) ಕೈ ಅಥವಾ ಕಾಲು ಇಲ್ಲದೆ ಶೇಕಡಾ 50 ರಷ್ಟು ಅಂಗವಿಕಲತೆಯನ್ನು ಹೊಂದಿದವರು.

ಆ) ಎರಡೂ ಕಣ್ಣು ಇಲ್ಲದ ಕುರುಡರು

ಇ) ಬುದ್ಧಿ ಮಾಂದ್ಯರು

ಈ) ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರು.

ಉ) ಕುಷ್ಟ ರೋಗದಿಂದ ಬಳಲುತ್ತಿರುವವರು.

ಊ) ಎರಡು ಕಿವಿಗಳೂ ಕೇಳಿಸದೆ ಇರುವವರು.

ಋ) ಮೂಗರು– ಈ ಎಲ್ಲಾ ವ್ಯಕ್ತಿಗಳೂ ಅಂಗವಿಕಲತೆಯ ಗುಂಪಿಗೆ ಸೇರಿದವರಾಗಿರುತ್ತಾರೆ. ಇಂತಹ ಅಂಗವಿಕಲ ವ್ಯಕ್ತಿಯು ಪ್ರತಿ ತಿಂಗಳೂ 400/ ರೂ

ಗಳ ವೇತನ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಈ ವ್ಯಕ್ತಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತಹಶೀಲ್ದಾರರಿಗೆ ಸಲ್ಲಿಸಬೇಕು.

**ಅಂಗವಿಕಲತೆಯ ವ್ಯಕ್ತಿಗೆ ಇರಬೇಕಾದ ಅರ್ಹತೆಗಳು ಯಾವುವು?**

1. ಅರ್ಜಿದಾರ ಅಂಗವಿಕಲನು ಕನಿಷ್ಟ 3 ವರ್ಷಗಳವರೆಗೆ ಕರ್ನಾಟಕದಲ್ಲಿ ಒಂದೇ ಸ್ಥಳದಲ್ಲಿ ವಾಸವಾಗಿದ್ದಿರಬೇಕು
2. ಆತನು ಅಂಗವಿಕಲತೆಯ ಯಾವುದಾದರೂ ಒಂದು ಗುಂಪಿಗೆ ಸೇರಿದವನಾಗಿರಬೇಕು.
3. ಆತನು ಅಪ್ರಾಪ್ತ ವಯಸ್ಕನಾಗಿದ್ದರೆ (Minor) ಆತನ ತಂದೆ ತಾಯಿಗಳು ಆತನ/ಆಕೆಯ ಪರವಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಬೇಕು.

ಅ. ಅಂಗವಿಕಲತೆಯ ಬಗ್ಗೆ ವೈದ್ಯಾಧಿಕಾರಿಯಿಂದ ಪಡೆದ ಪ್ರಮಾಣ ಪತ್ರ (Affidavit)

ಆ. ಕುಟುಂಬ ಪಡಿತರ ಚೀಟಿ (ರೇಶನ್ ಕಾರ್ಡನ ಪ್ರತಿ) ಅಥವಾ ಮತದಾರರ ಪಟ್ಟಿಯ ಪ್ರತಿ

ಇ. ಪಾಸ್ ಪೋರ್ಟ್ ಅಳತೆಯ 6 ಪೋಟೋಗಳನ್ನು ಲಗತ್ತಿಸಿರಬೇಕು.

4. **ಹೆರಿಗೆ ಭತ್ಯೆ:** ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆಯ ಅಡಿಯಲ್ಲಿ 19 ವರ್ಷಗಳಿಗಿಂತ ಹೆಚ್ಚಿನ ವಯಸ್ಸಾದ ಮತ್ತು ವಾರ್ಷಿಕದ ಆದಾಯವು ಕಾಲ ಕಾಲಕ್ಕೆ ಸರಕಾರವು ನಿಗದಿಸಿದಂತೆ ಕಡಿಮೆ ಇರುವ ಕುಟುಂಬದ ಮಹಿಳೆಗೆ ಇಬ್ಬರು ಜೀವಂತ ಮಕ್ಕಳ ಹೆರಿಗೆಯ ಸಂಬಂಧವಾಗಿ (ಅಂದರೆ 2 ಮಕ್ಕಳು ಜೀವಂತವಾಗಿ ಹುಟ್ಟಬೇಕು) ಬೇರೆ ಬೇರೆ ಹೆರಿಗೆಯ ಸಂದರ್ಭದಲ್ಲಿ ಹೀಗೆ ಪ್ರತಿ ಹೆರಿಗೆಗೆ ಸರಕಾರವು ನಿಗದಿಸುವ ಹೆರಿಗೆ ಭತ್ಯೆಯನ್ನು ಕೊಡಲಾಗುವುದು.

ಇಬ್ಬರು ಮಕ್ಕಳು ಜೀವಂತ ಇದ್ದಾಗ 3ನೇ ಮಗುವನ್ನು ಹೆರುವ ಮಹಿಳೆಗೆ ಈ ಸೌಲಭ್ಯ ದೊರೆಯುವುದಿಲ್ಲ. ಹೆರಿಗೆ ಭತ್ಯೆಯನ್ನು ಮಂಜೂರು ಮಾಡುವ ಅಧಿಕಾರವನ್ನು ತಾಲ್ಲೂಕಿನ ಶಿಶು ಅಭಿವೃದ್ಧಿ ಅಧಿಕಾರಿ ಹೊಂದಿರುತ್ತಾರೆ. ಹೆರಿಗೆ ಭತ್ಯೆಯ ಸೌಲಭ್ಯವನ್ನು ಪಡೆಯ ಬಯಸುವ ಮಹಿಳೆಯು ಏನು ಮಾಡಬೇಕು?

ಅ. ಹೆರಿಗೆ ಭತ್ಯೆಯನ್ನು ಸೌಲಭ್ಯವನ್ನು ಪಡೆಯ ಬಯಸುವ ಮಹಿಳೆಯು ತನ್ನ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಮೊದಲೇ ತನ್ನ ಹೆಸರನ್ನು ದಾಖಲಿಸಬೇಕು. ಆ. ಮಹಿಳೆಯು ತಾನು ಗರ್ಭಿಣಿಯಾದ 6 ತಿಂಗಳ ಒಳಗಾಗಿ ನಿಗದಿತ ನಮೂನೆ ಎಂ.ಬಿ.–1 ರಲ್ಲಿ ಮಾಹಿತಿ ತುಂಬಿ ಅದನ್ನು ಅಂಗನವಾಡಿ ಕಾರ್ಯಕರ್ತೆ ಅಥವಾ ಹಿರಿಯ/ಕಿರಿಯ ಆರೋಗ್ಯ ಸಹಾಯಕಿ/ಕ ಇವರುಗಳಲ್ಲಿ ಯಾರಾದರೊಬ್ಬರಿಗೆ ಕೊಡಬೇಕು.

**ಗರ್ಭಿಣಿ ಹೆಂಗಸು ಕೊಟ್ಟಂತಹ ಅರ್ಜಿ ಹೇಗೆ ಕಾರ್ಯರೂಪಕ್ಕೆ ಬರುತ್ತದೆ?**

ಗರ್ಭಿಣಿ ಹೆಂಗಸು ಸಲ್ಲಿಸಿದ ಅರ್ಜಿಯನ್ನು ಮೇಲಿ ಹೆಸರಿಸಿರುವ ಅಧಿಕಾರಿಗಳು ತಮ್ಮ ಶಿಫಾರಸ್ಸಿನೊಂದಿಗೆ ವೈದ್ಯಾಧಿಕಾರಿಗಳಿಗೆ ಸಲ್ಲಿಸುತಾರೆ. ವೈದ್ಯಾಧಿಕಾರಿಗಳು ತಮ್ಮ ಶಿಫಾರಸ್ಸಿನೊಂದಿಗೆ ಮಂಜೂರಾತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಕಳುಹಿಸಿ ಕೊಡುತ್ತಾರೆ ಅವರು ಎಲ್ಲವನ್ನು ಪರಿಶೀಲಿಸಿ ಅರ್ಜಿದಾರಳು ಹೆರಿಗೆ ಭತ್ಯೆಗೆ ಅರ್ಹಳೆಂದು ಕಂಡು ಬಂದರೆ ಹೆರಿಗೆ ಭತ್ಯೆ ಮಂಜೂರು ಮಾಡುತ್ತಾರೆ.

5. ಬೆಂಕಿ ಅನಾಹುತ, ನೆರೆಹಾವಳಿ, ಸಿಡಿಲು ಬಡಿತ, ಅತಿವೃಷ್ಟಿ ಮುಂತಾದವುದಗಳಿಂದಾಗಿ ಹಾನಿಗೊಳಗಾದವರಿಗೆ ಪರಿಹಾರ ಬಡತನ ರೇಖೆಯ ಕೆಳಗೆ (Below poverty line) ಇರುವ ಬಡವರು ಬೆಂಕಿ ಅನಾಹುತ, ನೆರೆಹಾವಳಿ, ಅತಿವೃಷ್ಟಿ ಅಥವಾ ಸಿಡಿಲು ಬಡಿತ ಮುಂತಾದ ಪ್ರಕೃತಿ ವಿಕೋಪದ ಘಟನೆಗಳಿಂದಾಗಿ ತಮ್ಮ ಮನೆ ಅಥವಾ ಗುಡಿಸಲನ್ನು ಕಳೆದುಕೊಂಡಲ್ಲಿ ಅಂತಹವರು ಪರಿಹಾರವಾಗಿ ಸರಕಾರವು ಕಾಲಕಾಲಕ್ಕೆ ನಿಗದಿಸುವ ನಗದು ಹಾಗೂ ಕಟ್ಟಡ ಸಾಮಾಗ್ರಿಗಳನ್ನು ಪಡೆಯಲು ಹಣವನ್ನು ಪಡೆಯಲು ಹಕ್ಕುಳ್ಳವರಾಗುತ್ತಾರೆ.

ಅ. ಇಂತಹ ಕಾರಣದಿಂದಾಗಿ ಪ್ರಾಣಿಗಳ ಜೀವಹಾನಿಯಾದಲ್ಲಿ ಅವುಗಳ ಮಾಲೀಕನು ಮೃತಪ್ರಾಣಿ ಅಥವಾ ಪ್ರಾಣಿಗಳ ಮಾರುಕಟ್ಟೆಯ ಬೆಲೆಯ ಅರ್ಧದಷ್ಟನ್ನು ಪರಿಹಾರ ಧನವಾಗಿ ಪಡೆಯಲು ಹಕ್ಕುಳ್ಳವನಾಗುತ್ತಾನೆ. ಆ. ಮಾನವ ಜೀವ ಹಾನಿಯಾದಲ್ಲಿ ಮೃತ ವ್ಯಕ್ತಿಯ ವಾರಸುದಾರರು ಸರಕಾರವು ನಿಗದಿ ಪಡಿಸುವ ಪರಿಹಾರ ಧನ ಪಡೆಯಲು ಹಕ್ಕುಳ್ಳವರಾಗುತ್ತಾರೆ. ಇ. ಈ ಸೌಲಭ್ಯವನ್ನು ಪಡೆಯಲು ತಹಶೀಲ್ದಾರಿಗೆ ಅರ್ಜಿ ಸಲ್ಲಿಸಬೇಕು. ಈ. ಅರ್ಜಿದಾರರ ವಾರ್ಷಿಕ ಆದಾಯವು ಸರಕಾರವು ಕಾಲ ಕಾಲಕ್ಕೆ ನಿಗದಿತ ಆದಾಯಕ್ಕೆ ಮೀರಿರಬಾರದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು ಯಾವುವು?**

ಅರ್ಜಿಯೊಂದಿಗೆ ವಾರ್ಷಿಕ ಆದಾಯದ ಪ್ರಮಾಣ ಪತ್ರ. ಮನೆ ಅಥವಾ ಗುಡಿಸಲು ಸುಟ್ಟು ಬಗ್ಗೆ ಅಥವಾ ನೆರೆಹಾವಳಿ ಅಥವಾ ಅದು ಅತಿವೃಷ್ಟಿಯಿಂದಾಗಿ ಬಿದ್ದು ನಷ್ಟವಾದ ಬಗ್ಗೆ



ಪೋಲಿಸರು ತಯಾರಿಸಿದ ಪಂಚನಾಮಯು ನಿಜಪ್ರತಿ.

3. ಪ್ರಾಣಿಗಳ ಜೀವ ಹಾನಿಯಾಗಿದ್ದಲ್ಲಿ
ಸತ್ತ ಪ್ರಾಣಿಯ ಶವದ ಮರಣೋತ್ತರ ಪರೀಕ್ಷಾ ವರದಿಯ ನಿಜಪ್ರತಿ
ಸತ್ತ ಪ್ರಾಣಿಯ ಅಂದಾಜು ಮಾರುಕಟ್ಟೆಯ ಬೆಲೆಯ ಪ್ರಮಾಣ ಪತ್ರ.

4. ಮಾನವ ಜೀವ ಹಾನಿಯಾಗಿದ್ದಲ್ಲಿ
ಮೃತನ ಮರಣದ ಬಗ್ಗೆ ಸರ್ಟಿಫಿಕೇಟ್
ಮೃತನ ಶವದ ಮರಣೋತ್ತರ ಪರೀಕ್ಷಾ ವರದಿಯ ನಿಜಪ್ರತಿ
ಮೃತನ ವಾರಸುದಾರರ ವಾರಸಾ ಪ್ರಮಾಣ ಪತ್ರ

ಈ ಮುಂತಾದ ದಾಖಲಾತಿಗಳೊಂದಿಗೆ ಅರ್ಜಿಯನ್ನು ತಹಶೀಲ್ದಾರಿಗೆ ಸಲ್ಲಿಸಬೇಕು.

ಸೂಚನೆ: ಸೀನಿಯರ್ ಸಿಟಿಜನ್ (ವೃದ್ಧರು)

ತಮ್ಮ ವೃದ್ಧಾಪ್ಯದ ಬಗ್ಗೆ ಕಾರ್ಡುಗಳನ್ನು ಮಾಡಿಸಿಕೊಳ್ಳುವುದು ಅಗತ್ಯ. ಈ ಸೀನಿಯರ್ ಸಿಟಿಜನ್ ಕಾರ್ಡುಗಳನ್ನು ಮಾಡಿಸಿ ಕೊಂಡರೆ ಬಸ್ಸಿನಲ್ಲಿ, ರೈಲಿನಲ್ಲಿ, ವಿಮಾನದಲ್ಲಿ ಪ್ರಯಾಣ ಮಾಡುವಾಗಲೆಲ್ಲಾ ಪ್ರಯಾಣ ದರದಲ್ಲಿ ರಿಯಾಯಿತಿಯನ್ನು (Confession) ಪಡೆಯಬಹುದು. ಅಲ್ಲದೆ ಮಹಿಳೆಯರಿಗೆ ಪುರುಷರಿಗಿಂತ ಹೆಚ್ಚಿನ ರಿಯಾಯತಿ ದೊರೆಯುತ್ತದೆ. ಆಸ್ಪತ್ರೆ, ನರ್ಸಿಂಗ್ ಹೋಂ ಹಾಗೂ ಔಷದಿ ಅಂಗಡಿಗಳಲ್ಲಿಯೂ ಸಹ ರಿಯಾಯಿತಿ ದೊರೆಯುತ್ತದೆ.

**ಶ್ರೀಮತಿ ಕಮಲ ಪೀಟರ್ ಅಡ್ವಕೇಟ್**
**ಮೈಸೂರು.**





Success is a simple word but if we go through it, it has a deep meaning. Success is not what we know, but it is what we do". To get the success there are thousands of sterns to go, but directly we should not try for the thousandth step because as we know. "A thousand miles of journey just begins with one step." So for that matter we should go step by step. The main key for success is self confidence and hard work. Having these two we can easily reach up to the level success. If we go and ask the person who is leading a luxurious life and enjoying all world's happiness he is be able to tell the meaning of success: but a fellow who is living in a bad condition and yet waiting for success can easily define the word success. So we can say that success is sweetest for the person who constructs a road which carries every one near to success.

"Be simple and achieve great"

**Basavaraj, Galagin Assistant teacher**
**GHPS Devipura**

# ಓದಲು 9 p ಗಳು



1. **Promptness: ತಕ್ಷಣ** ಇಂದು ಓದುಬೇಕಾದುದನ್ನು ಇಂದು ಓದು. ನಾಳೆಗೆ ಮುಂದೂಡಬೇಡ.
2. **Priority: ಆದ್ಯತೆ** ವಿದ್ಯಾರ್ಥಿಯ ಪ್ರಥಮ ಕರ್ತವ್ಯ ಓದು
3. **Prayer: ಪ್ರಾರ್ಥನೆ** ಪ್ರತಿಸಲವೂ ಓದಲಾರಂಭಿಸಿದಾಗ ದೇವರನ್ನು ಸ್ಮರಿಸು.
4. **Planning: ಯೋಜನೆ** ಒಂದು ಗಂಟೆಯಲ್ಲಿ ಏಷ್ಟು ಓದಬೇಕೆಂಬುದನ್ನು ಮೊದಲೇ ಯೋಚಿಸು.
5. **Perspiration: ಪರಿಶ್ರಮ** ಯಶಸ್ಸಿಗೆ ರಾಜಮಾರ್ಗವಿಲ್ಲ ಶ್ರಮವಹಿಸಿ ಓದು.
6. **Purposeful press : ಧ್ಯೇಯೋದ್ದೇಶ** ಸ್ವಷ್ಟ ಗುರಿ ಹೊಂದಿ ಆ ಗುರಿ ಸಾಧನೆಗಾಗಿ ಓದು
7. **Peace: ಶಾಂತಿ** ಗೊಂದಲಕ್ಕೆ ಈಡಾಗದೆ ಶಾಂತ ಚಿತ್ತದಿಂದ ಓದು
8. **Perfection: ಪರಿಪೂರ್ಣತೆ** ಏಷ್ಟೇ ಓದಿದರೂ ಚೆನ್ನಾಗಿ ಅರ್ಥವಾಗುವಂತೆ ಓದು
9. **Past time: ಬಿಡುವಿನ ಸಮಯ** ದೇಹ ಮತ್ತು ಮನಸ್ಸಿಗೆ ವಿಶ್ರಾಂತಿ ನೀಡಿ ಓದು


**ಸೇಂಟ್ ಝಕಾರಿಯಾ ಪ್ರೌಢ ಶಾಲೆ ಪೋತ್ನಾಳ್**



*ಸತ್ಯಕ್ಕೆ ಮಾಡುವ ಒಂದೊಂದು ಅಪಚಾರವೂ ಸಮಾಜಕ್ಕೆ ಮಾಡುವ ಅಪಚಾರದಂತೆ–ಎಮರ್ಸನ್*

# ಕವನಗಳು

ತೋಟದಲ್ಲಿ ಹೂ ಚೆಂದ
ಹೂಗಳಲ್ಲಿ ದುಂಬಿ ಚೆಂದ
ನನಗೆ ನನ್ನ ಶಾಲೆ ಚೆಂದ.




ದೇವಮ್ಮ
5ನೇತರಗತಿ ಮರಕಂದಿನ್ನಿ.

ಭೂಮಿ ಮೇಲೆ ಬೆಳೆದ ಗಿಡ
ಭೂ ತಾಯಿಯ ಮರೆಯುವುದೇ
ಕರುನಾಡನಲ್ಲಿ ಬೆಳೆದ ಮಗು
ಕರುನಾಡ ಮರೆಯುವುದೇ
ದೇವಮ್ಮ
7ನೇತರಗತಿ ಮರಕಂದಿನ್ನಿ.

ಹೂ ಸಿಗುವುದು ತೋಟದಲ್ಲಿ,
ಮುತ್ತು ಸಿಗುವುದು ಸಾಗರದಲ್ಲಿ,
ನಾನು ನೀನು ಸಿಗುವುದು
ವಿಮುಕ್ತಿ ಮಕ್ಕಳ ಸಂಘದಲ್ಲಿ
ರೇಣುಕಾ
7 ನೇತರಗತಿ ಮರಕಂದಿನ್ನಿ

ಸತ್ಯನ್ಯಾಯ ಎಲ್ಲಿದೆ
ಅನ್ಯಾಯ ಕರ್ಮ ಹೆಚ್ಚಿದೆ
ದಾನ ಧರ್ಮಎಲ್ಲಿ ಉಳಿದಿದೆ
ಲೋಕದ ತುಂಬಾ ಪಾಪ ತುಂಬಿದೆ.



ಮಂಜುಳ
7ನೇತರಗತಿ ಮರಕಂದಿನ್ನಿ.


ಬರೆಯಲು ಪೆನ್ನು ಬೇಕು
ಓದಲು ಪುಸ್ತಕ ಬೇಕು
ಕಲಿಸಲು ಗುರುಗಳು ಬೇಕು
ಅದರ ಜೊತೆಗೆ ವಿಮುಕ್ತಿ
ಸಂಘಬೇಕು.
ಪ್ರಹ್ಲಾದ ತಂ. ಸಿದ್ದಪ್ಪ
ಸ.ಹಿ.ಪ್ರಾ.ಶಾಲೆ. ಜೀನೂರು

ಕಲೆಗಾರ್ತಿ ನಾನಲ್ಲ ಕವಿಯತ್ರಿ ನಾನಲ್ಲ
ಭಾವನೆಗಳೊಂದಿಗೆ ಬದುಕುವುದು
ಬಿಟ್ಟು ಬೇರೇನು ಗೊತ್ತಿಲ್ಲ
ಆಸ್ತಿಯೂ ನನಗಿಲ್ಲ ಆಸೆಯೂ ನನ್ನಗಿಲ್ಲ
ನಮ್ಮ ವಿಮುಕ್ತಿ ಸಂಸ್ಥೆ ಬಿಟ್ಟು
ಬೇರೇನು ಬೇಕಿಲ್ಲ
ಗೌರಮ್ಮ
ಶಿಕ್ಷಕಿ ಮರಕಂದಿನ್ನಿ.

ಕಥೆಗಾರನಿಗೆ ಕಥೆ ಕಟ್ಟುವ ಆಸೆ
ಹಾಡುಗಾರನಿಗೆ ಆಡುವ ಆಸೆ
ಡಾಕ್ಟರ್ ಗಳಿಗೆ ಹಣಗಳಿಸುವ ಆಸೆ
ಆದರೆ ನನಗೆ ವಿಜ್ಞಾನಿಯಾಗುವ ಆಸೆ
ಅನುಸೂಯ
7ನೇ ತರಗತಿ

ನೀರಿಗೆ ಹರಿಯುವ ಆಸೆ
ನವಿಲಿಗೆ ಕುಣಿಯುವ ಆಸೆ
ನನಗೆ ಶಾಲೆಗೆ ಹೋಗುವ ಆಸೆ
ಶಿವಲೀಲಾ
7ನೇ ತರಗತಿ

ಜೀವನ ಎಂಬುವುದು
ಒಂದು ಗಣಿತ ಸೂತ್ರ
ಕೆಟ್ಟದ್ದನ್ನು ಕಳೆದು
ಒಳ್ಳೆಯದನ್ನು ಕೂಡಿಸಿ
ಪ್ರೀತಿಯಿಂದ ಗುಣಿಸಿದಾಗ
ಸ್ನೇಹದಿಂದ ಭಾಗಿಸಿದಾಗ ಬರುವ ಮೊತ್ತವೆ
ಪ್ರೀತಿ, ಸ್ನೇಹ, ಗೆಳೆತನ.



ಜಗದೀಶ ತಂ. ಅಮರೇಶ 6 ನೇ
ತರಗತಿ ಸ.ಹಿ.ಪ್ರಾ.ಶಾಲೆ. ಉಟಕನೂರು

ಎದೆಯೊಳಗೆ ಆಗಾಗ ಸುಡುವ ಚಿಂತೆ
ಅದಕ್ಕೂ ಎಣ್ಣೆ ಹಾಕಿ ಬೆಂಕಿ ಇಡುವ ಜನತೆ
ಈ ಮಧ್ಯದಲ್ಲಿಯ ಬದುಕುವ ಕಾತುರತೆ
ಇದೆ ಮೂರು ದಿನದ ಬದುಕಿನ ಸಹಜತೆ
ತಿಳಿಯಬೇಕು ನೀ ಮನುಜನೇ
ಶ್ರೀದೇವಿ 7 ನೇ ತರಗತಿ
ಸ.ಹಿ.ಪ್ರಾ.ಶಾಲೆ. ದೇವಿಪುರ

ಕಮಲ ಇರುವುದು ಕೆಸರಿನಲ್ಲಿ
ಅರಮನೆ ಇರುವುದು ಮೈಸೂರಿನಲ್ಲಿ
ಕಬ್ಬನ್ ಪಾರ್ಕ್ ಇರುವುದು ಬೆಂಗಳೂರಿನಲ್ಲಿ
ನಾನು ಇರುವುದು ತಡಕಲ್ ಶಾಲೆಯಲ್ಲಿ
ಓಂಕಾರ , 6 ನೇ ತರಗತಿ
ಸ.ಹಿ.ಪ್ರಾ.ಶಾಲೆ. ತಡಕಲ್

ವಜ್ರದಂತೆ ಹೊಳೆಯುತ್ತಿರು
ತಾವರೆಯಂತೆ ಅರಳುತ್ತಿರು
ನೀರಿನಂತೆ ಹರಿಯುತ್ತಿರು
ಜೀವನದಲ್ಲಿ ಎಂದಿಗೂ ನೀ ಸೋಲದಿರು
ಮಂಜುಳ ತಂ. ಈಶ್ವರಯ್ಯ
7 ನೇ ತರಗತಿ

## ಹೊಟ್ಟೆ ಬಟ್ಟೆ

ರಾಜಕಾರಣಿಗಳು ಬೆಳೆಸುತ್ತಿದ್ದಾರೆ ಭ್ರಷ್ಟಚಾರದ ಹೊಟ್ಟೆ
ಶ್ರೀ ಸಾಮಾನ್ಯರ ಹೊಟ್ಟೆಗೆ ತಣ್ಣೀರು ಬಟ್ಟೆ
ಪಾಪ ನ್ಯಾಯ ದೇವತೆ ಕಟ್ಟಿಕೊಂಡಿದ್ದಾಳೆ ಕಣ್ಣಿಗೆ ಬಟ್ಟೆ
ಉಮಾ ಎಸ್.ಎಚ್.ಹೀರೆಮಠ
ವಿಮುಕ್ತಿ ಪರಿಹಾರ ಭೋದಕಿ ತಡಕಲ್



ನಮ್ಮನ್ನು ಪ್ರೀತಿಸುವವರನ್ನು ನಾವು ಪ್ರೀತಿಸುವುದು ದೊಡ್ಡದಲ್ಲ, ನಮ್ಮನ್ನು ದ್ವೇಷಿಸುವವರನ್ನು ಪ್ರೀತಿಸುವುದು ದೊಡ್ಡತನ– ಗಾಂಧೀಜಿ




'ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ದಿನಾಚರಣೆ ಜೂನ್21' "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು", "ಬೆಳೆಯ ಸಿರಿ ಮೊಳಕೆಯಲಿ ನೋಡು" ಇವುಗಳೆಲ್ಲಾ ಗಾದೆಯ ಮಾತುಗಳಾದರೂ ಬಹಳ ಅರ್ಥಪೂರ್ಣವಾದವುಗಳಾಗಿವೆ. ಈ ಗಾದೆಗಳೆಲ್ಲಾವೂ ಮಕ್ಕಳಿಗೆ ಅನ್ವಯಿಸುತ್ತವೆ. ಅದಕ್ಕಾಗಿಯೇ ಮಕ್ಕಳ ಬಗ್ಗೆ ಹೆಚ್ಚಿನ ಗಮನ ಹರಿಯಿಸಲು ಪ್ರತಿ ವರ್ಷವೂ ಜೂನ್ ತಿಂಗಳು 21 ನೇ ದಿನವನ್ನು 'ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳ ದಿನಾಚರಣೆ'ಯೆಂದು ಆಚರಿಸಲಾಗುತ್ತಿದೆ' ಮಕ್ಕಳು ಮಾನಸೀಕವಾಗಿ ಹಾಗೂ ಶಾರೀರಿಕವಾಗಿ ಆರೋಗ್ಯಕರವಾದ ಬೆಳವಣಿಗೆಯನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಮೊಟ್ಟ ಮೊದಲು ಮಕ್ಕಳ ಹಕ್ಕುಗಳ ಸಂರಕ್ಷಣೆ ಬಗ್ಗೆ ಯಾವ ಸಂಸ್ಥೆ ಆಸಕ್ತಿ ತೋರಿಸಿತು?

ಪ್ರಪ್ರಥಮವಾಗಿ ಮಕ್ಕಳ ಹಕ್ಕುಗಳ ಸಂರಕ್ಷಣೆ ಬಗ್ಗೆ 1924 ರಲ್ಲಿ ಜೆನಿವಾ ಘೋಷಣೆಯ ಸ್ವರೂಪದಲ್ಲಿ ಐದು ಪ್ರಮುಖ ಅಂಶಗಳನ್ನು "ದಿ ಲೀಗ್ ಆಫ್ ನೇಷನ್ಸ್" ನಿಂದ ಸ್ವೀಕರಿಸಲಾಗಿತ್ತು.

'ದಿ ಲೀಗ್ ಆಫ್ ನೇಷನ್ಸ್ ನಿಂದ ಸ್ವೀಕರಿಸಲಾದ 5 ಮುಖ್ಯ ಅಂಶಗಳು ಯಾವುವು?

'ದಿ ಲೀಗ್ ಆಫ್ ನೇಷನ್ಸ್' ಇಡೀ ಪ್ರಪಂಚದ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಿಗೆ ಅವಶ್ಯಕವಾದ ಈ ಕೆಳಗಿನ ಅಂಶಗಳನ್ನು ಗುರುತಿಸಲಾಯಿತು.

1. ಮಕ್ಕಳ ಭೌತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗಾಗಿ ಮಕ್ಕಳಿಗೆ ಅವಶ್ಯಕವಾದ ಸಾಧನಗಳನ್ನು ನೀಡಲ್ಪಡತಕ್ಕದ್ದು.
2. ಹಸಿದ ಶಿಶುವಿಗೆ ಆಹಾರ ನೀಡುವುದು. ಕಾಯಿಲೆಯಿಂದ ನರಳುತ್ತಿದ್ದ ಶಿಶುವಿಗೆ ಸಹಾಯ ಮಾಡತಕ್ಕದ್ದು. ತಪ್ಪು ಮಾಡಿದ ಮಗುವನ್ನು ಸನ್ಮಾರ್ಗಕ್ಕೆ ತರುವುದು ಮತ್ತು ಅನಾಥ ಮತ್ತು ನಿರ್ಗತಿಕ ಶಿಶುವಿಗೆ ರಕ್ಷಣೆ ಮತ್ತು ನೆರವು ನೀಡತಕ್ಕದ್ದು.
3. ತೊಂದರೆಯ ಕಾಲದಲ್ಲಿ ಪ್ರಥಮ ಪರಿಹಾರವು ಶಿಶುವಿಗೆ ನೀಡತಕ್ಕದ್ದು.
4. ಮಗುವಿಗೆ ಒಂದು ಜೀವನ ಆಧಾರವನ್ನು ಗಳಿಸುವ ಸ್ಥಿತಿಯನ್ನು ಒದಗಿಸಿ ಕೊಡತಕ್ಕದ್ದು ಮತ್ತು ಪ್ರತಿಯೊಂದು ರೀತಿಯ ಶೋಷಣೆ ವಿರುದ್ಧ ರಕ್ಷಿಸಲ್ಪಡತಕ್ಕದು.
5. ಮಕ್ಕಳ ಸಹಜ ಶಕ್ತಿಯನ್ನು ಮಾನವತೆಯ ಸೇವೆಗಾಗಿ ಉಪಯೋಗವಾಗುವಂತೆ ನೋಡತಕ್ಕದ್ದು ಮತ್ತು ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಮಕ್ಕಳನ್ನು ಪಾಲಿಸತಕ್ಕದ್ದು.

**1. ಶಿಶುವಿನ ಹಕ್ಕುಗಳ ಕುರಿತು 1959ರ ಘೋಷಣೆ ಏನು?** ಈ ಘೋಷಣೆಯಲ್ಲಿ ನಮೂದಿಸಿದ ಪ್ರತಿಯೊಂದು ಹಕ್ಕನ್ನು ಶಿಶುವು ಅನುಭವಿಸತಕ್ಕದ್ದು. ಅವುಗಳಲ್ಲಿ ಪ್ರಮುಖವಾದವು ಈ ಕೆಳಗಿನಂತಿವೆ.

1. ಪ್ರೀತಿಯನ್ನು ಪಡೆಯುವ ಹಕ್ಕು, 2. ಮಗುವು ವಿಶೇಷ ರಕ್ಷಣೆಯನ್ನು ಅನುಭವಿಸತಕ್ಕದ್ದು, ದೈಹಿಕ, ಮಾನಸಿಕ, ನೈತಿಕವಾಗಿ ಆಧ್ಯಾತ್ಮಿಕವಾಗಿ ಹಾಗೂ ಸಾಮಾಜಿಕ ಅಭಿವೃದ್ಧಿ ಗೊಳಿಸತಕ್ಕದ್ದು. 3. ಮಗುವು ತನ್ನ ಜನ್ಮದಾರಧ್ಯ ದೆಸರು. 4. ಸಾಮಾಜಿಕ ಭದ್ರತೆಯ ಪ್ರಯೋಜನಗಳನ್ನು ಅನುಭವಿಸತಕ್ಕದ್ದು. 5. ವಿದ್ಯಾಭ್ಯಾಸದ ಹಕ್ಕು. 6. ಮಗುವು ದೈಹಿಕವಾಗಿ, ಮಾನಸಿಕವಾಗಿ ಹಗೂ ಸಾಮಾಜಿಕವಾಗಿ ಅಂಗವಿಕಲವಾಗಿದ್ದರೆ, ಅದಕ್ಕೆ ವಿಶೇಷ ಉಪಚಾರ, ಶಿಕ್ಷಣ ಹಾಗೂ ಬೆಳವಣಿಗೆ ಪಡೆಯುವ ಹಕ್ಕು. 7. ಮಗುವು ತನ್ನ ವ್ಯಕ್ತಿತ್ವದ ಸಂಪೂರ್ಣ ವಿಕಾಸವನ್ನು ಪಡೆಯಲು ಪ್ರೀತಿ ಹಾಗೂ ಸಹಾನುಭೂತಿಯನ್ನು ಪಡೆಯುವ ಹಕ್ಕು. 8. ಎಲ್ಲಾ ಪರಿಸ್ಥಿಗಳಲ್ಲಿ ರಕ್ಷಣೆ ಮತ್ತು ಪರಿಹಾರ ಪಡೆಯುವ ಹಕ್ಕು. 9. ಮಗುವು ಎಲ್ಲಾ ಸ್ವರೂಪಗಳ ದುರ್ಲಕ್ಷ, ಕ್ರೌರ್ಯ, ಮತ್ತು ಶೋಷಣೆಯ ವಿರೋಧ ಸಂರಕ್ಷಿಸಲ್ಪಡುವ ಹಕ್ಕು. 10. ಅಪ್ರಾಪ್ತ ವಯುಸ್ಸಿನ ಮಕ್ಕಳನ್ನು ಉದ್ಯೋಗಕ್ಕೆ ಸೇರಿಸದಿರುವ ಹಕ್ಕು. ಮಗುವು ಯಾವುದೇ ಮೂಲವಂಶೀಯ ಮತೀಯ ಜಾತಿ ಮುಂತಾದ ತಾರತಮ್ಯದ ದೃಷ್ಟಿಕೋನದಿಂದ ರಕ್ಷಿಸಲ್ಪಡುವ ಹಕ್ಕು.

ಮುಖ್ಯವಾಗಿ ಮಗುವಿನ ಎಳೆಯ ಹೃದಯದಲ್ಲಿ ಮಾನವೀಯತೆ ಸಾಮರಸ್ಯ, ಸಹನೆ ಮಿತ್ರತ್ವದ ಭಾವದಲ್ಲಿ ಶಾಂತಿ ಹಾಗೂ ಸಾರ್ವತ್ರಿಕ ಪ್ರಜ್ಞೆಯನ್ನು ಬೆಳೆಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ.

**2. ಚಿಕ್ಕ ವಯುಸ್ಸಿನವರ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಅಧಿನಿಯಮ 2000 ಈ ಕಾನೂನು ಮಕ್ಕಳಿಗೆ ಕೊಡುವ ರಕ್ಷಣೆ ಏನು?**

ನಮ್ಮ ಭಾರತ ದೇಶವು ಮಕ್ಕಳ ಆರೈಕೆ ಮತ್ತು ಸಂರಕ್ಷಣೆಯನ್ನು ಗಮನದಲ್ಲಿಟ್ಟು ಕೊಂಡು ಸಂಯುಕ್ತ ರಾಷ್ಟ್ರಗಳ ಮಹಾ ಸಭೆಯು 20ನೇ ನವೆಂಬರ್ 1989ರಂದು ಶಿಶುವಿನ ಹಕ್ಕುಗಳ ಮೇಲೆ ಸಂಧಿಯನ್ನು ಸ್ವೀಕರಿಸಿದ ಆಧಾರದ ಮೇಲೆ ಈ ಅಧಿನಿಯಮವನ್ನು ಜಾರಿಯಲ್ಲಿ ತಂದಿದೆ.



ಈ ಅಧಿನಿಯಮದ ಪ್ರಕಾರ ಮಕ್ಕಳ ಬೆಳವಣಿಗೆಯ ಅವಶ್ಯಕತೆಗಳನ್ನು ಈಡೇರಿಸುವ ಮೂಲಕ ಅವರ ಆರೈಕೆ, ರಕ್ಷಣೆ ಮತ್ತು ಉಪಚಾರದ ಕುರಿತು ವ್ಯವಸ್ಥೆ ಮಾಡುವ ಕ್ರಮಗಳಿವೆ. ಮಗುವನ್ನು ಸಹಾನುಭೂತಿಯ ದೃಷ್ಟಿಕೋನದಿಂದ ನೋಡಿ, ಮಗುವಿನ ಸಂರಕ್ಷಣೆಗಾಗಿ ವಿವಿಧ ಸಂಸ್ಥೆಗಳ ಸ್ಥಾಪನೆಗೆ ಅವಕಾಶವನ್ನು ಒದಗಿಸಲಾಗಿದೆ. ಉದಾ: ನಿರೀಕ್ಷಣಾ ಗೃಹ, ಸುರಕ್ಷಣೆಯ ಸ್ಥಳಾಶ್ರಯ ಗೃಹ, ವಿಶೇಷ ಗೃಹ.

**ನಿರೀಕ್ಷಣಾ ಗೃಹ ಎಂದರೇನು?**

ನಿರೀಕ್ಷಣಾ ಗೃಹ ಎಂದರೆ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಒಂದು ಗೃಹ. ಇದನ್ನು ಕಾನೂನಿನೊಂದಿಗೆ ಸಂಘರ್ಷ ಮಾಡುತ್ತಿರುವ ಚಿಕ್ಕ ವಯಸ್ಸಿನವರಿಗಾಗಿ ಸ್ಥಾಪಿಸಲ್ಪಟ್ಟಿರುತ್ತದೆ. ಈ ಗೃಹವನ್ನು ರಾಜ್ಯ ಸರ್ಕಾರದಿಂದ ಸ್ಥಾಪಿಸಿದ್ದಾಗಿರಬಹುದು ಅಥವಾ ಒಂದು ಸ್ವಯಂ ಸೇವಕ ಸಂಘಟನೆಯಿಂದ ಸ್ಥಾಪಿತವಾಗಿ ಆ ರಾಜ್ಯ ಸರಕಾರದಿಂದ ಪ್ರಮಾಣೀಕರಿಸಲ್ಪಟ್ಟಿರುವ ಒಂದು ಗೃಹವಾಗಿರುತ್ತದೆ.

**ಸಂರಕ್ಷಣೆಯ ಸ್ಥಳ ಎಂದರೇನು?**

ಸಂರಕ್ಷಣೆಯ ಸ್ಥಳ ಎಂದರೆ ಇದು ಚಿಕ್ಕ ವಯಸ್ಸಿನವರಿಗಾಗಿ ಇರುವ ಒಂದು ಸುರಕ್ಷಿಯ ಸ್ಥಳವಾಗಿದೆ. ಈ ಸ್ಥಳದ ಅಧಿಕಾರ ಹೊಂದಿರುವವನು ಚಿಕ್ಕ ವಯಸ್ಸಿನವನು ( ಬಾಲ ಅಪರಾಧಿಗಳನ್ನು) ತಾತ್ಕಾಲಿಕವಾಗಿ ತಮ್ಮ ವಶದಲ್ಲಿ ಇಟ್ಟುಕೊಂಡು ಅವರ ಆರೈಕೆ ಮಾಡಲು ಇಚ್ಛೆ ಉಳ್ಳವರಾಗಿದ್ದು ಸರ್ಕಾರದ ಅನುಮತಿಯನ್ನು ಹೊಂದಿರುತ್ತಾರೆ.

**ಆಶ್ರಯ ಗೃಹಗಳು**

ಆಶ್ರಯ ಗೃಹ ಎಂದರೆ ಒಂದು ಗೃಹ– ಇದು ಪ್ರಸಿದ್ಧ ಮತ್ತು ಸಮರ್ಥ ಸಂಘಟನೆಗಳಿಂದ ತಮ್ಮ ಇಚ್ಛೆಯಿಂದ ಸ್ಥಾಪಿಸಿದಂತಾಗಿದೆ. ಇದಕ್ಕೆ ರಾಜ್ಯ ಸರ್ಕಾರವು ಆ ಗೃಹಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ನಡೆಸಲು ಅವುಗಳಿಗೆ ಸಹಾಯ ನೀಡುತ್ತದೆ. ಇಂತಹ ಗೃಹಗಳು ಚಿಕ್ಕ ವಯಸ್ಸಿನವರು ಮತ್ತು ಮಕ್ಕಳಿಗಾಗಿ ಸ್ಥಾಪಿಸಲ್ಪಟ್ಟಿರುವ ಡ್ರಾಪ್–ಇನ್–ಸೆಂಟರ್ ಆಗಿರುತ್ತದೆ.

**ವಿಶೇಷ ಗೃಹ ಎಂದರೇನು?**

ವಿಶೇಷ ಗೃಹ ಎಂದರೆ ಒಂದು ರಾಜ್ಯ ಸರಕಾರದಿಂದ ಸ್ಥಾಪಿಸಲಾಗಿರುವ ಒಂದು ಸಂಸ್ಥೆ ಅಥವಾ ಒಂದು ಸ್ವಯಂ ಸೇವಕ ಸಂಘಟನೆಯಿಂದ ಸ್ಥಾಪಿಸಲಾಗಿರುವ ಮತ್ತು ಆ ಸರಕಾರದಿಂದ ಪ್ರಮಾಣೀಕರಿಸಲಾಗಿರುವ ಒಂದು ಸಂಸ್ಥೆ. ಕಾನೂನಿನೊಂದಿಗೆ ಸಂಘರ್ಷ ಮಾಡುತ್ತಿರುವ ಚಿಕ್ಕ ವಯಸ್ಸಿನವರನ್ನು ಪಡೆಯಲು ಮತ್ತು ಅದರ ಮರು ವಸತಿ ಮಾಡಲು ಸ್ಥಾಪಿಸಲ್ಪಟ್ಟಿರುತ್ತದೆ. ಒಂದು ರಾಜ್ಯ ಸರ್ಕಾರವು ಸ್ವತ: ಅಥವಾ ಸ್ವಯಂ ಸೇವಕ ಸಂಘಟನೆಗಳೊಂದಿಗೆ ಒಂದು ಒಪ್ಪಂದದ ಅಧೀನ ಪ್ರತಿಯೊಂದು ಜಿಲ್ಲೆಯಲ್ಲಿ ಅಥವಾ ಜಿಲ್ಲೆಗಳ ಒಂದು ಗುಂಪಿಗಾಗಿ ಇಂತಹ ವಿಶೇಷ ಗೃಹಗಳನ್ನು ಸ್ಥಾಪಿಸಬಹುದು ಮತ್ತು ಅವುಗಳನ್ನು ನೋಡಿಕೊಳ್ಳಬಹುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ ಪ್ರತಿಯೊಂದು ರಾಷ್ಟ್ರವೂ ತನ್ನ ಮುಂದಿನ ಪೀಳಿಗೆಗಳಾದ ಚಿಕ್ಕ ವಯಸ್ಸಿನ ಮಕ್ಕಳಿಗಾಗಿ ನಾನಾ ಸವಲತ್ತನ್ನು, ಸೌಲಭ್ಯಗಳನ್ನು, ರಿಯಾಯತಿಗಳನ್ನು ಒದಗಿಸಿ ಕೊಡಲು ಬದ್ಧನಾಗಿರುತ್ತಾನೆ.

ಮಕ್ಕಳ ಸಂರಕ್ಷಣೆಯ ಬರೀ ಪೋಷಕ ವರ್ಗದವರಿಗೆ ಮಾತ್ರ ಮೀಸಲಾಗಿರದೆ ಅವರ ಜೊತೆಯಲ್ಲಿ ಸಂಪರ್ಕಿಸುವ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯಾಗಿರುತ್ತದೆ. ಇದರಲ್ಲಿ ತಾಯಿಯ ಪಾತ್ರವು ಮಹತ್ವದ್ದಾಗಿರುತ್ತದೆ. ತದನಂತರ ಶಿಕ್ಷಕ/ಶಿಕ್ಷಕಿಯರ ಪಾತ್ರವು ಘಣನೀಯವಾಗಿರುತ್ತದೆ.

"ಮನೆಯೇ ಮೊದಲ ಪಾಠಶಾಲೆ<br>
ಜನನೀ ತಾನೇ ಮೊದಲ ಗುರುವು<br>
ಜನನಿಯಿಂದ ಪಾಠ ಕಲಿತ ಮಗುವು ಧನ್ಯಳು/ನು<br>
ಇದರೊಡನೆ ತಂದೆಯ ಪಾತ್ರವೂ<br>
ಗಮನಾರ್ಹವಾದುದು"

**ಶ್ರೀಮತಿ ಕಮಲ ಪೀಟರ್ ಅಡ್ವಕೇಟ್**<br>
**ಮೈಸೂರು.**

# ಪ್ರಯತ್ನವೇ ದೇವರು



**ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ಪೋತ್ನಾಳ್ ಸಂಸ್ಥೆಯು ಮಾನ್ವಿತಾಲೂಕಿನ 14 ಹಳ್ಳಿಗಳ ಕಿರಿಯರಿಂದ ಹಿರಿಯರವರೆಗೆ ಶಿಕ್ಷಣದ ಅರಿವು ಮೂಡಿಸಿ, ಜ್ಞಾನದ ಕಿಚ್ಚನ್ನು ಹೆಚ್ಚಿಸಿ ಅವರ ಬದುಕಿಗೆ ಭದ್ರ ಬುನಾದಿ ಹಾಕಲು ನಿರಂತರ ಪ್ರಯತ್ನಿಸುತ್ತಿರುವ. ಮತ್ತು ಗ್ರಾಮೀಣ ಭಾಗದ ಯುವಕ ಯುವತಿಯರಿಗೆ ವೃತ್ತಿ ಪರ ಶಿಕ್ಷಣ ಜ್ಞಾನದಾಸೋಹ ಮಾಡುತ್ತಾ ಸಾಧಕರಿಗೆ ನಿರಂತರ ಸ್ಫೂರ್ತಿ ನೀಡುತ್ತಾ, ಸಮಾಜದಲ್ಲಿ ಸಾಧಕರಿಗೆ ಮಾನ ಸನ್ಮಾನಗಳನ್ನು ಮಾಡುತ್ತಾ, ಪ್ರತಿಭಾವಂತ ಮಕ್ಕಳನ್ನು ನಮ್ಮ ನಾಡಿನ ವಿವಿಧ ಸೇವೆಗಳಿಗೆ ಅರ್ಪಿಸುತ್ತಿರುವ ವಿಮುಕ್ತಿ ಸಂಸ್ಥೆಯ ಕಾರ್ಯವೈಖರಿ ಶ್ಲಾಘನೀಯ.**

**ಬಸವಲಿಂಗ ದುಮತಿ 7ನೇ ತರಗತಿ ವಿ.ಭಾ.ಹಿ.ಪ್ರಾ.ಶಾ.ದಿದ್ಗಿ**



**ಒಳ್ಳೆಯದನ್ನು ತಿಳಿದುಕೊಳ್ಳುವುದು ಕಷ್ಟವಲ್ಲ, ಜೀವನದಲ್ಲಿ ಅಳವಡಿಸಿಕೊಳ್ಳುವುದು ಕಷ್ಟ–ತುಸ್ಕಿಂಗ್**

# ವಿವಿಧ ವಿಕಲಚೇತನರಿಗೆ ಸರ್ಕಾರದಿಂದ ದೊರೆಯುವ ವಿವಿಧ ರೀತಿಯ ಸೌಲಭ್ಯಗಳು

ಸೌಲಭ್ಯಗಳು: ಅಂಧರಿಗೆ

1. ಉಚಿತ ಬಸ್ ಪಾಸ್ ಕೆ.ಎಸ್.ಆರ್.ಟಿ.ಸಿ. ಯನ್ನು ಸಂಪರ್ಕಿಸಿ
2. ವಾಕಿಂಗ ಸ್ಟಿಕ್, ಬ್ರೈಲ್ ಕೈ ಗಡಿಯಾರ, ಓದುವ ವಿದ್ಯಾರ್ಥಿಗಳಿಗೆ ಉಚಿತ ಟೇಫ್ ರೆಕಾರ್ಡರ್ ಮತ್ತು ಕ್ಯಾಸೆಟ್ ಕೊಡುವುದು. 1ರಿಂದ 10ನೇ ತರಗತಿಯವರೆಗೆ ಉಚಿತ ಬ್ರೈಲ್ ಪಠ್ಯಪುಸ್ತಕ, ಕನ್ನಡಕಗಳು, ಬ್ರೈಲ್ ಕಿಟ್ ಇವುಗಳಿಗೆ ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇಲ್ಲಿ ಸಂಪರ್ಕಿಸಬಹುದು.

**ವಾಕ್ ಮತ್ತು ಶ್ರವಣ ನ್ಯೂನ್ಯತೆಯುಳ್ಳವರಿಗೆ**

ಜಿಲ್ಲಾ ವಿಕಲಚೇತನರ ಮತ್ತು ಹಿರಿಯು ನಾಗರೀಕರ ಸಬಲೀಕರಣ ಇಲಾಖೆ ಇಲ್ಲಿ ಸಂಪರ್ಕಿಸಬಹುದು.

**ದೈಹಿಕ ನ್ಯೂನ್ಯತೆಯುಳ್ಳವರಿಗೆ**

ಕ್ಲಚಸ್, ವಾಕರ್, ಇಂಧ್ನ ಚಾಲಿತ ತ್ರಿಚಕ್ರವಾಹನ (ಟ್ರೈ ಸೈಕಲ್), ಸ್ವಯಂ ಚಾಲಿತ ತ್ರಿಚಕ್ರ ವಾಹನ, ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇಲ್ಲಿ ಸಂಪರ್ಕಿಸಬಹುದು.

ಮಾನಸಿಕ ವಿಕಲಚೇತನರಿಗೆ

ಜಿಲ್ಲಾ ವಿಕಲಚೇತನರ ಮತ್ತು ಹಿರಿಯು ನಾಗರೀಕರ ಸಬಲೀಕರಣ ಇಲಾಖೆ ಇಲ್ಲಿ ಸಂಪರ್ಕಿಸಬಹುದು.

➢ ಎಲ್ಲಾ ವಿವಿಧ ವಿಕಲಚೇತನರಿಗೆ ದೊರೆಯುವ ಸೌಲಭ್ಯಗಳು

✓ ವಿಕಲಚೇತನರ ಗುರುತಿನ ಚೀಟಿ, ಸಾಮಾನ್ಯ ಶಾಲೆಯುಲ್ಲಿ ಓದುವ ವಿಕಲಚೇತನ ವಿದ್ಯಾರ್ಥಿಗಳೀಗೆ ವಿದ್ಯಾರ್ಥಿ ವೇತನ (ಕೇಂದ್ರ ಮತ್ತು ರಾಜ್ಯ ಸರ್ಕಾರ), ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇ60ಕ್ಕಿಂತ ಹೆಚ್ಚು ಅಂಕಗಳಿಸುವ ವಿಕಲಚೇತನರಿಗೆ ಪ್ರತಿಭಾ ಪುರಸ್ಕಾರ, ಉಚಿತ ವೈದ್ಯಕೀಯ ಶ್ರುಷ್ಮೆ 15,000 ವರೆಗೆ ಆಧಾರ್ ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳುವ ವಿಕಲಚೇತನ ಅಭ್ಯರ್ಥಿಗಳಿಗೆ ಸಾಲ ಸೌಲಭ್ಯ. ರಾಷ್ಟ್ರೀಯ ವಿಶ್ವಸ್ತ ಮಂಡಳಿ (ಎನ್.ಟಿ.ಎ.) ಅಧಿನಿಯಮದಡಿಯಲ್ಲಿ ಆಟಿಸಂ, ಸೆರಿಬ್ರಲ್ ಪಾಲಿಸಿ, ಮಾನಸಿಕ ವಿಕಲಚೇತನರಿಗೆ, ಬಹುವಿಧದ ಅಂಗವಿಕಲತೆಯುಳ್ಳವರಿಗೆ ಸಾಲ ಸೌಲಭ್ಯ, ಶುಶ್ರುಸೆ, ಧನ ಸಹಾಯ, ಆರೋಗ್ಯ ಕಾರ್ಡ್ ಇತ್ಯಾದಿ ಸೌಲಭ್ಯ ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಇಲ್ಲಿ ಸಂಪರ್ಕಿಸಬಹುದು.

✓ ವಿಕಲಚೇತನರಿಗೆ ಮಾಸಾಶನ 40% ರಿಂದ 75% ವರೆಗೆ 400/-, 75% ರಿಂದ 100% ವರೆಗೆ 1,000/- ತಾಲ್ಲೂಕು ಕಛೇರಿಯನ್ನು ಸಂಪರ್ಕಿಸಬಹುದು.

✓ ಇತರೆ ಹಿಂದುಳಿದ ವರ್ಗಗಳ ವಸತಿ ನಿಲಯ (ಬಿ.ಸಿ.ಎಂ.ಹಾಸ್ಟೆಲ್) ರಾಷ್ಟ್ರೀಯ ವಿಕಲಚೇತನರ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯಿಂದ ಸ್ವ ಉದ್ಯೋಗ ಮಾಡ ಬಯುಸುವ ವಿಕಲಚೇತನ ಅಭ್ಯರ್ಥಿಗಳಿಗೆ ಸಾಲ ಸೌಲಭ್ಯ, ಜಿಲ್ಲಾ ಮಟ್ಟದ ಬಿ.ಸಿ.ಎಂ. ಇಲಾಖೆಯನ್ನು ಸಂಪರ್ಕಿಸಬಹುದು.

✓ ಅಂಧ್ರನ್ನು ಹೊರತು ಪಡಿಸಿ ಇತರೆ ಎಲ್ಲಾ ವಿಕಲಚೇತನರಿಗೆ ರಿಯಾಯತಿ ದರದಲ್ಲಿ ಬಸ್ ಪಾಸ್, ಕೆ.ಎಸ್.ಆರ್.ಟಿ.ಸಿ.ಯನ್ನು ಸಂಪರ್ಕಿಸಬಹುದು

✓ ರೈಲ್ವೆ ಪಾಸ್ (ರಿಯಾಯತಿ ದರದಲ್ಲಿ) ರೈಲ್ವೆ ಇಲಾಖೆಯನ್ನು ಸಂಪರ್ಕಿಸಬಹುದು

✓ ವಿಮಾನ ಪ್ರಯಾಣ (ರಿಯಾಯತಿ ದರದಲ್ಲಿ) ವಿಮಾನ ಇಲಾಖೆಯನ್ನು ಸಂಪರ್ಕಿಸಬಹುದು

✓ ಹಡಗು ಪ್ರಯಾಣ (ರಿಯಾಯತಿ ದರದಲ್ಲಿ) ನೌಕಯಾನ ಇಲಾಖೆಯನ್ನು ಸಂಪರ್ಕಿಸಬಹುದು

✓ ವಿಶೇಷ ಅನುದಾನಿತ ಶಾಲೆಗಳಲ್ಲಿ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ, ಅನುದಾನಿತ ವಿಶೇಷ ಶಾಲೆಗಳು

✓ ಗೃಹಾಧಾರಿತ ಶಿಕ್ಷಣ ( ಅತಿ ತೀವ್ರ ಸ್ವರೂಪದ ವಿಕಲಚೇತನರಿಗೆ) ಎಸ್.ಎಸ್.ಎ.ಯುನ್ನು ಸಂಪರ್ಕಿಸಬಹುದು

✓ ರಾಷ್ಟ್ರ ಮಟ್ಟದ ಉದ್ಯೋಗಗಳಲ್ಲಿ ಶೇ 5 ರಷ್ಟು ಮೀಸಲಾತಿ ಕೇಂದ್ರ ಸರ್ಕಾರವನ್ನು ಸಂಪರ್ಕಿಸಬಹುದು.

✓ ರಾಜ್ಯ ಮಟ್ಟದ ಉದ್ಯೋಗಗಳಲ್ಲಿ ಶೇ 3 ರಷ್ಟು ಮೀಸಲಾತಿ ರಾಜ್ಯ ಸರ್ಕಾರವನ್ನು ಸಂಪರ್ಕಿಸಬಹುದು.

✓ ಆಶ್ರಮ ಮನೆಗಳಲ್ಲಿ ವಿಕಲಚೇತನರಿಗೆ ಮೀಸಲಾತಿ ಗ್ರಾಮ ಪಂಚಾಯುತಿ, ನಗರಸಭೆ, ಇವರನ್ನು ಸಂಪರ್ಕಿಸಬಹುದು.

✓ ಸರ್ಕಾರದ ಎಲ್ಲಾ ಅಭಿವೃದ್ಧಿ ಯೋಜನೆ ಅಡಿಯಲ್ಲಿ ವಿಕಲಚೇತನರ ಅಭಿವೃದ್ಧಿಗಾಗಿ ಶೇ 3 ರಷ್ಟು ಧನ ಸಹಾಯ ಮೀಸಲಿರಿಸಲಾಗಿದೆ. ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ತಾಲೂಕ ಪಂಚಾಯತಿ, ಜಿಲ್ಲಾ ಪಂಚಾಯುತಿ, ಪುರಸಭೆ, ನಗರಸಭೆಗಳನ್ನು ಸಂಪರ್ಕಿಸಬಹುದು.

**ಹೆಚ್. ಸಿ. ಮಹೇಶ್. ಚಿಕ್ಕಮಗಳೂರು.**



*ಅವಕಾಶವು ಎದುರಾದಾಗ ಅದನ್ನು ಸದುಪಯೋಗಪಡಿಸಿಕೊಳ್ಳುವುದೇ ಯಶಸ್ವಿ ಜೀವನ ರಹಸ್ಯ–ಡಿಸ್ರೇಲಿ*

## ಪರಿಸರ



ಮನೆ ಮುಂದೆ ಗಿಡ ನೆಟ್ಟರೆ ಚೆಂದ,
ಅದಕ್ಕೆ ನೀರು ಹಾಕುವುದು ಇನ್ನೂ ಚೆಂದ,
ಮರವಾದ ಮೇಲೆ ಪ್ರತಿಫಲ
ಪಡೆಯುವುದು ಬಲು ಚೆಂದ.

**ಗೋಪಾಲ 8 ನೇ ತರಗತಿ**
**ಸ.ಹಿ.ಪ್ರಾ.ಶಾ.ಮುದ್ದನಗುಡಿ**

## ಸ್ವಾವಲಂಬನೆ

**ಸ್ತ್ರೀಯರೆಲ್ಲಾ ಹೊಂದಬೇಕಿದೆ ಸ್ವಾವಲಂಬನೆ,**
**ಸ್ವಾವಲಂಬನೆಯಿಂದ ದೂಡಬೇಕಿದೆ ಪರಾವಲಂಬನೆ,**
**ಸ್ವಾವಲಂಬನೆ ಹೊಂದಿದ ಸ್ತ್ರೀಯರಿಗೆ**
**ಹೇಳಬೇಕಿದೆ ಅಭಿನಂದನೆ**

**ಲಕ್ಷ್ಮೀ 7 ನೇ**
**ತರಗತಿಸ.ಹಿ.ಪ್ರಾ.ಶಾ.ಮುದ್ದನಗುಡಿ**

ಕಣ್ಣು ತೆರೆದರೆ ಜನನ,
ಕಣ್ಣು ಮುಚ್ಚಿದರೆ ಮರಣ,
ಇವೆರಡರ ನಡುವೇ ಇರುವುದೇ ವಿಮುಕ್ತಿ ಮಕ್ಕಳ ಸಂಘ
ಹೂ ಬಾಡಿತೆಂದು ಕಿತ್ತೆಸೆಯಬೇಡ,
ದೀಪ ಹಾರಿತೆಂದು ಪಣತಿ ಒಡೆಯಬೇಡ,
ವಿಮುಕ್ತಿ ಮಕ್ಕಳ ಸಂಸತ್ತು ದೂರಾಯಿತೆಂದು
ಬರಲು ಹಿಂಜರಿಯಬೇಡ
ದಿನ ದಿನ ಕಳೆದರೆ ವಾರ
ವಾರ ವಾರ ಕಳೆದರೆ ತಿಂಗಳು
ತಿಂಗಳು ತಿಂಗಳು ಕಳೆದರೆ ವರ್ಷ
ಹೊಸ ವರ್ಷದ ಶುಭಾಶಯಗಳು
school ಬಸ್ ಬರುವುದು ಮಕ್ಕಳಿಗಾಗಿ
ರೈಲು ಬರುವುದು ಪ್ರಯಾಣಿಕರಿಗಾಗಿ
ನಾನು ಶಾಲೆಗೆ ಹೋಗುವುದು
ಅಕ್ಷರ ಜ್ಞಾನಕ್ಕಾಗಿ

**ನಾಗರತ್ನ ತಂ. ಗೌಡಪ್ಪ 6ನೇ ತರಗತಿ**
**ಸ.ಹಿ.ಪ್ರಾ.ಶಾ. ಪೋತ್ನಾಳ್**

## ವಿಮುಕ್ತಿ ಮಕ್ಕಳ ಸಂಸತ್ತು

ಬಡವರು ಬಯಸುವುದು ಒಂದು ತುತ್ತು ಅನ್ನ,
ಶ್ರೀಮಂತರು ಬಯಸುವುದು ಕ್ಷಣಕ್ಷಣಕ್ಕೆ ಚಿನ್ನ.
ಆದರೆ ನಾನು ಬಯಸುವುದು ವಿಮುಕ್ತಿ ಮಕ್ಕಳ ಸಂಸತ್ತನ್ನ
ಪೋಲಿಸರು ಕಾಯುವುದು ಕಳ್ಳರನ್ನು,
ವೈದ್ಯರು ಕಾಯುವುದು ರೋಗಿಯನ್ನು,
ಶಿಕ್ಷಕರು ಕಾಯುವುದು ವಿದ್ಯಾರ್ಥಿಯನ್ನು
ಆದರೆ ನಾನು ಕಾಯುವುದು ವಿಮುಕ್ತಿ ಮಕ್ಕಳ ಸಂಸತ್ತನ್ನು

**ಸಿರಸಪ್ಪ 10 ನೇ ತರಗತಿ ಸ.ಹಿ.ಪ್ರಾ.ಶಾ. ಪೋತ್ನಾಳ್**

## ಸ್ವಲ್ಪ ಯೋಚಿಸು

ಕ್ರೋದ : ಬುದ್ದಿಯನ್ನು ತಿನ್ನುತ್ತದೆ
ಅಹಂಕಾರ: ಜ್ಞಾನವನ್ನು ತಿನ್ನುತ್ತದೆ.
ಪ್ರಾಯಶ್ಚಿತ: ಪಾಪವನ್ನು ತಿನ್ನುತ್ತದೆ.
ಮೋಹ: ಮರ್ಯಾದೆಯನ್ನು ತಿನ್ನುತ್ತದೆ.
ಲಂಚ: ಗೌರವವನ್ನು ತಿನ್ನುತ್ತದೆ.
ಚಿಂಕಿ: ಆಯುಷ್ಯವನ್ನು ತಿನ್ನುತ್ತದೆ.

**ಹೆಸರು: ಶ್ರೀ ಬಸವರಾಕ**
**5ನೇ ತರಗತಿ**
**ಸ.ಕಿ.ಪ್ರಾ.ಶಾ.ದೋತರಬಂಡಿ**

## ನಿಮಗಿದು ತಿಳಿದಿರಲಿ

ದೇವರಲ್ಲಿ ಭಕ್ತಿ ಇರಲಿ
ಹಿರಿಯರಲ್ಲಿ ಶ್ರದ್ಧೆ ಇರಲಿ
ಗುರುಗಳಲ್ಲಿ ಗೌರವ ಇರಲಿ
ನನ್ನಲ್ಲಿ ನಮ್ಮ ವಿಮುಕ್ತಿ ಬಳಗ ಇರಲಿ
ವಿದ್ಯೆಯೆಂಬುದು ಶ್ರದ್ದೆ
ಕಲಿಯಲು ಬಿಡಬೇಕು ನಿದ್ದೆ
ಕಲಿತರೆ ಸಿಗುವುದು ಗೌರವಾನ್ವಿತ ಹುದ್ದೆ.
ವಿದ್ಯೆಯೆಂಬುದು ಕಲೆ
ಅದನ್ನು ಕಲಿಯಲು ಬೇಕು ತಲೆ
ಕಲಿತರೆ ಸಿಗುವುದು ನಿನಗೆ ನಿಜವಾದ ಬೆಲೆ

**ಜ್ಯೋತಿ 7ನೇ ತರಗತಿ**
**ಸ.ಹಿ.ಪ್ರಾ.ಶಾ. ಪೋತ್ನಾಳ್**

ಪ್ರತಿಯೊಂದಕ್ಕೂ ಮೂಲ ಶಕ್ತಿ
ಶಕ್ತಿಯ ಮೂಲ ಜ್ಞಾನ
ಜ್ಞಾನದ ಮೂಲ ಶಿಕ್ಷಣ
ಶಿಕ್ಷಣದ ಮೂಲ ಶಿಕ್ಷಣ ಸಂಸ್ಥೆ
ಶಿಕ್ಷಣ ಸಂಸ್ಥೆಯ ಮೂಲ ಬೋಧಕ
ಬೋಧಕನ ಮೂಲ ವಿದ್ಯಾರ್ಥಿ
ವಿದ್ಯಾರ್ಥಿಯ ಮೂಲ ತರಗತಿ.

ಬಸವಲಿಂಗ
5ನೇ ತರಗತಿ
ಸ.ಕಿ.ಪ್ರಾ.ಶಾ.ದೋತರಬಂಡಿ

ನವ ಮಾಸಗಳ ಹೊತ್ತು
ಅಮ್ಮ ತಂದು ತುತ್ತಿಟ್ಟು
ಪ್ರೀತಿಯ ಮುತ್ತಿಟ್ಟು
ಗಲ್ಲಕ್ಕೆ ಚುಕ್ಕಿಯ ಇಟ್ಟು
ಬೆಳೆಸಿದೆ ನೀ ಅಮ್ಮ
ನೂರು ಜನ್ಮವೇ ಬರಲಿ
ಮತ್ತೆ ಜನಿಸುವೇ ನಿನ್ನ
ಕಂದನಾಗಿ



**ಗಂಗಮ್ಮ,**
**7ನೇ ತರಗತಿ**
**ಸ.ಹಿ.ಪ್ರಾ.ಶಾ. ಪೋತ್ನಾಳ್**



***ಪಡೆಯುವುದಕ್ಕಿಂತ ನೀಡುವುದು ಹೆಚ್ಚು ಒಳ್ಳೆಯದು-ಬೈಬಲ್***


## ಮರೆತೆ ಬಿಡ್ತೀರೋ

ಕುಂಬಾರ ಮಾಡಿದ ಮಣ್ಣಿನ ಮಡಿಕೆ
ಏನ್ ಚೆಂದಂತಿರೋ ಅದನು
ಏನ್ ಚೆಂದಂತಿರೋ ಸೃಷ್ಟಿ
ಮಾಡಿದ ದೇವರನ್ನೇ ಮರೆತೇ ಬಿಡ್ತೀರೋ
ಅಕ್ಕ ಸಾಲಿ ಮಾಡಿದ ಮೂಗಿನ ನತ್ತು
ಏನ್ ಚೆಂದಂತಿರೋ ಅದು ನೀವು
ಏನ್ ಚೆಂದಂತಿರೋ ಮೂಗು
ಮಾಡಿದ ದೇವರನ್ನೇ ಮರೆತೇ ಬಿಡ್ತೀರೋ
ದರ್ಜಿಯು ಹೊಲಿದ ಅಂಗಿಯ ತೊಟ್ಟು
ಏನ್ ಚೆಂದಂತಿರೋ ಅದು ನೀವು
ಏನ್ ಚೆಂದಂತಿರೋ ಚರ್ಮ
ಮಾಡಿದ ದೇವರನ್ನೇ ಮರೆತೇ ಬಿಡ್ತೀರೋ
ರೇಡಿಯೋ ಟಿ.ವಿ. ವಿಡಿಯೋ ನೋಡಿ
ಏನ್ ಚೆಂದಂತಿರೋ ಅದನು
ಏನ್ ಚೆಂದಂತಿರೋ ಬುದ್ದಿ
ಮಾಡಿದ ದೇವರನ್ನೇ ಮರೆತೇ ಬಿಡ್ತೀರೋ

**ಅಂಬಣ್ಣ ತಂ. ಹನುಮಂತ**
**7ನೇ ತರಗತಿ ಸ.ಹಿ.ಪ್ರಾ.ಶಾ. ಪೋತ್ನಾಳ್**

## ಮಾತಿನ ಸತ್ಯ

ಮಾತು ಮಾತು ಮಾತು
ಮಾತು ಮುತ್ತಾಗ ಬಲ್ಲದು
ಮಾತು ರತ್ನವಾಗ ಬಲ್ಲದು
ಅದೇ ಮಾತು ಶಿಕ್ಷೆಯಾಗ ಬಹುದು
ಅಥವಾ ರಕ್ಷೆಯಾಗ ಬಹುದು.
ಮಾತು ನುಡಿಯಬೇಕು
ನುಡಿದರೆ ಅರ್ಥವಿರಬೇಕು
ಇಲ್ಲದಿದ್ದರೆ ವ್ಯರ್ಥವಾಗುವುದು
ಮಾತು ಆಡ ಬೇಕು
ಹೆಚ್ಚಾಗಿ ಆಡಿದರೆ
ಬಾಯಿ ನೋವಾಗುವುದು
ಮಾತನ್ನು ಆಡದಿದ್ದರೆ
ಮನಸ್ಸು ನೋವಾಗುವುದು
ಆದ್ದರಿಂದ ಮಾತಿರಬೇಕು
ಅಂದರೆ ಮಿತಿಯಲ್ಲಿರಬೇಕು.



**ಮಲ್ಲಮ್ಮ 5ನೇ ತರಗತಿ**
**ಸ.ಕಿ.ಪ್ರಾ.ಶಾ.ದೋತರಬಂಡಿ**

## ಶಿಕ್ಷಕರೆಂದರೆ ಅಷ್ಟೆ ಸಾಕೆ?

**ಊರಲ್ಲಿರೊ ಮಕ್ಕಳನೆಲ್ಲ**
**ಒಟ್ಟಿಗೆ ಕೂಡಿಸಿಕೊಂಡು**
**ಶಾಲೆಲಿಟ್ಟು ಕಲಿಸಿದವರೆ**
**ನಿಮಗೆ ಬೇರೆ ಹೆಸರುಬೇಕೆ?**
**ಶಿಕ್ಷಕರೆಂದರೆ ಅಷ್ಟೆ ಸಾಕೆ**
**ಪುಟ್ಟ ಪುಟ್ಟ ಮನಸಿನಲ್ಲಿ**
**ನಗೆಯ ಹಸಿರ ಬಿತ್ತಿ ಅಲ್ಲಿ**
**ಪಠ್ಯ ಪುಸ್ತಕದ ಅಕ್ಷರ ಕಲಿಸಿ**
**ಜ್ಞಾನಧಾರೆ ಹರಿಸಿದವರೆ**
**ನಿಮಗೆ ಬೇರೆ ಹೆಸರುಬೇಕೆ?**
**ಶಿಕ್ಷಕರೆಂದರೆ ಅಷ್ಟೆ ಸಾಕೆ**
**ಮೇಲು ಕೀಳು ಬದಿಗೆ ಇಟ್ಟು**
**ಒಂದೇ ನಾವು ಎಂದುಕೊಂಡು**
**ಆಟ ಪಾಠ ಆಡಿಕೊಂಡು**
**ಭೂಮಿ ಮೇಲೆ ಬೆಳಗಿಸಿದವರೆ**
**ನಿಮಗೆ ಬೇರೆ ಹೆಸರುಬೇಕೆ?**
**ಶಿಕ್ಷಕರೆಂದರೆ ಅಷ್ಟೆ ಸಾಕೆ**
**ತಂದೆ ತಾಯಿ ಮಮತೆ ತುಂಬಿ**
**ಬಿಸಿಯ ಊಟ ಹೊಟ್ಟೆ ತುಂಬಿ**
**ಆರೋಗ್ಯದ ಅರಿವ ಬೆಳಸಿ**
**ಸ್ವ ಸಾಮಾರ್ಥ್ಯ ಬೆಳಸಿದವರೆ**
**ನಿಮಗೆ ಬೇರೆ ಹೆಸರುಬೇಕೆ?**
**ಶಿಕ್ಷಕರೆಂದರೆ ಅಷ್ಟೆ ಸಾಕೆ**

**ಶ್ರೀ ಮಾಲತೇಶ ಕೋಲಕಾರ ಸಹ**
**ಶಿಕ್ಷಕರು. ಸ.ಹಿ.ಪ್ರಾ.ಶಾ. ಉದ್ಬಾಳ್**

## ನಗೆ ಹನಿ

**ಐಡಿಯಾ...............**

ರಾತ್ರಿ ಸೊಳ್ಳೆಗಳ ಕಾಟ ತಡೆಯಲಾರದೆ
ತಿಮ್ಮ ಹಾಸಿಗೆಯಿಂದ ಮೇಲೆದ್ದು ಲೈಟು
ಹಾಕಿ ಗಟಗಟನೆ ವಿಷ ಕುಡಿದು ಹೇಳಿದ
ಈಗ ಕಡಿರಿ ಮಕ್ಳ ಎಲ್ರೂ ಸತ್ತೋಗ್ತೀರಾ

**ಸುದೀಪ ತಂ. ರುದ್ರಪ್ಪ 5 ನೇ**
**ತರಗತಿ ಸ.ಕಿ.ಪ್ರಾ.ಶಾ.ದೋತರಬಂಡಿ**



*ಪ್ರಾರ್ಥನೆಯು ಬೆಳಿಗ್ಗಿನ ಕೀಲಿಕೈಯಾಗಿರಲಿ ಮತ್ತು ಸಂಜೆಯ ಚಿಲಕವಾಗಿರಲಿ–ಮೆಥ್ಯು ಹೆನ್ರಿ*





# ಇದು ಬೇಕಾ?

ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಎನ್ನುವ ಗಾದೆ ಯಾವ ಅರ್ಥಕ್ಕೆ ಮಾಡಿದ್ದಾರೋ? ತಿಳಿಯದಾಗಿದೆ. ಇಲ್ಲಿ ಮಕ್ಕಳಿಗೆ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಯಾವುದೇ ರೀತಿಯ ರಕ್ಷಣೆ ಇಲ್ಲದೆ ಮುಗ್ದ ಮನಸ್ಸಿಗೆ ಆಘಾತವಾಗುತ್ತಿದೆ. ಯಾಕೆಂದರೆ ಮಕ್ಕಳನ್ನು ಮದುವೆ ಎನ್ನುವ ಸಂಸ್ಕಾರದಿಂದ ಜೊತೆಯಾದ ಗಂಡು ಹೆಣ್ಣು ತಮ್ಮ ಸಂಸಾರ ವೆಂಬ ಹೊಸ ಲೋಕವನ್ನು ಸೃಷ್ಟಿ ಮಾಡುತ್ತಾರೆ. ಅಲ್ಲಿ ತಮ್ಮ ಆಸೆ ಆಕಾಂಕ್ಷೆಗಳನ್ನು, ಮೋಜು ಮಸ್ತಿಯನ್ನು ಮಾಡುತ್ತಾ, ಅದಕ್ಕೆ ಪ್ರತಿಫಲವೆಂಬಂದತೆ ಒಂದು ಮಗುವನ್ನು ತಮ್ಮ ಪುಟ್ಟ ಸಂಸಾರಕ್ಕೆ ತರುತ್ತಾರೆ. ಮುಂದೆ ಇವರು ಆಮಗುವಿಗೆ ಬೇಕು ಬೇಕಾದವುಗಳನ್ನು ನೀಡಲು ಸಮರ್ಥರು ಅಥವಾ ಅಸಮರ್ಥರು ಎನ್ನುವುದೇ ಪ್ರಶ್ನೆಯಾಗಿದೆ. ಮಗುವು ಮಗುವಾಗಿದ್ದಾಗ ಅದಕ್ಕೆ ಬೇಕಾದ ಲಾಲನೆ ಪಾಲನೆ ಮಾಡುವ ತಂದೆ ತಾಯಿಗಳು ಮುಂದೆ ಆ ಮಗುವಿಗೆ ಯಮದೂತರಂತೆ ಭಾಸವಾಗುತ್ತಾರೆ. ಇದಕ್ಕೆ ಪೂರಕವೆಂಬಂತೆ ಪ್ರತಿನಿತ್ಯ ನಾವು ನೋಡುವ ಮಕ್ಕಳ ಮೇಲಿನ ಹಲ್ಲೆಗಳು ದೌರ್ಜನ್ಯಗಳು, ಅತ್ಯಾಚಾರಗಳು ಮುಂತಾದವುಗಳು. ತಾಯಿಯೇ ಭೂಮಿ ಮೇಲಿನ ದೇವರು ಎನ್ನುವ ಮಾತು ಯಾರೋ ಅನನುಭವಿಗಳು ಹೇಳಿದ ಮಾತಿನಂತಿದೆ. ಯಾಕೆಂದರೆ ತಾಯಿ ತನ್ನ ಮಗಳನ್ನು ಹಿಂಸಿಸುವುದು, ಕಿರುಕುಳ ನೀಡುವುದು, ಮಾರಾಟ ಮಾಡುವುದು. ಮಕ್ಕಳಿಗೆ ವಿಷ ಉಣಿಸಿ ಮಕ್ಕಳ ಪ್ರಾಣ ತೆಗೆಯುವುದು, ದೈಹಿಕ ಶಿಕ್ಷೆ ನೀಡುವುದು ಮುಂತಾದವುಗಳು ಇತ್ತೀಚಿನ ದಿನಗಳಲ್ಲಿ ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ತುಂಬಿಹೋಗಿವೆ. ಮಗುವು ತನ್ನ ಮಾತು ಕೇಳಲಿಲ್ಲ ಎನ್ನುವ ಕ್ಷುಲ್ಲಕ ಕಾರಣಗಳಿಗೆ. ಮಗುವು ತನ್ನ ಆಸೆಯನ್ನು ತೀರಿಸಿಕೊಳ್ಳಲು ಮಗುವು ಸಣ್ಣ ಪುಟ್ಟ ತಪ್ಪುಗಳನ್ನು ಮಾಡಿದರೆ ಆ ಮಗುವನ್ನು ಶಿಕ್ಷಿಸುವುದು ಎಷ್ಟರ ಮಟ್ಟಿಗೆ ಸರಿ. ಉದಾ: ಮನೆಯಲ್ಲಿ ೫ ರೂಪಾಯಿಯ ಚಾಕಲೇಟ್ ತಿಂದದಕ್ಕೆ ತಾಯಿಯಾದವಳು ಆಮಗುವಿಗೆ ಯಮನಂತೆ ವರ್ತಿಸಿರುವುದು, ಮನೆಯಲ್ಲಿ ಮಗಳನ್ನು ಕೂಡಿಹಾಕಿ ಅವಳಿಗೆ ಸರಿಯಾಗಿ ಆಹಾರ, ನೀರು, ವಿದ್ಯಾಭ್ಯಾಸ ನೀಡದ ಚಿತ್ರಹಿಂಸೆ ನೀಡುವುದು ಎಷ್ಟು ಸರಿ. ಇಂತಹ ತಾಯಿ ಬೇಕಾ?

ತಂದೆಯು ಮಗುವನ್ನು ಎಲ್ಲಾ ರೀತಿಯಲ್ಲೂ ಬೆಳೆಸಲು ಪ್ರಮುಖ ಪಾತ್ರವಹಿಸುತ್ತಾನೆ. ಮಗುವಿನ ಭವಿಷ್ಯ ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸುತ್ತಾನೆ. ತಂದೆಯು ಒಬ್ಬ ಶಿಸ್ತಿನ ಸಿಪಾಯಿ ಎಂದೆಲ್ಲ ಬಿಂಬಿಸುತ್ತಾರೆ. ಆದರೆ ತಂದೆಯಾದವರು ಮಗುವಿಗೆ ಮಾನಸಿಕ, ದೈಹಿಕ, ಶೈಕ್ಷಣಿಕವಾಗಿ, ಆರೋಗ್ಯಕರವಾಗಿ ಬೆಳೆಯುವಲ್ಲಿ ಎಷ್ಟರ ಮಟ್ಟಿಗೆ ಪಾತ್ರವಹಿಸುತ್ತಾನೆ ಎನ್ನುವುದು ಪ್ರಶ್ನೆ? ತನ್ನ ಮಗುವನ್ನು ಆತ ಸಣ್ಣ ಕೆಲಸದಿಂದ ಅಂದರೆ ಅಂಗಡಿಯಿಂದ ಬೀಡಿಯನ್ನು ತರುವುದರಿಂದ ಹಿಡಿದು ಮಗುವು ಸಾರಾಯಿ ಅಂಗಡಿಗೆ ಹೋಗಿ ಸಾರಾಯಿ ತರುವವರೆಗೆ ಮತ್ತು ಮನೆಕೆಲಸ ಮತ್ತು ಹೊಲದ ಕೆಲಸಗಳಿಂದ ಹಿಡಿದು ಕೂಲಿಕಾರ್ಮಿಕನಾಗಿ ದುಡಿದು ಹಣ ಸಂಪಾದಿಸುವವರೆಗೆ ತಂದೆಯಾದವನು ಆ ಮಗುವನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ. ಅಲ್ಲದೇ ಮಗುವಿನ ಕ್ರೂರವಾಗಿ ಆಕ್ರಮಣ ಮಾಡಿ ಆ ಮಗುವನ್ನು ಆಘಾತಗೊಳಿಸುವುದು. ಉದಾ: ಸ್ವಂತ: ಮಗನನ್ನೆ ಬ್ಲೇಡಿನಿಂದ ದೇಹದ ಮೇಲೆ ಹಲ್ಲೆಯನ್ನು ಮಾಡಿ, ಹೊಡೆದು ಬಡಿದು ಚಿತ್ರಹಿಂಸೆ ನೀಡಿ ಸತ್ತನೆಂದು ಹಾಸಿಗೆಯಲ್ಲಿ ಸುತ್ತಿ ಹೋದ ತಂದೆ, ಮಗಳ ಮೇಲೆ ಅತ್ಯಾಚಾರವೆಸಗಿದ ತಂದೆ, ಮಗಳನ್ನು ಮಾರಾಟ ಮಾಡಿದ ಪಾಲಕರು, ಲಿಂಗ ತಾರತಮ್ಯದಿಂದ ಹೆಣ್ಣು ಮಕ್ಕಳನ್ನು ಕೂಲಿ ಕೆಲಸಕ್ಕೆ ದೂಡಿ ಬಾಲಕಾರ್ಮಿಕರನ್ನಾಗಿ ಮಾಡಿದ ತಂದೆ, ಹೀಗೆ ಅನೇಕ ವಿಷಯಗಳು ನಮ್ಮ ಕಣ್ಣುಂದೆ ಇವೆ. ಇಂತಹ ತಂದೆ ಬೇಕಾ?

ಶಿಕ್ಷಣದಲ್ಲಿ ಮಕ್ಕಳನ್ನು ಶಿಕ್ಷಿಸುವುದು ಇದರ ಹೊರತಾಗಿಲ್ಲ. ಯಾಕೆಂದರೆ ಭೂಮಿಯ ಮೇಲೆ ಗುರುವಿಗೆ ಅತ್ಯುತ್ತಮ ಸ್ಥಾನ ಮಾನವನ್ನು ಮೊದಲಿಂದಲೂ ನಮ್ಮ ಸಮಾಜ ನೀಡಿದೆ ಮತ್ತು ಗೌರವಿಸುತ್ತದೆ. ಯಾಕೆಂದರೆ ಮಗು ಒಳ್ಳೆಯ ನಾಗರೀಕನಾಗಿ ಬೆಳೆಯಲು, ಸಮಾಜದ ಮತ್ತು ದೇಶದ ಒಳ್ಳೆಯ ಸಂಪನ್ಮೂಲವಾಗಲು ಶಿಕ್ಷಣದಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ. ಪ್ರತಿಯೊಬ್ಬ ಮಗು ಕಲಿಯಬೇಕು ಕಲಿತು

***ಮಾನವನನ್ನು ದೇವರು ತನ್ನ ಪ್ರತಿಬಿಂಬದಂತೆ ಸೃಷ್ಟಿಸಿದ–ವಾಡಿಕೆಯ ಮಾತು***

ಮಗುವು ಸ್ವಾವಲಂಬಿಯಾಗಿ ಬೆಳೆಯಬೇಕು ಎನ್ನುವುದು ಪ್ರತಿಯೊಬ್ಬ ತಂದೆ ತಾಯಿ ಮತ್ತು ಸರ್ಕಾರದ ಉದ್ದೇಶವಾಗಿದೆ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಮಗುವಿಗೆ ರಕ್ಷಣೆ ಇದೆಯೇ ಎನ್ನುವುದು ಒಂದು ದೊಡ್ಡ ಪ್ರಶ್ನೆ. ಯಾಕೆಂದರೆ ಪ್ರತಿನಿತ್ಯ ಮಕ್ಕಳ ಮೇಲಿನ ಶಿಕ್ಷಕರ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ. ಗುರುವಾದವನು ಮಗುವನ್ನು ಮಗುವಿನಂತೆ ಕಾಣದೆ ಮಗುವನ್ನು ಕಾಮದ ದೃಷ್ಟಿಯಿಂದ, ಮಗುವನ್ನು ಪ್ರಾಣಿಯಂತೆ ಕಂಡ ಆನೇಕ ಉದಾಹರಣೆಗಳಿವೆ. ಅದರಲ್ಲಿ ಹೆಣ್ಣು ಮಕ್ಕಳ ಮೇಲೆ ದೈಹಿಕ ದೌರ್ಜನ್ಯಗಳು ಹೆಚ್ಚುತ್ತಿವೆ. ಉದಾ: ಶಾಲೆಯ ಮುಖ್ಯಗುರುಗಳು ಅಪ್ರಾಪ್ತ ಹೆಣ್ಣು ಮಗುವಿನ ಮೇಲೆ ಅತ್ಯಾಚಾರವೆಸಗಿ ಆ ಮಗುವನ್ನು ಪ್ರತಿನಿತ್ಯ ತನ್ನ ಲೈಂಗಿಕ ಕ್ರಿಯೆಗೆ ಬಳಸಿ ಕೊನೆಗೆ ಮಗುವನ್ನು ಗರ್ಭಿಣಿ ಗೊಳಿಸಿ ಆ ಹೆಣ್ಣು ಮಗಳ ಜೀವನವನ್ನು ಹಾಳು ಮಾಡಿದ, ಶಾಲೆಯಲ್ಲಿ ಮಕ್ಕಳನ್ನು ವಿಚಿತ್ರವಾಗಿ ಹಿಂಸಿಸುವ ಘಟನೆಗಳು ಪ್ರತಿನಿತ್ಯ ನಾವು ಮಾಧ್ಯಮದಲ್ಲಿ ಕಾಣುತ್ತೇವೆ. ಇಂತಹ ಶಿಕ್ಷಕರು ಅಥವಾ ಗುರುಗಳು ಬೇಕಾ?

ಅತೀ ಹೆಚ್ಚಾಗಿ ಮಕ್ಕಳು ದೌರ್ಜನ್ಯ ಮತ್ತು ತೊಂದರೆಗಳಿಗೆ ಬಲಿಪಶುಗಳಾಗುವುದು ಸಮಾಜದಲ್ಲಿ. ಮಕ್ಕಳು ಎಂದರೆ ಮುಗ್ದ ಮತ್ತು ಬಲಹೀನ ಎನ್ನುವ ಕೀಳು ಮಟ್ಟದ ಪ್ರಜ್ಞೆಯಿಂದ. ಮಕ್ಕಳನ್ನು ಯಾವ ರೀತಿಯಲ್ಲಾದರೂ ಸುಲಭವಾಗಿ ವಂಚಿಸಬಹುದು ಮತ್ತು ತಮ್ಮ ಕಾರ್ಯವನ್ನು ಸುಲಭವಾಗಿ ಸಾಧಿಸಬಹುದು ಎನ್ನುವ ಭಾವನೆಯಿಂದ. ಮಕ್ಕಳು ಹಲವಾರು ರೀತಿಯಲ್ಲಿ ಸಮಸ್ಯೆಗೆ ಸಿಲುಕುತ್ತಾನೆ. ಕುಟುಂಬದಲ್ಲಿ ಏಷ್ಟೇ ಸುರಕ್ಷತೆ ಇದ್ದರೂ ಸಮಾಜದಲ್ಲಿ ಅದನ್ನು ಕಾಣಲು ಸಾಧ್ಯವಿಲ್ಲ. ಕಾರಣ ಕಾನೂನಿನ ಸುವ್ಯವಸ್ಥೆ ಕಾರ್ಯರೂಪದಲ್ಲಿರದಿರುವುದರಿಂದ. ನಮ್ಮ ಸಮಾಜದಲ್ಲಿ ಮಕ್ಕಳು ಯಾವ ರೀತಿ ಸಮಸ್ಯೆಯಲ್ಲಿ ಸಿಲುಕಿದರು ಅದನ್ನು ತುಂಬಾ ಸಣ್ಣ ಮನೋಭಾವದಿಂದ ನೋಡುವುದು. ಮಕ್ಕಳಿಗೆ ಯಾವ ಸಮಸ್ಯೆಯಾದರು ಅದು ಸಮಸ್ಯೆಯಾಗಿ ಪರಿಗಣಿಸುವುದಿಲ್ಲ ಅದು ಒಂದು ಮನೋರಂಜನೆ ನೀಡುವ ಸಂಗತಿಯಾಗಿ ಬಿಡುತ್ತದೆ. ಕಾರಣ ಕೇಳಿದರೆ ಅದು ಇನ್ನೂ ಮಗು. ಆ ಮಗುವಿಗೆ ಏನೂ ಗೊತ್ತಾಗುವುದಿಲ್ಲ ಎನ್ನುವ ತಸ್ಕಾರ, ಕೀಳು ಮನೋಭಾವನೆಯಿಂದ ಮಗುವಿಗೆ ರಕ್ಷಣೆಯ ಪ್ರಶ್ನೆ ಯಕ್ಷ ಪ್ರಶ್ನೆಯಾಗಿದೆ. ಬಾಲಕಾರ್ಮಿಕತೆ, ಜೀತಪದ್ಧತಿ, ಬಾಲ್ಯವಿವಾಹ ಮುಂತಾದ ಸಾಮಾಜಿಕ ಸಮಸ್ಯೆಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದಿರುವುದು. ಶಿಕ್ಷಣದಲ್ಲಿ ಮಗುವಿಗೆ ಪ್ರೋತ್ಸಾಹ ಸಿಗದಿರುವುದು. ಆರೋಗ್ಯ ದೃಷ್ಟಿಯಲ್ಲಿ ಮತ್ತು ಮೂಲಭೂತ ಸೌಕರ್ಯ ಒದಗಿಸುವಲ್ಲಿ, ಮಕ್ಕಳ ಹಕ್ಕಿಗೆ ಬೆಲೆಯೇ ಇಲ್ಲದ ಈ ಸಮಾಜ ಬೇಕಾ?

ಮಕ್ಕಳ ಹೋರಾಟದ ಹಾದಿ ಪ್ರತಿದಿನವೂ ಹೆಚ್ಚುತ್ತಾ ಮತ್ತು ಮಕ್ಕಳ ಸಂರಕ್ಷಣೆಗೆ ಕಾನೂನು ಯೋಜನೆ ಸಿದ್ದಪಡಿಸುವ ನಿಟ್ಟಿನಲ್ಲಿ, ಮಕ್ಕಳ ಹಕ್ಕಿಗಾಗಿ ಸಂಘಸಂಸ್ಥೆಗಳು ಏಷ್ಟೋಂದು ಯೋಜನೆಗಳನ್ನು ರೂಪಿಸಿ ಶ್ರಮಿಸಿದರೂ ಇಂತಹ ಪ್ರಕರಣಗಳು ನಡೆಯುತ್ತಿರುವುದು ದುರಾದೃಷ್ಟಕರ. ಮಕ್ಕಳ ಹಕ್ಕುಗಳು ಜಾರಿಯಾಗಬೇಕು, ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗಬಾರದು ಎನ್ನುವುದು ಮಾತ್ರ ಬಾಯಿ ಚಪಲದ ಮಾತಾಗಿದೆ. ಇದರಲ್ಲಿ ನಮ್ಮ ಸುತ್ತಮುತ್ತಲಿನ ವಾತವರಣವು ಮಗುವಿಗೆ ಪೂರಕವಾಗಿ ಎಲ್ಲೂ ರೂಪಗೊಂಡಿಲ್ಲ. ಅದರಲ್ಲಿ ಕುಟುಂಬದಲ್ಲಿ ತಂದೆ ತಾಯಿಗಳು ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ವಹಿಸದೇ ತಮ್ಮದೇ ಅದ ಆಲೋಚನೆ, ತಮ್ಮ ಪಾಲಿನ ಕರ್ತವ್ಯಗಳು, ಅರ್ಥಿಕವಾಗಿ ಮುಂದುವರಿಯುವುದು ಇಲ್ಲವೆ ದುಚ್ಛಾಟಗಳ ದಾಸರಾಗಿ ಕುಟುಂಬದ ಹೀನಾಯಸ್ಥಿತಿಗೆ ಕಾರಣವಾಗುವುದು, ಮಕ್ಕಳನ್ನು ಜೀತ ಪದ್ಧತಿ, ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ ಗಳಂತಹ ಸಾಮಾಜಿಕ ಅನಿಷ್ಟಗಳಲ್ಲಿ ದೂಡುವುದು. ಉತ್ತಮ ಭವಿಷ್ಯ ಪಡೆಯುವುದು ಪ್ರತಿಯೊಂದು ಮಗುವಿನ ಜನ್ಮಸಿದ್ದ ಹಕ್ಕು ಎನ್ನುವರು. ಆದರೆ ಶಿಕ್ಷಣಕ್ಕೆ ಬೇಕಾದ ಕೊಠಡಿಗಳು, ಶಿಕ್ಷಕರು, ವೈದ್ಯಕೀಯ ಸೌಲಭ್ಯ, ಸಾರಿಗೆ ವ್ಯವಸ್ಥೆ, ಮೂಲಭೂತ ಸೌಕರ್ಯಗಳು ಇಲ್ಲದೆ ಉತ್ತಮ ಭವಿಷ್ಯ ಪಡೆಯಲು ಹೇಗೆ ಸಾಧ್ಯ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಯೋಜನೆಗಳನ್ನು ಸಂಬಂಧ ಪಟ್ಟ ಅಧಿಕಾರಿಗಳು ತಮಗೆ ಬೇಕಾದ ರೀತಿಯಲ್ಲಿ ರೂಪಿಸಿ ಅವುಗಳನ್ನು ಕಾಗದದ ಹಾಳೆಯ ಮೇಲೆ ಅನುಷ್ಠಾನ ಮಾಡಿ ಯೋಜನೆಯ ಪ್ರಗತಿಯನ್ನು ಬಿಂಬಿಸುತ್ತಾರೆ. ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ಸಮಯದಲ್ಲಿ ಅಪರಾಧಿಗಳಿಗೆ ಶಿಕ್ಷೆಯನ್ನು ನೀಡಿ ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿದೆ. ಕುಟುಂಬದಲ್ಲಿ ಮಕ್ಕಳ ಮೇಲೆ ನಡೆಯುವ ತಂದೆ ತಾಯಿಗಳ ದೌರ್ಜನ್ಯವಾಗಿರಬಹುದು, ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ದೌರ್ಜನ್ಯಗಳಾಗಿರಬಹುದು ಮತ್ತು ಸಾಮಾಜಿಕ ದೌರ್ಜನ್ಯಗಳಾಗಿರಬಹುದು. ಇಂತಹ ದೌರ್ಜನ್ಯಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಸಂಬಂಧ ಪಟ್ಟವರು ಶ್ರಮಿಸಬೇಕಾಗಿದೆ. ಮಗುವಿನ ರಕ್ಷಣೆಯಲ್ಲಿ ದಿಸೆಯಲ್ಲಿ ಅಧಿಕಾರಿ ವರ್ಗಗಳು ಹವಾನಿಯಂತ್ರಣ ಕೋಣೆಯಲ್ಲಿ ಏಷ್ಟು ಬಾರಿ ಚರ್ಚಿಸಿದರು ಪ್ರಯೋಜನವಿಲ್ಲ. ಯಾಕೆಂದರೆ ನೀವು ಮಕ್ಕಳಲ್ಲ. ಇವುಗಳು ನಿಮ್ಮ ಸಮಸ್ಯೆಗಳಲ್ಲ, ಇವುಗಳು ಮಕ್ಕಳ ಸಮಸ್ಯೆಗಳು, ಮಕ್ಕಳೇ ಸಮಾಜದಲ್ಲಿ ನಿಂತು ಮಾತನಾಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿ ಮಕ್ಕಳ ಸಮಸ್ಯೆಗಳನ್ನು ಆಲಿಸಿ ಪರಿಹಾರಿಸಬೇಕಾಗಿದೆ. ಇಲ್ಲದೆದ್ದರೆ ಪ್ರಗತಿ ಪರ ರಾಷ್ಟ್ರಗಳಲ್ಲಿ ಭಾರತ ಒಂದು ಎನ್ನುವುದು ಏಷ್ಟರ ಮಟ್ಟಿಗೆ ಸಮಂಜಸ. ಭವ್ಯ ಭಾರತ ಭವಿಷ್ಯ ಮಗುವಿಗೆ ಇಂತಹ ಸಮಾಜಿಕ ವ್ಯವಸ್ಥೆ ಬೇಕಾ?

**ಶ್ರೀ ಜಯಶೀಲ ದೋತರಬಂಡಿ**
**ವಿಮುಕ್ತಿ ಸಿಬ್ಬಂದಿ ಪೋತ್ನಾಳ್**

*ಈ ಜಗತ್ತಿನಲ್ಲಿ ಅತಿ ವಿಚಿತ್ರ ಪ್ರಾಣಿ ಎಂದರೆ ಮಾನವ-ವಾಡಿಕೆಯ ಮಾತು*

# ರಸ ಪ್ರಶ್ನೆ




1. ಕರ್ನಾಟಕದ ಪ್ರತಿಷ್ಠಿತ ನಾಗರೀಕ ಪ್ರಶಸ್ತಿ ಯಾವುದು?
2. ಮಗುವಿನ ಕಾನೂನಿನ ನಿರೂಪಣೆ ಏನು?
3. ವಿಶ್ವದಲ್ಲಿ ಶಸ್ತ್ರಾಸ್ತ್ರಗಳ ( ಆಯುಧಗಳ ) ಪ್ರಧಾನ ರಫ್ತುದಾರರು ಯಾರು?
4. 1961 ರಲ್ಲಿ ಯಾವ ದೇಶ ಭಾಹ್ಯಕಾಶಕ್ಕೆ ಮೊದಲ ಮಾನವನನ್ನು ಕಳುಹಿಸಿತು?
5. ಯಾವ ಪ್ರಾಣಿಯ ಚಲನವಲನ ಬಗ್ಗೆ ಪ್ರಕೃತಿ ವಿಜ್ಞಾನಿಗಳು ಕಡಿಮೆ ತಿಳಿದಿದ್ದಾರೆ?
6. ಸೂರ್ಯನ ಒಳ ಗರ್ಭದಲ್ಲಿನ ತಾಪಮಾನ ಎಷ್ಟು?
7. ಸಿಕ್ಕಿಂ ಯಾವ ವರ್ಷ ಭಾರತದ 22 ನೇ ರಾಜ್ಯವಾಯಿತು?
8. ವ್ಯಾಪಾರದ ಒಪ್ಪಂದಗಳಲ್ಲಿ ಹಿಂಗೈಏಟು ಅಥವಾ ಪರೋಕ್ಷ ದಾಳಿ ಎಂದರೇನು?
9. ಕರ್ನಾಟಕ ಪ್ರಥಮ ಸಾಕ್ಷರ ಜಿಲ್ಲೆ ಯಾವುದು?
10. ಕರ್ನಾಟಕದ ಗಾಂಧಿ ಯಾರು?
11. ಆಲ್ ಗೋಲ್ ಎಂದರೇನು?
12. ಮನುಷ್ಯನನ್ನು ಸೇರಿಕೊಂಡು ಯಾವ ಪ್ರಾಣಿ ಅತ್ಯಂತ ಧೀರ್ಘಕಾಲ ಗರ್ಭವದಿಯನ್ನು ಹೊಂದಿದೆ?
13. ಕಪ್ಪು ಹಂಸಗಳು ಹೇರಳವಾಗಿ ಎಲ್ಲಿ ಕಂಡು ಬರುತ್ತವೆ?
14. ನಮ್ಮ ಗ್ಯಾಲಕ್ಸ್‌ಯಲ್ಲಿನ ಅತ್ಯಂತ ದೊಡ್ಡ ಗ್ರಹ ಯಾವುದು?
15. ಕರ್ನಾಟಕದ ಅತ್ಯಂತ ಎತ್ತರವಾದ ಶಿಖರ ಯಾವುದು?

ಉತ್ತರಗಳು:

**1. ಕರ್ನಾಟಕ ರತ್ನ, 2. 18 ವರ್ಷಗಳಿಂದ ಕಡಿಮೆ ವಯಸ್ಸಿ ಶಕ್ತಿ, 3. ಯು.ಎಸ್.ಎಸ್.ಆರ್, 4.ಯು.ಎಸ್.ಎಸ್.ಆರ್, ಯುರಿಗಾಗರೀನ್ ವೊಸ್ಟೋರ್, 5. ಗೊರಿಲ್ಲ, 6. 16 ಮಿಲಿಯನ್ 0 ಕೆ, 7. 1975, 8. ಒಂದು ಲಂಚ, 9. ದಕ್ಷಿಣ ಕನ್ನಡ, 10. ಹರ್ಡಿಕರ್ ಮಂಜಪ್ಪ, 11. ಆಲ್ಗೋರಿತ್ ಮಿಟಿಕ್, ಕಂಪ್ಯೂಟರ್ ಪ್ರೋಗ್ರಾಮ್ ಬಾಷೆ, 12. ಆಫ್ರಿಕಾದ ಆನೆ (640 ದಿನಗಳು), 13. ಆಸ್ಟ್ರೇಲಿಯಾದ ಸಮುದ್ರ ತೀರದ ಸುತ್ತ, 14. ಗುರು, ಭೂಮಿಕ್ಕಿಂತ 11 ಪಟ್ಟು ದೊಡ್ಡದು ಮತ್ತು 318 ಪಟ್ಟು ಭಾರವಾಗಿದೆ, 15. ಚಿಕ್ಕಮಂಗಳೂರಿನ ಮುಳ್ಳಯ್ಯನಗಿರಿ.**

# ರಾಷ್ಟ್ರ ಗೀತೆಯ ಆರ್ಥ



1 ನೇ ಸಾಲು

**ಜನಗಣ ಮನ ಅಧಿನಾಯಕ ಜಯಹೇ**
**ಭಾರತ ಭಾಗ್ಯವಿಧಾತ**

**ಅರ್ಥ: ಜನ ಸಮೂಹದ ಅದೃಷ್ಟದ ಸರ್ವೋಚ್ಚ ಒಡೆಯನೇ, ನಮ್ಮೆಲ್ಲರ ಆತ್ಮಗಳ, ಭಾರತ ಜನತೆಯ ನಾಯಕ ನೀನೆ**

2 ನೇ ಸಾಲು

**ಪಂಚಾಬ ಸಿಂಧು ಗುಜರಾತ ಮರಾಠ**
**ದ್ರಾವಿಡ ಉತ್ಕಲ ವಂಗ**

**ಅರ್ಥ: ಪಂಜಾಬ, ಸಿಂಧು, ಗುಜರಾತ, ಮರಾಠ, ದ್ರಾವಿಡ, ಒಡಿಶಾ ಹಾಗೂ ಬಂಗಾಳದ ಹೃದಯಗಳಲ್ಲಿ ನಿನ್ನ ಹೆಸರು ತುಂಬಿ ತುಳಕುತ್ತದೆ.**

3 ನೇ ಸಾಲು

**ವಿಂಧ್ಯ ಹಿಮಾಚಲಯ ಯಮುನಾ ಗಂಗಾ**
**ಉಚ್ಚಲ ಜಲದಿ ತರಂಗ**
**ತವ ಶುಭ ನಾಮೇ ಜಾಗೇ**
**ತವ ಶುಭ ಆಶಿಶ ಮಾಗೇ**

**ಅರ್ಥ: ವಿಂಧ್ಯ ಹಾಗೂ ಹಿಮಾಲಯದ ಶಿಖರಗಳಲ್ಲಿ ನಿನ್ನ ( ಭಾರತದ ಚಿರ ಸಾರಥಿ) ಮಂಗಳ ಕರ ಹೆಸರು ಪ್ರತಿಧ್ವನಿಸುತ್ತದೆ. ಯಮುನೆ ಹಾಗೂ ಗಂಗಾ ನದಿಗಳ ಹರಿಯುವ ಸಂಗೀತದಲ್ಲಿ ನಿನ್ನ ಹೆಸರು ಸಮ್ಮಿಲಗೊಂಡಿದೆ. ಭಾರತದ ಸಮುದ್ರದ ಪ್ರತಿ ಅಲೆಯು ನಿನ್ನ ಹೆಸರನ್ನು ಸ್ತುತಿಸುತ್ತದೆ.**

4 ನೇ ಸಾಲು

**ಗಾಹೆ ತವ ಜಯ ಗಾಥಾ**

ಅರ್ಥ: **ನಿನ್ನ ಹಾರೈಕೆಗಾಗಿ ಅವು ಪ್ರಾರ್ಥಿಸುತ್ತವೆ. ನಿನ್ನನ್ನು ಹೊಗಳುತ್ತವೆ.**

5 ನೇ ಸಾಲು

**ಜನ ಗಣ ಮಂಗಲ ದಾಯಕ ಜಯಹೇ**
**ಭಾರತ ಭಾಗ್ಯವಿಧಾತ**

ಅರ್ಥ: **ಜನಸಮೂಹದ ರಕ್ಷಣೆ ನಿನ್ನ ಮೇಲಿದೆ. ಓ, ಭಾರತಕ್ಕೆ ಭಾಗ್ಯವನ್ನು ಕರುಣಿಸುವವನೇ**

6 ನೇ ಸಾಲು


**ಜಯ ಹೇ ಜಯ ಹೇ ಜಯ ಹೇ**
**ಜಯ ಜಯ ಜಯ ಜಯ ಹೇ**

ಅರ್ಥ: **ನಿನಗೆ ಜಯವಾಗಲಿ ಜಯವಾಗಲಿ ಜಯವಾಗಲಿ**
**( ನೀನೆ ನಮ್ಮ ಭಾಗ್ಯದ ದೇವರು, ನೀನೆ ನಮ್ಮನ್ನು ಆಳುವವನು,**
**ನಾವು ನಿನ್ನ ಸೇವಕರು ಹಾಗಾಗಿ ನಿನಗೆ ಯಾವಾಗಲೂ ಜಯ ಸಿಗಲೇಬೇಕು)**

**ಸಂಗ್ರಹ**



*ಉದ್ದೇಶವಿಲ್ಲದ ಬದುಕೇ ತನ್ನ ಹೆಣವನ್ನು ತಾನೆ ಹೊತ್ತಂತೆ.–ಗಾಯಟೆ*





ಉದ್ಬಾಳ್ ಎಡ್ಲಪುರ
7ನೇ ತರಗತಿ



ಸಂತೋಷ್
ಸ.ಹಿ.ಪ್ರಾ.ಶಾಲೆ,
ಉದ್ಬಾಳ,
ಬಡ್ಲಪುರ




ಈರಮ್ಮ



ಕು। ಚನ್ನಬಸಮ್ಮ, 8ನೇ ತರಗತಿ
ಸ.ಹಿ.ಪ್ರಾ.ಶಾಲೆ, ತಡಕಲ್



ಸದಾಶಿವ, 3ನೇ ತರಗತಿ,
ಸ.ಕ್ರಿ.ಪ್ರಾ.ಶಾಲೆ, ದೋತರಬಂಡಿ



ಚಕ್ರವರ್ತಿ ಡಿ.ಕೆ., 5ನೇ ತರಗತಿ
ಸ.ಕ್ರಿ.ಪ್ರಾ.ಶಾಲೆ, ದೋತರಬಂಡಿ




ಕಾಶಿನಾಥ್, 7ನೇ ತರಗತಿ,
ಸ್ನೇಹಜ್ಯೋತಿ ವಿದ್ಯಾಲಯ



ಶಶಿರೇಖಾ, 3ನೇ ತರಗತಿ, ಉದ್ಬಾಳ್



ಅಶ್ವಿನಿ
6ನೇ ತರಗತಿ
ಸ.ಹಿ.ಪ್ರಾ.ಶಾಲೆ,
ತಡಕಲ್



ದುರುಗಮ್ಮ
6ನೇ ವರ್ಗ




ಪಟ್ಟಿ ವೀರಮ್ಮ 7ನೇ ತರಗತಿ

~~~~~~~~~~~~~~~~~~~~~~~~~~~~~~~~~~~~~~~~~~~~~~~~~

*ಒಬ್ಬ ವ್ಯಕ್ತಿಯ ಜ್ಞಾನ ತಿಳಿಯಲು ಅವನ ಮಾತೇ ಅಳತೆಗೋಲು– ಡಾ:ಜಾನ್ಸನ್*
~~~~~~~~~~~~~~~~~~~~~~~~~~~~~~~~~~~~~~~~~~~~~~~~~

# ಚರಿತ್ರೆ - ಮಕ್ಕಳ ಹಕ್ಕುಗಳು ನಡೆದು ಬಂದ ದಾರಿ




**ಮಕ್ಕಳ ಹಕ್ಕುಗಳು :** ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಮುಖವಾಗಿ ಕಂಡು ಬರುವುದು ಒಂದರಿಂದ ಇನ್ನೊಂದನ್ನು ಬೇರ್ಪಡಿಸಲಾಗದ ನಾಲ್ಕು ಮೂಲ ಹಕ್ಕುಗಳ ಗುಂಪುಗಳು

1) ಬದುಕುವ ಹಕ್ಕುಗಳು : ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ, ಪೌಷ್ಟಿಕ ಆಹಾರ ಪಡೆಯುವ, ಒಂದು ಹೆಸರು ಹೊಂದಿರುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.

2) ರಕ್ಷಣೆಯ ಹಕ್ಕುಗಳು : ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ, ತುರ್ತು ಸಂದರ್ಭಗಳಲ್ಲಿ ಮತ್ತು ಸಶಸ್ತ್ರ ಘರ್ಷಣೆಗಳಾದಾಗ ರಕ್ಷಣೆ.

3) ವಿಕಾಸ ಹೊಂದು ಹಕ್ಕುಗಳು : ಶಿಕ್ಷಣ, ಶೈಶವದಲ್ಲಿ ಬೆಳೆಯಲು ಅವಕಾಶ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ.

4) ಭಾಗವಹಿಸುವ ಹಕ್ಕುಗಳು : ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ, ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗುವ ಮತ್ತು ಧಾರ್ಮಿಕ ನಂಬುಗೆಯ ಹಕ್ಕುಗಳು.

*ಮನುಷ್ಯ ಮನುಷ್ಯನಿಗೆ ಒಳ್ಳೆಯದು ಮಾಡುವಾಗ ದೇವರಿಗೆ ಸಮಾನವಾಗುತ್ತಾನೆ.–ಸಿಸಿರೋ*